~~[illegible]~~

[illegible] ~~[illegible]~~

[illegible]

ವಾಲ್ಮೀಕಿ ಮುನಿಗಳ ಸೀತಾಯನ

ಎನ್. ರಂಗನಾಥಶರ್ಮಾ

ಭಾರತೀಯ ಪರಂಪರೆಯಲ್ಲಿ ತಮ್ಮ ಉದಾತ್ತ ಗುಣಗಳಿಂದ ಪುರಾಣಪ್ರಸಿದ್ಧರೂ ಇತಿಹಾಸ ಪ್ರಸಿದ್ಧರೂ ಆದ ಬಹುಮಂದಿ ಮಹಿಳೆಯರಿದ್ದಾರೆ. ಸಮಾಜವು ಮೆಚ್ಚಿದ ಉಚ್ಚತಮ ಶೀಲಸಂಪತ್ತು, ಉನ್ನತವಾದ ನಡೆವಳಿಕೆ, ಸಾಮಾನ್ಯರಲ್ಲಿ ದುರ್ಲಭವೆನಿಸುವ ಲೋಕೋತ್ತರ ಚಾರಿತ್ರ ಅವರ ಪ್ರಸಿದ್ಧಿಗೆ ಕಾರಣ.

ಭಾರತೀಯ ಸಂಸ್ಕೃತಿಯು ಸ್ತ್ರೀಯರಲ್ಲಿ ನಿರೀಕ್ಷಿಸಿದ್ದ ಒಂದು ಮಹಾಗುಣವೆಂದರೆ ಪಾತಿವ್ರತ್ಯ. ಅದು ಎಲ್ಲ ಗುಣಗಳಿಗೂ ಮೂರ್ಧನ್ಯವೆಂದು ನಮ್ಮವರು ನಂಬಿದ್ದರು. ಕಾಯೇನ, ವಾಚಾ, ಮನಸಾ ಪತಿಯನ್ನೇ ನಂಬಿ ಆತನ ಹಿತವನ್ನೇ ಬಯಸುತ್ತ, ಅವನ ಶ್ರೇಯಸ್ಸಿಗಾಗಿ ತನ್ನ ಸರ್ವಸ್ವವನ್ನೂ–ಪ್ರಾಣವನ್ನೂ ಸಹ–ಅರ್ಪಿಸಲು ಸಿದ್ಧವಾದ ಒಂದು ಮನೋಧರ್ಮ ಪಾತಿವ್ರತ್ಯವೆನಿಸಿತ್ತು. ಇಂದಿನವರ ಚಿಂತನೆ ಹೇಗಾದರೂ ಇರಲಿ, ಹಿಂದಿನವರು ಒಪ್ಪಿದ್ದು ಇದು.

ಪಾತಿವ್ರತ್ಯವು ಒಂದು ತಪಸ್ಸೆಂದೂ ಕಠೋರವಾದ ಈ ತಪಸ್ಸಿನ ಬಲವಿರತಕ್ಕ ಮಹಿಳೆಗೆ ಅಲೌಕಿಕಸಿದ್ಧಿಗಳೂ ಶಕ್ತಿಸಾಮರ್ಥ್ಯಗಳು ಲಭಿಸುತ್ತವೆಂದೂ ಅಂದಿನವರು ನಂಬಿದ್ದರು. ಅನಸೂಯೆ ತ್ರಿಮೂರ್ತಿಗಳನ್ನು ಶಿಶುಗಳನ್ನಾಗಿ ಪರಿವರ್ತಿಸಿದ್ದು, ಸಾವಿತ್ರಿ ಮೃತನಾದ ತನ್ನ ಗಂಡನನ್ನು ಮತ್ತೆ ಬದುಕಿಸಿಕೊಂಡದ್ದು – ಈ ತಪಸ್ಸಿನ ಸಿದ್ಧಿಗಳು. ಇಂತಹ ಹಲವಾರು ಉದಾಹರಣೆಗಳನ್ನು ಪುರಾಣಗಳಲ್ಲಿ ನೋಡಬಹುದು. ಪಾತಿವ್ರತ್ಯದ ರಕ್ಷಣೆಗಾಗಿಯೇ ಸಾವಿರಾರು ಭಾರತೀಯ ಮಹಿಳೆಯರು ಆತ್ಮಾರ್ಪಣೆಮಾಡಿ ಮಹಾಸತಿಯರೆನಿಸಿದ್ದು ಇತಿಹಾಸಪ್ರಸಿದ್ಧ.

'ಸರ್ವಗುಣಾನ್ವಿತೆ'

ಧರ್ಮಶಾಸ್ತ್ರಗಳೂ ನೀತಿಶಾಸ್ತ್ರಗಳೂ ಸ್ತ್ರೀಪುರುಷರಲ್ಲಿರಬೇಕಾದ ಸದ್ಗುಣಗಳನ್ನೂ ತ್ಯಾಜ್ಯವಾದ ದುರ್ಗುಣಗಳನ್ನೂ ಎಣಿಸಿ ಎಣಿಸಿ ಪಟ್ಟಿಮಾಡಿ ಹೇಳುತ್ತವೆ. ಆದರೆ ಅಂತಹ ಗುಣಾನ್ವಿತರೂ ದೋಷವರ್ಜಿತರೂ ಆದ ಸ್ತ್ರೀಪುರುಷರು ಲೋಕದಲ್ಲಿದ್ದಾರೆಯೆ? – ಎಂಬ ಪ್ರಶ್ನೆ ಸಹಜವಾಗಿ ನಮ್ಮನ್ನು ಕಾಡುತ್ತದೆ. ವಾಲ್ಮೀಕಿ ಮುನಿಗಳನ್ನೂ ಈ ಪ್ರಶ್ನೆ ಕಾಡಿತ್ತು. ಅವರು ನಾರದರಿಗೆ ಪ್ರಶ್ನೆ ಹಾಕಿದ್ದು ಈ ಕಾರಣದಿಂದಲೇ. ಸರ್ವಗುಣಾನ್ವಿತನಾದ ಒಬ್ಬ ಆದರ್ಶ ಪುರುಷನು ಈ ಲೋಕದಲ್ಲಿದ್ದಾನೆಯೇ ?–ಎಂಬುದು ಅವರ ಪ್ರಶ್ನೆ. ಈ ಪ್ರಶ್ನೆ ಮಹಿಳೆಗೂ ಉಪಲಕ್ಷಣ. ಸರ್ವಗುಣಾನ್ವಿತಳಾದ ಸ್ತ್ರೀಯೊಬ್ಬಳಿದ್ದಾಳೆಯೇ?– ಎಂಬ ಜಿಜ್ಞಾಸೆಯೂ ಜೊತೆಗೆ ಬರುವುದು

ಸಹಜ. ಈ ಎರಡು ಪ್ರಶ್ನೆಗಳಿಗೂ ನಾರದರ ಮಾತಿನಲ್ಲಿ ಉತ್ತರವಿತ್ತು. ಅವರು ಶ್ರೀರಾಮನನ್ನು ನಿರ್ದೇಶಿಸಿ ಅವನ ಕಥೆಯನ್ನು ಸಂಕ್ಷೇಪವಾಗಿ ಹೇಳುತ್ತ ಸೀತೆಯ ವಿಷಯವಾಗಿ–

ಜನಕಸ್ಯ ಕುಲೇ ಜಾತಾ
ದೇವಮಾಯೇವ ನಿರ್ಮಿತಾ ।
ಸರ್ವಲಕ್ಷಣಸಂಪನ್ನಾ
ನಾರೀಣಾಮುತ್ತಮಾ ವಧೂಃ ॥
(ಬಾಲಕಾಂಡ, ೧–೬೭)

ಎಂದಿದ್ದಾರೆ.

ಮನನೀಯವಾದ ಅರ್ಥಪುಷ್ಟಿಯುಳ್ಳ ಶ್ಲೋಕವಿದು. ಜನಕಸ್ಯ ಕುಲೇ ಜಾತಾ = ಜನಕ ರಾಜನು ರಾಜರ್ಷಿಯೆಂದೂ ಜ್ಞಾನಿಯೆಂದೂ ವಿಖ್ಯಾತನಾದವನು. ಯಾಜ್ಞವಲ್ಕ್ಯರ ಶಿಷ್ಯ. ಅವನ ಪೋಷಣೆಯಲ್ಲಿ ಬೆಳೆದ ಸೀತೆಯ ಶೀಲ ಸಂಪತ್ತು ಸಹಜವಾಗಿಯೇ ಉಚ್ಚಮಟ್ಟದ್ದೆಂದು ಸೂಚಿತವಾಗುತ್ತದೆ. ದೇವಮಾಯೇವ ನಿರ್ಮಿತಾ = ಸಾವಿರ ಮಾತುಗಳಿಂದ ವರ್ಣಿಸಬಹುದಾದ ಸೌಂದರ್ಯದ ಕಲ್ಪನೆ ಈ ಒಂದು ಮಾತಿನಿಂದ ಆಗುತ್ತದೆ. 'ದೇವತೆಗಳ ಮಾಯಾಸೃಷ್ಟಿಯೋ ಎಂಬಂತೆ ಅವಳು ಚೆಲುವೆಯಾಗಿದ್ದಳು'. ಚೆಲುವಿನ ಬಗೆಗೆ ಯಾವಯಾವ ಕಲ್ಪನೆ ಬರುವುದೋ ಅದೆಲ್ಲವೂ ಇದರಲ್ಲಿ ಸೇರಿಹೋಗುತ್ತದೆ. ಅವಳು ಸರ್ವಲಕ್ಷಣಸಂಪನ್ನೆ. ಸಮಸ್ತ ನಾರಿಯರಲ್ಲಿಯೂ ಶ್ರೇಷ್ಠಳಾದವಳು. ಮತ್ತು ಅವಳು,

ರಾಮಸ್ಯ ದಯಿತಾ ಭಾರ್ಯಾ
ನಿತ್ಯಂ ಪ್ರಾಣಸಮಾ ಹಿತಾ ॥

'ಶ್ರೀರಾಮನಿಗೆ ಪ್ರಿಯಳಾದ ಪತ್ನಿ. ಅವನ ಪ್ರಾಣಕ್ಕೆ ಸಮನಾದವಳು, ಸದಾ ಅವನ ಹಿತವನ್ನು ಕೋರತಕ್ಕವಳು.'

'ನಾರೀಣಾಮುತ್ತಮಾ ವಧೂಃ' ಎಂಬ ಒಂದೇ ಮಾತು ಸೀತೆಯ ಸೌಶೀಲ್ಯವನ್ನೂ ಆದರ್ಶರೂಪ ಸದ್ಗುಣಗಳನ್ನೂ ಪ್ರತಿಬಿಂಬಿಸುವ ಕನ್ನಡಿಯಾಗಿದೆ ; ಸಾರವತ್ತಾದ ಸೂತ್ರವಾಗಿದೆ. ರಾಮಾಯಣವೆಲ್ಲ ಇದರ ಭಾಷ್ಯ. ಆದ್ದರಿಂದಲೇ ಈ ಮಹಾಕಾವ್ಯವು 'ಸೀತಾಯಾಶ್ಚರಿತಂ ಮಹತ್' ಎಂದು ವಾಲ್ಮೀಕಿಗಳು ಹಾಡಿದರು.

ತಾತ್ಪರ್ಯ ನಿರ್ಣಯ

ಒಂದು ಮಹಾಕಾವ್ಯವನ್ನೋ ಶಾಸ್ತ್ರಗ್ರಂಥವನ್ನೋ ಓದಿ ಅದರ ತಾತ್ಪರ್ಯವನ್ನು ನಿಶ್ಚಯಿಸಿಕೊಳ್ಳಬೇಕಾದರೆ ಓದುಗನು ತುಂಬ ಎಚ್ಚರಿಕೆಯಿಂದಿರಬೇಕಾಗುತ್ತದೆ. ಹಾಗಲ್ಲದೆ ಶಬ್ದವನ್ನು ಇಷ್ಟಬಂದಂತೆ ಜಗ್ಗಾಡಿದರೆ ಅವನು ಮುಗ್ಗರಿಸುವುದು ನಿಶ್ಚಿತ. ವಕ್ತೃವಿನ ಎಂದರೆ ಗ್ರಂಥಕರ್ತನ ತಾತ್ಪರ್ಯವನ್ನು ಗೊತ್ತುಮಾಡಿಕೊಳ್ಳುವುದಕ್ಕಾಗಿ ಶಾಸ್ತ್ರಜ್ಞರು ಕೆಲವು ನಿರ್ಣಾಯಕ ಚಿಹ್ನೆಗಳನ್ನು ಸೂಚಿಸಿದ್ದಾರೆ. ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿ–ಈ ಏಳು ಗ್ರಂಥಕರ್ತನ ಅಭಿಪ್ರಾಯವನ್ನು ಗೊತ್ತುಮಾಡಲು ಸಹಕಾರಿಗಳು. ಮಹಾಕಾವ್ಯದ ವಿಷಯದಲ್ಲಿ ಸಹೃದಯತೆ ಎಂಬುದು ಮುಖ್ಯವಾದ ಪ್ರಮಾಣ. ಯಾವಾತನು ಕವಿಯೊಡನೆ ತಾದಾತ್ಮ್ಯಹೊಂದಬಲ್ಲನೋ, ಕವಿಚಿತ್ರಿತ ಪಾತ್ರದೊಡನೆ ಏಕತಾನತೆಯಿಂದ ಬೆರೆಯಬಲ್ಲನೋ ಅವನು ಸಹೃದಯ. ರಾಮಾಯಣದಂತಹ ಧ್ವನಿಕಾವ್ಯದಲ್ಲಿ ಸಹೃದಯತೆ ಮುಖ್ಯ ಪಾತ್ರವನ್ನು ವಹಿಸುತ್ತದೆ. ಹೃದಯಶೂನ್ಯನು ಕಾವ್ಯದ ತಿರುಳನ್ನು ಅರಿಯಲಾರ.

ಮೇಲ್ಕಂಡ ನಿರ್ಣಾಯಕಗಳಲ್ಲಿ ಉಪಕ್ರಮ, ಅಭ್ಯಾಸ, ಉಪಸಂಹಾರ–ಈ ಮೂರು ಪ್ರಧಾನವಾದವು. ಉಪಕ್ರಮವೆಂದರೆ ಆರಂಭ, ಪೀಠಿಕೆ, ಉಪೋದ್ಘಾತ. ಗ್ರಂಥದಲ್ಲಿ ಪ್ರತಿಪಾದ್ಯವಾದದ್ದನ್ನು ಕವಿಯು ಉಪಕ್ರಮದಲ್ಲಿ ಸಂಕ್ಷೇಪವಾಗಿ ತಿಳಿಸುತ್ತಾನೆ. ಅಭ್ಯಾಸವೆಂದರೆ ಪುನರಾವೃತ್ತಿ. ಉಪಕ್ರಮದಲ್ಲಿ ಹೇಳಿದ್ದನ್ನು ಗ್ರಂಥದ ಉದ್ದಕ್ಕೂ ದೃಷ್ಟಾಂತ, ಸಂವಾದ, ಯುಕ್ತಿ, ಧ್ವನಿಗಳಿಂದ ಒತ್ತುಕೊಟ್ಟು ಮತ್ತೆ ಮತ್ತೆ ಪ್ರತಿಪಾದಿಸುತ್ತಾನೆ. ಕಡೆಯ ನಿರ್ಣಯವೇನೆಂಬುದನ್ನು ಉಪಸಂಹಾರದಲ್ಲಿ ಹೇಳಿ ಮುಕ್ತಾಯ ಮಾಡುತ್ತಾನೆ. ಈ ಮೂರು ಸಂದರ್ಭಗಳಲ್ಲಿಯೂ ಯಾವ ಅಂಶವು ಸಂಗತವಾಗಿ ಕೂಡಿಕೊಳ್ಳುತ್ತದೆಯೋ ಅದೇ ಕವಿಯ ತಾತ್ಪರ್ಯವೆಂದು ನಿರ್ಣಯಿಸಬೇಕು.

ಪಾತ್ರಚಿತ್ರಣ

ರಾಮಾಯಣವು ಇತಿಹಾಸವೆಂದು ನಮ್ಮ ನಂಬಿಕೆ. ಅಥವಾ ಅದು ಕಲ್ಪಿತಕಥೆಯೇ ಆಗಿರಲಿ, ಇತಿಹಾಸ ಕವಿ ಕಲ್ಪನೆಗಳ ಸಂಮಿಶ್ರಣವಾಗಿರಲಿ, ಅದು ನಮಗೆ ಪ್ರಕೃತ

ವಲ್ಲ. ವಾಲ್ಮೀಕಿಮುನಿಗಳ ಮಹಾಕಾವ್ಯವು ನಮ್ಮ ಕಣ್ಣೆದುರಿಗಿರುವುದಂತೂ ನಿಶ್ಚಿತ. ಇದರಲ್ಲಿ ಸೀತಾಪಾತ್ರದ ಚಿತ್ರಣ ಹೇಗೆ ನಡೆದಿದೆ, ಅವಳ ವಿಷಯದಲ್ಲಿ ವಾಲ್ಮೀಕಿಗಳ ಹೃದಯ ವೇನು, ಸಹೃದಯನು ಕಂಡುಕೊಳ್ಳುವ ಕಾವ್ಯ ಸತ್ಯ ಯಾವುದು – ಎಂಬುದು ಮಾತ್ರ ಈಗ ನಮಗೆ ಪ್ರಕೃತವಾದದ್ದು. ರಾಮಾಯಣದಲ್ಲಿ ಸೀತಾದೇವಿಯ ಸೌಶೀಲ್ಯವನ್ನು, ವಿಶೇಷವಾಗಿ ಪಾತಿವ್ರತ್ಯದ ಪರಾಕಾಷ್ಠೆಯನ್ನು ಪರಿಣಾಮ ಕಾರಿಯಾಗಿ ಚಿತ್ರಿಸಲಾಗಿದೆ. ಭಾರತೀಯ ಪರಂ ಪರೆಯಲ್ಲಿ ಪತಿವ್ರತೆಯರೆಂದು ಸುಪ್ರಸಿದ್ಧರಾದ ಸಾಧ್ವಿಯರು ಬಹುಮಂದಿ ಇದ್ದಾರೆ. ಅರುಂಧತಿ, ಅನಸೂಯೆ, ಸಾವಿತ್ರಿ, ದಮಯಂತಿ – ಮೊದಲಾದ ಮಹಾಸತಿಯರು ವಿಖ್ಯಾತರಾಗಿ ದ್ದಾರೆ. ಆದರೆ ಜೀವನದ ಉದ್ದಕ್ಕೂ ಕಷ್ಟ ಪರಂಪರೆಗೆ ಸಿಕ್ಕಿ ಬಳಲಿದರೂ ತನ್ನ ದೃಢನಿಷ್ಠೆಯನ್ನು ಪಾಲಿಸಿಕೊಂಡು, ಅಗ್ನಿ ಪರೀಕ್ಷೆಗೊಳಗಾಗಿ ಅಪರಂಜಿಯಂತೆ ಹೊರಬಂದ ಮಹಾಸಾಧ್ವಿ ಸೀತೆಯೊಬ್ಬಳೇ. ಇದೇನೂ ನಾವು ಹೊಸದಾಗಿ ಹೇಳತಕ್ಕ ಮಾತಲ್ಲ. ಸಾವಿರಾರು ವರ್ಷಗಳಿಂದ ಭಾರತೀಯ ಜನತೆ ದೃಢವಾಗಿ ನಂಬಿದ ಸತ್ಯವಿದು. ಸಾಧುಸಂತರು ಹಾಡಿ ಹೊಗಳಿದ ಯಥಾರ್ಥತೆ. ಭಾಸ, ಕಾಳಿದಾಸ, ಭವಭೂತಿ, ದಿಙ್ನಾಗ, ಕುಮಾರ ವಾಲ್ಮೀಕಿ, ಅಭಿನವಪಂಪ, ಲಕ್ಷ್ಮೀಶ, ತುಳಸೀದಾಸ – ಮೊದಲಾದ ಸಂಸ್ಕೃತ ಕವಿಗಳೂ, ದೇಶಭಾಷಾ ಕವಿಗಳೂ ನಿರಂತರವಾಗಿ ಕಂಡದ್ದು ಜಾನಕಿಯ ಪಾತಿವ್ರತ್ಯದ ಮಹಿಮೆಯನ್ನು. ಕಾವ್ಯಧ್ವನಿ ವ್ಯಂಗ್ಯಗಳನ್ನು ಗುರುತಿಸುವುದರಲ್ಲಿ ನಿಷ್ಣಾತರಾದ ಆನಂದವರ್ಧನ, ಮಮ್ಮಟ, ಕುಂತಕ, ಜಗನ್ನಾಥ – ಮುಂತಾದ ವಿಖ್ಯಾತ ಆಲಂಕಾರಿಕ ರಿಗೂ ಈ ವಿಷಯದಲ್ಲಿ ಎರಡು ಮಾತಿಲ್ಲ. ವಿದ್ವಾಂಸರೂ, ವ್ಯಾಖ್ಯಾನಕಾರರೂ, ವರಕವಿ ಗಳೂ, ಸಹೃದಯ ಶಿರೋಮಣಿಗಳಾದ ಆಲಂಕಾರಿಕರೂ ನಿರಂತರವಾಗಿ ಒಪ್ಪಿಕೊಂಡಿರು ವುದು ಸೀತಾದೇವಿಯು ಪತಿವ್ರತೆಯರಲ್ಲಿ ಶ್ರೇಷ್ಠ ಳೆಂದು, ಲಕ್ಷ್ಮಣನು ಪರಿಶುದ್ಧಚಿತ್ತನಾಗಿ ಅಣ್ಣನ ಸೇವೆ ಮಾಡಿದನೆಂದು, ಶ್ರೀರಾಮನು ಧರ್ಮನಿಷ್ಠನಾದ ಅಪ್ರತಿಮವೀರನೆಂದು.

'ವಿಚಾರವಾದ'

ವಸ್ತುಸ್ಥಿತಿ ಹೀಗಿದ್ದರೂ, ತಾವು 'ವಿಚಾರ ವಾದಿ' ಗಳೆಂದೂ 'ಗಂಭೀರ ಚಿಂತನೆ' ಮಾಡ ತಕ್ಕವರೆಂದೂ ಹೇಳಿಕೊಳ್ಳುವ ಕೆಲವರು ನೂತನ ಆವಿಷ್ಕಾರವನ್ನು ಕಂಡುಹಿಡಿದಿದ್ದಾರೆ. ಅವರ ಅಂಬೋಣ ಹೀಗಿದೆ–

೧. ಸೀತೆಗೆ ಲಕ್ಷ್ಮಣನಲ್ಲಿ ಮನಸ್ಸಿತ್ತು; ಲಕ್ಷ್ಮಣನಿಗೂ ಸೀತೆಯಲ್ಲಿ ಮನಸ್ಸಿತ್ತು; ಇವರಿಬ್ಬರೂ ಮನಸ್ಸಿನಲ್ಲಿ ಮಂಡಿಗೆಯನ್ನು ತಿಂದ 'ನೀತಿಬಾಹಿರ'ರು.

೨. ರಾಮನು ಧಾರ್ಮಿಕ, ಜಟಾಧಾರಿ, ತಾಪಸ. ಒಂದು ಬಗೆಯಲ್ಲಿ ನಪುಂಸಕ. ಆದ್ದ ರಿಂದ ಅವನಲ್ಲಿ ಸೀತೆಗೆ ತೃಪ್ತಿ ದೊರಕಲಿಲ್ಲ.

೩. ಇದೆಲ್ಲವನ್ನೂ ರಾ ಮಾ ಯ ಣ ದ ಲ್ಲಿ ವಾಲ್ಮೀಕಿಯೇ ಅಭಿವ್ಯಕ್ತಿಗೊಳಿಸಿದ್ದಾನೆ. ಈ 'ಧ್ವನಿ'ಯನ್ನು ಗುರುತಿಸಿ ತಿಳಿಯಲಾರದವ ರೆಲ್ಲರೂ 'ಹೃದಯದರಿದ್ರರು'.

ಇವಿಷ್ಟು ಮಾತನ್ನು ಎಷ್ಟು ಅನಿಷ್ಟ ವಾದರೂ, ಸಹೃದಯರಾದ ವಾಚಕರು ಮಸ್ತಕ ದಲ್ಲಿ ಸ್ವಲ್ಪಕಾಲ ಹಿಡಿದಿಟ್ಟುಕೊಂಡಿರಲಿ. ವಾಲ್ಮೀಕಿಮುನಿಗಳ ಉಕ್ತಿಗಳನ್ನೇ ಅವಲಂಬಿಸಿ ಮುಂದುವರಿಯೋಣ.

ಸೀತೆಯು 'ಸರ್ವಲಕ್ಷಣಸಂಪನ್ನಾ ನಾರೀಣಾ ಮುತ್ತಮಾ ವಧೂಃ' ಎಂಬುದನ್ನು ನಾರದರ ವಚನದಲ್ಲಿ ನಾವು ಕಂಡಿದ್ದೇವೆ. ಅದರ ಅಂತಃ ಸತ್ತ್ವವನ್ನೇ ಹಿಡಿದು ವಾಲ್ಮೀಕಿಗಳು ಉಪಕ್ರಮಿ ಸುವುದನ್ನು ಇನ್ನು ಕಾಣಬಹುದು. ರಾಮಾಯಣ ದಲ್ಲಿ ಮೊದಲು ಸೀತೆಯ ಪ್ರವೇಶ ಅವಳ ವಿವಾಹ ಸಮಯದಲ್ಲಿ. ಆಗ ಜನಕರಾಜನು ಹೇಳುವ ಮಾತಿದು–

ಇಯಂ ಸೀತಾ ಮಮ ಸುತಾ
ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ
ಪಾಣಿಂ ಗೃಹ್ಣೀಷ್ವ ಪಾಣಿನಾ ।
ಪತಿವ್ರತಾ ಮಹಾಭಾಗಾ
ಛಾಯೇವಾನುಗತಾ ಸದಾ॥
(ಬಾಲಕಾಂಡ, ೭೩–೨೭, ೨೮)

"ರಾಮ, ನನ್ನ ಮಗಳಾದ ಈ ಸೀತೆ ನಿನಗೆ ಸಹಧರ್ಮಚಾರಿಣಿಯಾಗಿರುವಳು. ಇವಳನ್ನು ಸ್ವೀಕರಿಸು. ನಿನಗೆ ಮಂಗಳವಾಗಲಿ. ಇವಳು

ಕಾಲಿದಾಸ ಭವಭೂತಿಗಳಿಂದಾರಂಭಿಸಿ ತುಲಸೀದಾಸ ಲಕ್ಷ್ಮೀಶರ ವರೆಗಿನ ದೀರ್ಘ ಕವಿಪರಂಪರೆ ಗುರುತಿಸಿದ ಸಂಗತಿ– ಸೀತಾದೇವಿಯ ಪಾತಿವ್ರತ್ಯನಿಷ್ಠೆ ಮಾನವಕುಲಕ್ಕೇ ಆದರ್ಶ ಪ್ರಾಯವೆಂಬುದು

ಪತಿವ್ರತೆ ; ಭಾಗ್ಯಶಾಲಿನಿ ; ನೆರಳಿನಂತೆ ಸದಾ ನಿನ್ನನ್ನು ಹಿಂಬಾಲಿಸಿಕೊಂಡಿರುವಳು."

ವಸಿಷ್ಠ ವಿಶ್ವಾಮಿತ್ರರೆದುರಿಗೆ ಅಗ್ನಿಸಾಕ್ಷಿಕ ವಾಗಿ ಜನಕಮಹಾರಾಜ ಈ ಮಾತನ್ನಾಡಿದ್ದಾನೆ. ಇದು ಉಪಕ್ರಮ. ಸೀತಾಚಾರಿತ್ರದ ಸಾರವನ್ನೊಳಗೊಂಡ ನುಡಿ ಇದು. ಮುಂದಿನ ಕಥಾಭಾಗದಲ್ಲಿ ಇದರ ವಿಸ್ತರ.

ಭವ್ಯದೃಶ್ಯ

ಶ್ರೀರಾಮನು ವನವಾಸಕ್ಕೆ ಹೋಗಬೇಕೆಂದು ನಿರ್ಧರಿಸಿ, ಆ ಸಂಗತಿಯನ್ನು ಮಡದಿಗೆ ತಿಳಿಸಬೇಕೆಂದು ಸೀತೆಯ ಅಂತಃಪುರಕ್ಕೆ ಬರುತ್ತಾನೆ. ಅಲ್ಲಿಯವರೆಗೆ ಅವನು ಧೈರ್ಯ ಸಂತೋಷಗಳಿಂದ ಇದ್ದರೂ ಆ ಕೆಟ್ಟಸುದ್ದಿಯನ್ನು ಮಡದಿಗೆ ತಿಳಿಸುವುದು ಹೇಗೆಂದು ವಿಹ್ವಲನಾಗುತ್ತಾನೆ. ಗಂಡನ ಮುಖಚರ್ಯೆಯನ್ನು ಕಂಡು ದಿಗ್ಭ್ರಾಂತಳಾದ ಸೀತೆ ಹೇಳುವ ಮೊದಲಿನ ಮಾತಿದು–'ಕಿಮಿದಾನೀಮಿದಂ ಪ್ರಭೋ – ನನ್ನೊಡೆಯ, ಇದೇನಿದು ?' ಎಂದು. ರಾಮನು ಸಮಾಧಾನದಿಂದಲೇ ಎಲ್ಲ ಸಂಗತಿಯನ್ನೂ ವಿವರಿಸಿ "ಪ್ರಿಯೆ, ನಾನು ಹದಿನಾಲ್ಕು ವರ್ಷ ಕಾಡಿನಲ್ಲಿದ್ದು ಬರುವೆನು. ನೀನು ಅರಮನೆಯಲ್ಲಿ ನನ್ನ ತಂದೆ ತಾಯಿಗಳ ಬಳಿ ಇರು" ಎಂದು ಹೇಳಿ ಕೆಲವು ಹಿತವಾದಗಳನ್ನು ಹೇಳುತ್ತಾನೆ. ಇಷ್ಟಾದರೂ ದಶರಥನ ವಿಷಯದಲ್ಲಾಗಲಿ ಕೈಕೇಯಿಯ ವಿಷಯದಲ್ಲಾಗಲಿ ಸೀತೆಯ ಬಾಯಿಂದ ಒಂದೇ ಒಂದು ಬಿರುನುಡಿ ಯಾದರೂ ಬಂದಿತೇನು ? ಇನ್ನೊಬ್ಬ ಹೆಂಗಸಾಗಿದ್ದರೆ ಕೈಕೇಯಿಯನ್ನು ತರಾಟೆಗೆ ತೆಗೆದುಕೊಳ್ಳದೆ ಬಿಡುತ್ತಿದ್ದಳೆ ? ಆ ಸಾಧ್ವಿಗೆ ಅತ್ತಕಡೆ ಗಮನವಿಲ್ಲ. ಅದು ತನಗೆ ಸಂಬಂಧಿಸಿದ ವಿಷಯವೇ ಅಲ್ಲ ಎಂದು ತಿಳಿದಳು. ಅವಳಿಗೆ ಸಂಬಂಧಿಸಿದ ಒಂದೇ ಒಂದು ವಿಷಯವೆಂದರೆ, ರಾಮನು ತನ್ನನ್ನು ಬಿಟ್ಟು ಅರಣ್ಯಕ್ಕೆ ಹೋಗುತ್ತಾನೆಂಬುದು.

ರಾಮನಿಂದ ಸದಾ ಪ್ರಿಯವಾದ ಮಾತನ್ನೇ ಕೇಳುತ್ತಿದ್ದ ಜಾನಕಿಗೆ ಈಗ ರಾಮನು ಹೇಳಿದ್ದು ಅ ಪ್ರಿ ಯ ವಾ ಯಿ ತಂ ತೆ. ಅವಳು ಪ್ರೀತಿಯಿಂದಲೇ ಕೋಪಗೊಂಡು, "ರಾಜಪುತ್ರ, ನೀನು ಇಂಥ ಹಗುರವಾದ ಮಾತನ್ನಾಡಬಹುದೆ? ಅಪಹಾಸ್ಯಕರವಾದ ಮಾತಿದು. ಲೋಕದಲ್ಲಿ ತಂದೆ, ತಾಯಿ – ಮೊದಲಾದವರು ತಮ್ಮ ಪುಣ್ಯಪಾಪಗಳನ್ನು ತಾವು ಅನುಭವಿಸುತ್ತಾರೆ. ಆದರೆ ಹೆಂಡತಿಯೊಬ್ಬಳೇ ತನ್ನ ಗಂಡನ ಕರ್ಮಾನುಸಾರವಾದ ಫಲವನ್ನು ಹಂಚಿಕೊಳ್ಳುತ್ತಾಳೆ. ಆದ್ದರಿಂದ ವನದಲ್ಲಿ ವಾಸಮಾಡಬೇಕೆಂದು ನನಗೂ ಆಜ್ಞೆಯಾಗಿದೆ. ನಾನೂ ನಿನ್ನೊಡನೆ ವನಕ್ಕೆ ಬರುವುದು ನಿಶ್ಚಯ" ಎಂದುಬಿಡುತ್ತಾಳೆ (ಅಯೋ. ೨೭, ೧–೪)

ಸಹಧರ್ಮಿಣಿ

ಹೆಂಡತಿ ಗಂಡನ ಅರ್ಧಾಂಗಿಯೆನಿಸುವುದು ಸುಖಕ್ಕೆ ಮಾತ್ರವಲ್ಲ, ಕಷ್ಟಕ್ಕೂ ಸಹ. ಪತಿಗೆ ಪ್ರಾಪ್ತವಾದ ವನವಾಸದ ಆಜ್ಞೆ ಪತ್ನಿಯಾದ ತನಗೂ ಅನ್ವಯಿಸುತ್ತದೆಯೆಂದು ತರ್ಕಹೂಡಿ ತಾನಾಗಿ ವನವಾಸದ ಕಷ್ಟಕೋಟಲೆಗೆ ಬಲಿಯಾಗುವ ಸೀತಾದೇವಿಯ ಶುದ್ಧಚಾರಿತ್ರಕ್ಕೆ ಎಣೆಯುಂಟೆ ? ಈ ಸಂದರ್ಭದಲ್ಲಿ ಸೀತಾ–ರಾಮರ ಸಂವಾದವನ್ನು ನಾಲ್ಕು ಸರ್ಗಗಳಲ್ಲಿ ಮಹಾಕವಿ ವಿಸ್ತಾರವಾಗಿಯೂ ರಸವತ್ತಾಗಿಯೂ ವರ್ಣಿಸಿದ್ದಾನೆ. ಸೀತೆ ವನಕ್ಕೆ ಬರುವುದು ಯುಕ್ತವಲ್ಲವೆಂದು ಶ್ರೀರಾಮನು ಬಗೆಬಗೆಯಲ್ಲಿ ಹೇಳಿ

ಸಂತೈಸುತ್ತ ತನ್ನ ವಾಕ್ ಶಕ್ತಿಯನ್ನೆಲ್ಲ ವಿನಿಯೋಗಿಸುತ್ತಾನೆ. ಅವನ ಪ್ರತಿಯೊಂದು ಆಕ್ಷೇಪಕ್ಕೂ ಸೀತೆ ಸಮಂಜಸವಾದ ಉತ್ತರ ವನ್ನು ನೀಡಿ, ತಾನು ಕಾಡಿಗೆ ಬರುವುದು ನಿಶ್ಚಯವೆನ್ನುತ್ತಾಳೆ. ಅವನು ವನವಾಸದ ಕಷ್ಟ ವನ್ನು ವರ್ಣಿಸಿ ಕಾಡಿಗೆ ಬರಬಾರದೆಂದ. ಸೀತೆ ಕೇಳಲಿಲ್ಲ. "ನಿನ್ನೊಡನಿದ್ದರೆ ನನಗೆ ಯಾವ ಕಷ್ಟವೂ ತೋರುವುದಿಲ್ಲ. ನೀನಿಲ್ಲದ ಸ್ವರ್ಗವೂ ನನಗೆ ಬೇಡ" ಎಂದಳು. ಕಾಡುಮೃಗಗಳ ಭೀತಿ ಯನ್ನು ತೋರಿಸಿದ. "ಧನುರ್ಧಾರಿಯಾದ ನಿನ್ನನ್ನು ನೋಡಿದರೆ ಅವೆಲ್ಲ ಹೆದರಿ ಓಡಿ ಹೋಗುತ್ತವೆ" ಎಂದಳು. ಹಸಿವು ಬಾಯಾರಿಕೆ ಗಳ ಕಷ್ಟವನ್ನು ವಿವರಿಸಿದನು. "ನೀನು ತಿಂದು ಮಿಕ್ಕುದನ್ನು ತಿನ್ನುವೆನು. ಹಸಿವು ಬಾಯಾರಿಕೆಗಳ ಹೆಸರನ್ನೂ ನಾನು ಎತ್ತುವುದಿಲ್ಲ" ಎಂದಳು. ಕಲ್ಲು ಮುಳ್ಳುಗಳ ಕಷ್ಟವನ್ನು ಹೇಳಿದನು.

ಅಗ್ರತಸ್ತೇ ಗಮಿಷ್ಯಾಮಿ
ಮೃದ್ನಂತೀ ಕುಶಕಂಟಕಾನ್ ।

ಕಲ್ಲುಮುಳ್ಳುಗಳನ್ನು ತೆಗೆದು ನಿನಗೇ ದಾರಿ ಮಾಡಿಕೊಡುತ್ತ ಮುಂದೆ ಹೋಗುವೆನು! ಎಂದಳು. ರಾಕ್ಷಸರ ಕಾಟವನ್ನು ವರ್ಣಿಸಿದ. "ನಿಖಿಲರಾಕ್ಷಸರನ್ನು ಕೊಲ್ಲುವುದಕ್ಕೆ ನೀನು ಸಮರ್ಥ" ಎಂದು ಉತ್ತರಕೊಟ್ಟಳು. ಬಂಧು ಗಳನ್ನು ಹದಿನಾಲ್ಕು ವರ್ಷ ಅಗಲಿರುವುದು ಸುಲಭವಲ್ಲ ಎಂದ. "ನಿನ್ನೊಡನಿದ್ದಾಗ ತವರುಮನೆಯವರು ನೆನಪಿಗೇ ಬರುವುದಿಲ್ಲ" ಎಂದು ಉತ್ತರ ಬಂದಿತು. ಅರಮನೆಯಲ್ಲಿ ಸುಖವಾಗಿರು, ನಿನಗೇಕೆ ಈ ಪಾಡು? – ಎಂದ. "ನೀನಿಲ್ಲದ ಸ್ವರ್ಗವೂ ನನಗೆ ಬೇಡ" ಎಂದಳು. ಅತ್ತೆಮಾವಂದಿರನ್ನು ಸೇವಿಸುವುದು ನಿನಗೆ ವಿಹಿತ ಎಂದ. "ಗಂಡನಿಗಿಂತ ಬೇರೆ ದೇವರು ನನಗಿಲ್ಲ" ಎಂದು ಉತ್ತರಕೊಟ್ಟಳು. ನನ್ನ ಮಾತನ್ನು ಉಪೇಕ್ಷಿಸಿ ಕಾಡಿಗೆ ಬರುವುದು ನಿನಗೆ ಧರ್ಮವಲ್ಲ ಎಂದನು. "ಯಾವುದು ಧರ್ಮ ವೆಂಬುದನ್ನು ನನ್ನ ತಂದೆತಾಯಿಗಳು ಕಲಿಸಿ ದ್ದಾರೆ. ಪತಿಯೊಡನಿರುವುದೇ ನನ್ನ ಧರ್ಮ" ಎಂದು ಉತ್ತರಿಸಿದಳು. "ಕಾಡಿನಲ್ಲಿ ಯಾವ ಯಾವ ಕಷ್ಟಗಳಿವೆಯೆಂದು ನೀನು ಹೇಳು ತ್ತೀಯೋ ಅವೆಲ್ಲವೂ, ನಿನ್ನ ಪ್ರೇಮದೊಡನೆ ಕೂಡಿದಾಗ ನನಗೆ ಸುಖವನ್ನೇ ತರುತ್ತವೆ" ಎಂದು ಹೇಳಿಬಿಟ್ಟಳು. "ನನ್ನನ್ನು ಬಿಟ್ಟು ಹೋದರೆ ವಿಷವನ್ನು ತಿಂದೋ ಬೆಂಕಿಗೆ ಬಿದ್ದೋ ನಾನು ಸಾಯುವುದು ನಿಶ್ಚಯ" ಎಂದು ತನ್ನ ನಿರ್ಧಾರ ವನ್ನು ತಿಳಿಸಿದಳು. ಶ್ರೀರಾಮನಿಗೆ ಮುಂದೆ ಏನು ಹೇಳಬೇಕೆಂಬುದು ತೋರಲಿಲ್ಲ. ಆದರೂ ಸೀತೆಯನ್ನು ಕರೆದೊಯ್ಯಲು ಅವನಿಗೆ ಇಷ್ಟ ವಾಗಲಿಲ್ಲ.

ಮನೋನಿಶ್ಚಯ

ಸೀತೆಗೆ ಬೇರೆ ದಾರಿ ತೋರಲಿಲ್ಲ. ತನ್ನ ಪತಿವ್ರತಾಧರ್ಮಕ್ಕೆ ಪತಿಯೇ ಅಡ್ಡ ಬರುತ್ತಾ ನೆಂದು ಅವಳಿಗೆ ಸಿಟ್ಟು ಬಂತು. ಆ ಸಿಟ್ಟು ಪತಿಯ ಮೇಲಿನ ಪ್ರೇಮದಿಂದಲೇ ಬಂದದ್ದು. 'ಪ್ರಣಯಾದೇವ ಸಂಕ್ರುದ್ಧಾ !' ಒಂದು ಬಿರು ಮಾತನ್ನಾಡಿದಳು –

ಕಿಂ ತ್ವಾಮನ್ಯತ ವೈದೇಹಃ
ಪಿತಾ ಮೇ ಮಿಥಿಲಾಧಿಪಃ ।
ರಾಮ ಜಾಮಾತರಂ ಪ್ರಾಪ್ಯ
ಸ್ತ್ರಿಯಂ ಪುರುಷವಿಗ್ರಹಂ ॥

"ರಾಮ, ನನ್ನ ತಂದೆ ಜನಕಮಹಾರಾಜನು ನಿನ್ನನ್ನು ಅಳಿಯನನ್ನಾಗಿ ಮಾಡಿಕೊಂಡಾಗ ಏನೆಂದು ತಿಳಿದಿದ್ದನು? ನೀನೊಬ್ಬ ಗಂಡು ವೇಷದ ಹೆಣ್ಣೆಂದು ತಿಳಿದಿದ್ದನೆ? "

ದಂಡಕಾರಣ್ಯದಲ್ಲಿ ದುರುಳರಾದ ದೈತ್ಯರಿದ್ದಾ ರೆಂದೂ ಅಲ್ಲಿ ಹೆಣ್ಣನ್ನು ರಕ್ಷಿಸಿಕೊಳ್ಳುವುದು ಕಷ್ಟವೆಂದೂ ರಾಮನು ಹಿಂಜರಿಯುತ್ತಿದ್ದಾ ನೆಂದು ಸೀತೆಗೆ ನಿಶ್ಚಿತವಾಗಿದೆ. ಆದ್ದರಿಂದ ಈ ಬಿರುನುಡಿ. ಸಹಜವಾಗಿ ಇದರ ಅಭಿಪ್ರಾಯ ವೆಷ್ಟು? "ಶಿವಧನುಸ್ಸನ್ನು ಮುರಿದ ಮಹಾ ವೀರನೆಂದು ನನ್ನ ತಂದೆ ನನ್ನನ್ನು ನಿನಗೆ ಮದುವೆ ಮಾಡಿಕೊಟ್ಟಿದ್ದಾನೆ. ನೀನೊಬ್ಬ ಕೈಲಾಗದ ಸಾಮಾನ್ಯ ಪುರುಷನೆಂದೇನೂ ಅವನು ತಿಳಿಯಲಿಲ್ಲ. ವೀರಾಗ್ರಣಿಯಾದ ನೀನು ನನ್ನನ್ನು ಕಾಪಾಡಿಕೊಳ್ಳಲಾರೆಯಾ ? " ಎಂದಿಷ್ಟೇ.

ಸೀತೆ ಧೀರೆಯಾದ ಕ್ಷತ್ರಿಯ ಸ್ತ್ರೀ. ಆತ್ಮಾಭಿ ಮಾನವುಳ್ಳವಳು. ತನಗೆ ತೋರಿದ್ದನ್ನು ನಿರ್ದಾ ಕ್ಷಿಣ್ಯವಾಗಿ ಹೇಳತಕ್ಕವಳೇ. ಸುತೀಕ್ಷ್ಣಾಶ್ರಮ ದಿಂದ ಹೊರಟಾಗ ಶಸ್ತ್ರಧಾರಣೆಯ ವಿಷಯ ವಾಗಿ ರಾಮನಿಗೆ ಹೇಳಿದ ಹಿತವಾದ, ರಾವಣ

ಬುದ್ಧಿಯ ಪರಿಪಾಕವೂ ರಸನಿಷ್ಠೆಯೂ ಇರುವ ಸಹೃದಯ ರಿಗಷ್ಟೆ ಸಹಜ ಧ್ವನಿ ಗೋಚರಿಸೀತು ; ಅಪ್ರಬುದ್ಧರಿಗಲ್ಲ.

ನನ್ನು ಧಿಕ್ಕರಿಸಿ ಆಡುವ ಮಾತಿನ ವಿಧಾನ – ಮೊದಲಾದ ಸನ್ನಿವೇಶಗಳಲ್ಲಿ ಅವಳ ನಿಜಸ್ವಭಾವ ವನ್ನು ಗುರುತಿಸಬಹುದು. ತನ್ನ ಬೆನ್ನ ಮೇಲೆ ಕುಳಿತು ಬಂದರೆ ಲಂಕೆಯಿಂದ ಈಗಲೇ ಪಾರುಮಾಡುತ್ತೇನೆಂದು ಹನುಮಂತನು ಹೇಳಿ ದಾಗ, ಇನ್ನೊಬ್ಬ ಸ್ತ್ರೀಯಾಗಿದ್ದರೆ ಕೂಡಲೇ ಒಪ್ಪಿಕೊಂಡುಬಿಡುತ್ತಿದ್ದಳು ! ಸೀತೆ ಒಪ್ಪಿದ ಳೇನು ? "ನನ್ನ ಗಂಡ ವೀರಾಗ್ರೇಸರನೆಂದು ವಿಖ್ಯಾತನಾಗಿದ್ದಾನೆ. ನಾನು ಕಳ್ಳತನದಿಂದ ತಪ್ಪಿಸಿಕೊಂಡು ಹೋದರೆ ಅವನಿಗೆ ಅವಮಾನ ವಾದೀತು. ಈ ರಾವಣನನ್ನೂ ರಾಕ್ಷಸಕುಲ ವನ್ನೂ ನಿರ್ಮೂಲ ಮಾಡಿ ನನ್ನನ್ನು ಕರೆ ದೊಯ್ಯಲಿ. ಅದರಿಂದಲೇ ಆತನಿಗೆ ಕೀರ್ತಿ" ಎಂದು ಹೇಳಿಬಿಡುತ್ತಾಳೆ.

ಪ್ರಕೃತದಲ್ಲಿ ಮೇಲ್ಕಂಡ ಸೀತೆಯ ನುಡಿಗೆ ಕುತ್ಸಿತಾರ್ಥವನ್ನು ಕಲ್ಪಿಸಿರುವ 'ವಿಚಾರವಾದಿ' ಗಳಿದ್ದಾರೆಂಬುದು ನಮಗೆ ಗೊತ್ತಿದೆ. 'ಸ್ತ್ರಿಯಂ ಪುರುಷವಿಗ್ರಹಂ' – ಎಂಬುದಕ್ಕೆ 'ನೀನು ಗಂಡುವೇಷದ ಹೆಣ್ಣೇ ಸರಿ'ಎಂದು ಅಭಿಪ್ರಾಯ ವಂತೆ. ಅವಳ ಮನಸ್ಸಿನಲ್ಲಿದ್ದುದೇ ಹೊರಗೆ ಬಂದಿತೆಂದೂ ರಾಮನಿಂದ ಅವಳಿಗೆ ಕಾಮ ತೃಪ್ತಿಯಾಗುತ್ತಿರಲಿಲ್ಲವೆಂದೂ ಇದು 'ಅಂತ ರಂಗದ ಕಾಮಪ್ರವೃತ್ತಿಯ ಅಭಿವ್ಯಕ್ತಿಯೇ ಆಗಿ ನಿಲ್ಲುತ್ತದೆ' ಎಂದೂ ಇವರ ಹೇಳಿಕೆ.

ಧ್ವನಿಮಾರ್ಗ

ವ್ಯಂಗ್ಯ, ಅಭಿವ್ಯಕ್ತಿ, ಧ್ವನಿ – ಎಲ್ಲ ಒಂದೇ. ಇದು ಹೇಗೆ ಪ್ರಕಾಶಿತವಾಗುತ್ತದೆಯೆಂಬುದನ್ನು ಧ್ವನಿಶಾಸ್ತ್ರಕಾರರು ವ್ಯವಸ್ಥೆ ಮಾಡಿದ್ದಾರೆ. ಹೇಳತಕ್ಕವರು ಯಾರು, ಯಾರಿಗೆ ಹೇಳಿದ್ದು, ಉದ್ದೇಶವೇನು, ಪ್ರಕರಣ ಯಾವುದು – ಮುಂತಾದವುಗಳ ಪರಿಶೀಲನೆಯಿಂದ ಪರಿಷ್ಕೃತ ಬುದ್ಧಿಯೂ ರಸನಿಷ್ಠನೂ ಆದ ಸಹೃದಯನಿಗೆ ಹೊಳೆಯುತಕ್ಕದ್ದು ಧ್ವನಿ. ಬೇಕಾಬಿಟ್ಟಿಯಾಗಿ ಕಲ್ಪಿಸತಕ್ಕದ್ದಲ್ಲ ಅದು. ಇಲ್ಲಿ ಮಾತಾಡಿದವಳು ಸೀತೆ. ಅವಳು ಮಹಾಪತಿವ್ರತೆಯೆಂದೂ ಸಾಧ್ವೀಶಿರೋಮಣಿಯೆಂದೂ ವಾಲ್ಮೀಕಿಗಳೇ ಕಾವ್ಯದ ಉದ್ದಕ್ಕೂ ಸ್ಫುಟವಾಗಿ ಪ್ರತಿಪಾದಿ ಸುತ್ತ ಹೋಗಿದ್ದಾರೆ. ಪತಿಯಾದ ರಾಮನಿಗೆ ಹೇಳಿದ ಮಾತಿದು. ಆತನಾದರೋ ಕವಿಯ ಹೇಳಿಕೆಯಂತೆ 'ಧರ್ಮಭೃತಾಂ ವರಃ, ಧನು ಷ್ಮತಾಂ ಶ್ರೇಷ್ಠಃ, ಸಮರೇ ಚಾಪ್ರತಿದ್ವಂದ್ವಃ, ಆಜಾನುಬಾಹುಃ, ನೋಡತಕ್ಕವರ ದೃಷ್ಟಿ ಚಿತ್ತಾಪಹಾರಿಯಾದ ಸೌಂದರ್ಯವುಳ್ಳವನು.' ಉದ್ದೇಶವಾದರೋ ತನ್ನನ್ನು ಅರಣ್ಯಕ್ಕೆ ಕರೆದು ಕೊಂಡು ಹೋಗಲಿ – ಎಂಬುದು. ಕರೆ ದೊಯ್ಯಲು ಆತನು ಒಪ್ಪುತ್ತಿಲ್ಲವೆಂಬುದು ಪ್ರಕರಣ. ತಾನು ರಾಮನ ಜೊತೆಗೆ ಹೋಗ ದಿದ್ದರೆ ತನ್ನ ಧರ್ಮದ ಆಚರಣೆಗೆ ಚ್ಯುತಿ ಯಾಗುವುದೆಂಬ ತೀವ್ರ ಆತಂಕದಿಂದ ನೊಂದು ಸೀತೆ ಈ ಮಾತನ್ನಾಡುತ್ತಿದ್ದಾಳೆ. ಈ ಸಂದರ್ಭ ದಲ್ಲಿ 'ಅಂತರಂಗದ ಕಾಮಪ್ರವೃತ್ತಿಯ ಅಭಿವ್ಯಕ್ತಿ'ಗೆ ನಿಮಿತ್ತವಾದರೂ ಏನು ? ಹಾಗೆನ್ನುವುದು ಅತ್ಯಂತ ಅಪ್ರಬುದ್ಧವಾದ ಬಾಲಿಶತನದ ಹೇಳಿಕೆ. ಧ್ವನಿಮಾರ್ಗಕ್ಕೆ ಅಪ ಚಾರವೆಸಗುವ ಅಪಸಿದ್ಧಾಂತ. ಭೋಜನದ ನಡುವೆ ಭೇತಾಳೋದಯ.

ಲಕ್ಷ್ಮಣನು ಅರಣ್ಯಕ್ಕೆ ಬರುತ್ತಾನೆಂಬುದರ ಸುಳಿವೂ ಇದುವರೆಗೆ ಸೀತೆಗೆ ತಿಳಿದಿಲ್ಲ. ಆಕೆಗೆ ಲಕ್ಷ್ಮಣನಲ್ಲಿ ಮನಸ್ಸಿತ್ತೆಂಬುದು ಈ 'ವಿಚಾರ ವಾದಿ'ಗಳಿಗೆ ಹೊಳೆದ 'ಅಭಿವ್ಯಕ್ತಿ'. ಆ ಪಕ್ಷ ದಲ್ಲಿ ಅವಳು ಲಕ್ಷ್ಮಣನೊಡನೆ ಅರಮನೆ ಯಲ್ಲಿಯೇ ಉಳಿಯಬಹುದಾಗಿತ್ತು, ರಾಮ ನೊಡನೆ ಅರಣ್ಯಕ್ಕೆ ಹೋಗುತ್ತೇನೆಂದು ಹಠ ಹಿಡಿದಿದ್ದೇಕೆ ?

ಸದ್ಭಾವನೆ

ಅದಿರಲಿ ; ಈ ನುಡಿಯಲ್ಲಿ ಸಾಧ್ವಿಯರಿಗೆ ಅನುರೂಪವಲ್ಲದ ಕಾಠಿಣ್ಯವಿದೆಯೆಂಬುದು ಸಹ ಒಪ್ಪತಕ್ಕದ್ದಲ್ಲ. ಅನ್ಯೋನ್ಯ ಅನುರಕ್ತರಾದ

ದಂಪತಿಗಳಲ್ಲಿ ಪ್ರಣಯದಿಂದಲೇ ಬರುವ ಇಂತಹ ಮಾತು ರಮಣೀಯವೇ, ಸರಸವೇ–ಎಂಬುದು ಕಾವ್ಯಮಾರ್ಗದಲ್ಲಿ ಸುಪ್ರಸಿದ್ಧ. ಗೃಹಸ್ಥರಿಗೆ ಅನುಭವವೇದ್ಯವಾದದ್ದೂ ಸಹ. ಇಷ್ಟೇ ಅಲ್ಲ. ಸೀತೆಯ ನುಡಿಯನ್ನು ಇನ್ನೂ ಕೇಳಿ:

"ಶ್ರೀರಾಮ, ಅನನ್ಯ ಪರಾಯಣಳಾದ (ನಿನ್ನನ್ನೇ ನಂಬಿರುವ) ನನ್ನನ್ನು ಬಿಟ್ಟು ಹೋಗಲು ಬಯಸಿದ್ದೀಯಲ್ಲ, ಯಾವ ಕಾರಣ ದಿಂದ ನಿನಗೆ ವಿಷಾದ ? ಯಾವುದಕ್ಕೆ ಭಯ ? ಸತ್ಯವಂತನನ್ನು ಸೇವೆ ಮಾಡಿಕೊಂಡಿದ್ದ ಸಾವಿತ್ರಿಯಂತೆ ನಾನು ನಿನಗೆ ಅಧೀನಳಾಗಿ ನಿನ್ನ ಸೇವೆ ಮಾಡಿಕೊಂಡು ಇರತಕ್ಕವಳೆಂದು ತಿಳಿ. ನಾನು ಮನಸ್ಸಿನಲ್ಲಿಯೂ ಇನ್ನೊಬ್ಬನನ್ನು ಸ್ಮರಿಸತಕ್ಕವಳಲ್ಲ. ನಾನು ನಿನ್ನೊಡನೆ ಬಂದೇ ಬರುತ್ತೇನೆ. ಕುಲಕ್ಕೆ ಕೆಟ್ಟಹೆಸರನ್ನುತರಬಾರದೆಂಬ ಇನ್ನೊಬ್ಬ ಸ್ತ್ರೀಯಾದಳೂ ಹೀಗೆಯೇ ಮಾಡುವಳು. ಕುಮಾರಿಯಾಗಿ ನಿನ್ನ ಕೈಹಿಡಿದು ನಿನ್ನ ಪತ್ನಿಯಾಗಿ ಇಷ್ಟು ಕಾಲ ಬಾಳಿದ್ದೇನೆ. ಈಗ ನನ್ನನ್ನು ನಾಟಕದಲ್ಲಿ ಕುಣಿಯುವ ನಟನಂತೆ ಇನ್ನೊಬ್ಬರಿಗೆ ಒಪ್ಪಿಸಿ ಹೋಗುವೆಯಾ? ಯಾವ ಧರ್ಮಕ್ಕೆ ಅನುಕೂಲವಾಗಿ ಆಚರಿಸಬೇಕೆಂದು ಸದಾ ಹೇಳುತ್ತಿರುವೆಯೋ, ಯಾವ ಧರ್ಮದ ಪಾಲನೆಗಾಗಿ ನೀನು ಇಂಥ ದಂಡನೆಯನ್ನು ಅಂಗೀಕರಿಸಿದ್ದೀಯೋ ಆ ಧರ್ಮಕ್ಕೆ ನೀನು ಅಧೀನನಾಗಿರು. ಪರಂತಪ, ದೋಷರಹಿತ, ಆ ಧರ್ಮಕ್ಕೆ ವಿಧೇಯನಾಗಿ ನಡೆದುಕೊ."

–ಅಯೋ. ೩೦, ೫–೯

ಇಷ್ಟು ಸದ್ಭಾವನೆಯಿಂದಾಡಿದ ವೀರ್ಯವತ್ತಾದ ನುಡಿಯಲ್ಲಿ ಯಾ ರಾ ದ ರೂ ಕೆಟ್ಟದ್ದನ್ನೇ ಹುಡುಕುವುದಾದರೆ ಅವರ 'ಸಹೃದಯತೆ'ಗೆ ದೂರದಿಂದಲೇ ನಮಸ್ಕಾರ. ದಿವಂಗತ ರೈ॥ ಆ॥ ಶ್ರೀನಿವಾಸ ಶಾಸ್ತ್ರಿಗಳು ಹೇಳುತ್ತಾರೆ : "This is a wicked thought that enters the mind of narrow-minded little-hearted men. I cannot forgive the people who speak ill of Sita" (*Lectures on the Ramayana*, p. 361)

ಅಲ್ಪಚೇತನರಾದ ನಮ್ಮ ಮಾತಿರಲಿ. ಮಾನಧನನೆಂದೂ ಪುರುಷೋತ್ತಮನೆಂದೂ ಕವಿಯೇ ಹಾಡಿ ಹೊಗಳಿದ ಶ್ರೀರಾಮನ ಪ್ರತಿಕ್ರಿಯೆಯಾದರೂ ಏನು? ಶೋಕಸಂತಪ್ತಳಾದ ಸೀತೆ ಹೀಗೆಯೇ ಹಲವು ಬಗೆಯಲ್ಲಿ ಕಾಡಿ, ಬೇಡಿ, ಗೋಳಾಡಿ ಕಡೆಯಲ್ಲಿ–

ಚುಕ್ರೋಶ ಪತಿಮಾಯಸ್ತಾ
ಭೃಶಮಾಲಿಂಗ್ಯ ಸಸ್ವರಂ॥

'ಆಯಾಸಗೊಂಡು ಗಂಡನನ್ನು ಬಿಗಿದಪ್ಪಿಕೊಂಡು ಗಟ್ಟಿಯಾಗಿ ಅಳತೊಡಗಿದಳು.'

ಆಗ ಶ್ರೀರಾಮನು ದುಃಖಾರ್ತಳಾಗಿ ಎಚ್ಚರದಪ್ಪಿದಂತಿದ್ದ ಸೀತೆಯನ್ನು ಆಲಿಂಗಿಸಿಕೊಂಡು ಸಂತೈಸುತ್ತ ಹೀಗೆಂದನು–

"ಸೀತೆ, ನಿನಗೆ ದುಃಖವನ್ನಿತ್ತು ನಾನು ಸ್ವರ್ಗಸುಖವನ್ನಾದರೂ ಬಯಸೆನು. ನನಗೆ ಎಲ್ಲಿಯೂ ಯಾರಿಂದಲೂ ಭಯವಿಲ್ಲ. ನಿನ್ನ ಹೃದ್ಗತವಾದ ಅಭಿಪ್ರಾಯವೆಲ್ಲವೂ ನನಗೆ ತಿಳಿದಿರಲಿಲ್ಲ. ಆದ್ದರಿಂದ ನಿನ್ನನ್ನು ರಕ್ಷಿಸಿಕೊಂಡಿರಲು ಸಮರ್ಥನಾದರೂ ಕಾಡಿಗೆ ಕರೆದೊಯ್ಯಲು ಇಷ್ಟಪಡಲಿಲ್ಲ. ಮೈಥಿಲಿ, ನನ್ನೊಡನೆ ವನವಾಸ ಮಾಡುವುದಕ್ಕಾಗಿ ನೀನು ಜನ್ಮವೆತ್ತಿದ್ದೀಯೆ.....

ಅನುಗಚ್ಛಸ್ವ ಮಾಂ ಭೀರು
ಸಹಧರ್ಮಚರೀ ಭವ ॥

–ನನ್ನೊಡನೆಬಾ. ಸಹಧರ್ಮಚಾರಿಣಿಯಾಗಿರು."

ಸಹೃದಯನಿಗೆ ಅತ್ಯಂತ ರೋಚಕವೂ ಕರುಣಾಜನಕವೂ ಆದ ಒಂದು ಭವ್ಯದೃಶ್ಯವನ್ನೇ ಇಲ್ಲಿ ಕವಿಯು ನಿರ್ಮಿಸಿದ್ದಾನೆ. ಕಲ್ಲು ಎದೆಯ ಬರಡು ಹೃದಯದವನಿಗೆ 'ಇಲ್ಲಿಯೂ ಕಾಮಪ್ರವೃತ್ತಿಯ ಅಭಿವ್ಯಕ್ತಿ' ಕಾಣುತ್ತದೆ. ಮೊಸರಿನಲ್ಲಿಯೂ ಕಲ್ಲು ಸಿಗುತ್ತದೆ!

ವನಕ್ಕೆ ಹೊರಡುವಾಗ ಸೀತೆಗೆ ಕೌಸಲ್ಯೆಯು ಕೆಲವು ಹಿತವಚನಗಳನ್ನು ಹೇಳುತ್ತಾಳೆ. ಆಗ ಸೀತೆ ಅತ್ತೆಗೆ ಕೈ ಮುಗಿದು "ದೇವಿ, ನೀನು ಆಜ್ಞೆಮಾಡಿದಂತೆಯೇ ನಡೆದುಕೊಳ್ಳುವೆನು. ಪತಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನಾನು ಬಲ್ಲೆ. ಗುರುಹಿರಿಯರು ನನಗೆ ಹೇಳಿಕೊಟ್ಟಿದ್ದಾರೆ. ಚಂದ್ರಿಕೆಯು ಹೇಗೆ ಚಂದ್ರನನ್ನು ಬಿಟ್ಟಿರದೋ ಹಾಗೆ ನಾನು ಧರ್ಮವನ್ನು ಬಿಟ್ಟು ಹೋಗತಕ್ಕವಳಲ್ಲ. ತಂತಿಯಿಲ್ಲದೆ ವೀಣೆ ನುಡಿಯದು. ಚಕ್ರವಿಲ್ಲದೆ ರಥವು ನಡೆಯದು. ಸ್ತ್ರೀಣಾಂ ಭರ್ತಾ ಹಿ ದೈವತಂ = ಹೆಂಗಸರಿಗೆ ಪತಿಯೇ ದೇವರು"

ಎನ್ನುತ್ತಾಳೆ (ಅಯೋ. ೩೯, ೨೭-೩೩).

ಕರುಣರಸ ಪ್ರವಾಹ

ಗಂಗಾನದಿಯನ್ನು ದಾಟುವಾಗ, "ನನ್ನ ಪತಿ ವನವಾಸವನ್ನು ಮುಗಿಸಿ ಸೌಖ್ಯದಿಂದ ಅಯೋಧ್ಯೆಗೆ ಹಿಂದಿರುಗಿ ಬರುವಂತಾಗಲಿ" ಎಂದು ಗಂಗೆಯನ್ನು ಬೇಡಿಕೊಳ್ಳುತ್ತಾಳೆ. ಯಮುನೆಗೆ ಪ್ರಾರ್ಥನೆ ಸಲ್ಲಿಸುತ್ತಾಳೆ. ವಟ ವೃಕ್ಷಕ್ಕೆ ಕೈ ಮುಗಿಯುತ್ತಾಳೆ. ಹರಕೆ ಹೊರುತ್ತಾಳೆ. ರಾಮಾಯಣವನ್ನು ವ್ಯಾಸಂಗ ಮಾಡುವ ಪ್ರತಿಯೊಬ್ಬರಿಗೂ ಸೀತೆಗೆ ಗಂಡನಲ್ಲಿರುವ ಅತಿಶಯವಾದ ಪ್ರೇಮ, ಭಕ್ತಿ, ದೃಢನಿಷ್ಠೆಗಳು ಹೆಜ್ಜೆಹೆಜ್ಜೆಗೂ ಗೋಚರಿಸುತ್ತವೆ. ರಾಮನು ಸೀತೆಯನ್ನು ಎಷ್ಟು ಪ್ರೀತಿಯಿಂದ ನೋಡಿಕೊಳ್ಳುತ್ತಲಿದ್ದನೆಂಬುದರ ಅರಿವಾಗುತ್ತದೆ. ರಾವಣನು ಸೀತೆಯನ್ನು ಅಪಹರಿಸಿದಾಗ ಆತನು ಶೋಕಿಸಿದ ಪರಿ ಎಷ್ಟು ? ಅದರ ಆಳವೆಷ್ಟು ? ಕರುಣರಸದ ಪ್ರವಾಹವೇ ಉಕ್ಕಿ ಹರಿಯುತ್ತದೆ. ಸೀತಾವಿರಹದಿಂದ ಅವನು ಹುಚ್ಚನಂತಾಗುತ್ತಾನೆ. ಗಿಡಮರಗಳನ್ನೂ ವನ್ಯ ಜಂತುಗಳನ್ನೂ ನೋಡಿ "ನನ್ನ ಕಾಂತೆಯನ್ನು ಕಂಡಿರಾ ?" ಎಂದು ಹಲುಬುತ್ತಾನೆ. ಸೀತೆಗಾಗಿ ನಾಲ್ಕು ಬಗೆಯಲ್ಲಿ ಶ್ರೀರಾಮನು ಪರಿತಪಿಸುತ್ತಿದ್ದನೆಂದು ಹನುಮಂತನ ವಿಶ್ಲೇಷಣೆ –

ಸ್ತ್ರೀ ಪ್ರನಷ್ಟೇತಿ ಕಾರುಣ್ಯಾತ್
ಆಶ್ರಿತೇತ್ಯಾನೃಶಂಸ್ಯತಃ ॥
ಪತ್ನೀ ನಷ್ಟೇತಿ ಶೋಕೇನ
ಪ್ರಿಯೇತಿ ಮದನೇನ ಚ ॥
– ಸುಂದರಕಾಂಡ, ೧೫-೫೦

"ಅಬಲೆಯಾದ ಸ್ತ್ರೀಯೊಬ್ಬಳು ರಾಕ್ಷಸನ ಕೈಗೆ ಸಿಕ್ಕಿದಳಲ್ಲ – ಎಂಬ ಕಾರುಣ್ಯ ಒಂದು; ತನ್ನನ್ನೇ ನಂಬಿ ಬಂದವಳನ್ನು ರಕ್ಷಿಸಲು ಆಗಲಿಲ್ಲವಲ್ಲ-ಎಂಬ ವ್ಯಥೆ ಒಂದು; ಕೈಹಿಡಿದ ಹೆಂಡತಿ ಎಂಬ ಚಿಂತೆ ಒಂದು; ತನಗೆ ಅತ್ಯಂತ ಪ್ರಿಯಳೆಂಬ ಮೋಹ ಇನ್ನೊಂದು. ಹೀಗೆ ನಾಲ್ಕು ವಿಧದಲ್ಲಿ ಇವಳಿಗಾಗಿ ಕೊರಗುತ್ತಿರುವನು."

ಒಂದು ಹಂತದಲ್ಲಿ ರಾಮನು ಕ್ರೋಧಾವಿಷ್ಟನಾಗಿ ಸೀತೆಯನ್ನು ಪಡೆಯುವುದಕ್ಕೋಸ್ಕರ "ನಾಶಯಾಮಿ ಜಗತ್ ಸರ್ವಂ ತ್ರೈಲೋಕ್ಯಂ ಸಚರಾಚರಂ" ಎಂದು ಆರ್ಭಟಿಸುತ್ತಾನೆ. 'ಒಬ್ಬ ರಾಕ್ಷಸನ ತಪ್ಪಿಗಾಗಿ ಜಗತ್ತನ್ನೇ ನಾಶಮಾಡುವುದು ಯುಕ್ತವಲ್ಲ'ವೆಂದು ಲಕ್ಷ್ಮಣನು ಸಂತೈಸುತ್ತಾನೆ.

* * *

ಇಷ್ಟೆಲ್ಲ ಏಕೆ ಬರೆಯಬೇಕಾಯಿತೆಂದರೆ, 'ರಾಮನು ತಾಪಸ, ಜಟಾಧಾರಿ, ಒಂದು ರೀತಿಯಲ್ಲಿ ಕೈಲಾಗದವನು. ಆದ್ದರಿಂದ ಸೀತೆಯ ಕಾಮಪ್ರವೃತ್ತಿ ಅನ್ಯತ್ರ ಹರಿಯಿತು' ಎಂದು ಅಸಂಬದ್ಧವಾಗಿ ಹಲುಬುವ ಉದ್ದನಾಲಗೆಯವರಿದ್ದಾರೆ, ಅವರಿಗಾಗಿ. ಸೀತೆ ವನಕ್ಕೆ ಬರುತ್ತೇನೆಂದು ನಿರ್ಬಂಧಿಸುವಾಗ ಶ್ರೀರಾಮನಿಗೆ ಹೇಳಿದ ಇನ್ನೊಂದು ಮಾತನ್ನು ಕೇಳಿ –

ಶುಶ್ರೂಷಮಾಣಾ ತೇ ನಿತ್ಯಂ ನಿಯತಾ
ಬ್ರಹ್ಮಚಾರಿಣೀ॥ (ಅಯೋ. ೨೭-೧೨)

"ಸದಾ ನಿಯಮಪೂರ್ವಕವಾಗಿ ಬ್ರಹ್ಮಚರ್ಯದಿಂದಿದ್ದು ನಿನ್ನ ಸೇವೆ ಮಾಡುತ್ತಿರುವೆನು."

'ಕಾಮುಸನ್ನಿ' ಎಂಬ ಒಂದು ರೋಗವಿದೆಯಂತೆ. ಅದು ಯಾರಿಗೆ ಬಂದು ಬಡಿಯುತ್ತದೆಯೋ ಅವರಿಗೆ ಜಗತ್ತೆಲ್ಲ ಕಾಮಮಯವಾಗಿ ಕಾಣುವುದಂತೆ. ಕಾಮವೇ ಪರಮ ಪುರುಷಾರ್ಥವಾಗುತ್ತದೆ. ಯಾರು ಏನು ಹೇಳಿದರೂ ಅವರಿಗೆ ಕಾಣುವುದು ಕಾಮದ ಸೂಚನೆಯೇ ! ಪ್ರಕೃತಿಯೆಲ್ಲವೂ ಕಾಮದ ಸಂಕೇತ ! ಮರದ ಎಲೆಗಳನ್ನು ನೋಡಿ ! ನೆಟ್ಟಿರುವ ತೊಟ್ಟನ್ನು ನೋಡಿ ! ಅದೆಲ್ಲ ಸ್ತ್ರೀ ಪುರುಷರ ಸಂಕೇತ. ಕೃಷ್ಣನೆಂದರೆ ಯಾರು ? ಅವನು ಕರಿಯ. ಕಪ್ಪು ಕಾಮದ ಸಂಕೇತ ! ಅವನು ಹಿಡಿದದ್ದು ಅರ್ಜುನನ ಕುದುರೆಗಳನ್ನು. ಕುದುರೆ ಏನನ್ನು ಸೂಚಿಸುತ್ತದೆ ? 'ವಾಜೀಕರಣ' ಎಂಬ ಶಬ್ದ ಕಾಮಶಾಸ್ತ್ರ ಪ್ರಸಿದ್ಧ. ಕೃಷ್ಣನ ಚಾಟಿ, ಕೊಳಲು –ಎಲ್ಲ ಈ ವಿಷಯವನ್ನು ಅಭಿವ್ಯಕ್ತಗೊಳಿಸುತ್ತವೆ. ಅವನನ್ನು ಭಗವಾನ್ ಎನ್ನುತ್ತಾರೆ. ಭಗ ಶಬ್ದದ ಅರ್ಥಕ್ಕೆ ಕೋಶವನ್ನು ನೋಡಬಹುದು. ಭಗವದ್ಗೀತೆ ಎಂದರೆ ಕಾಮಗೀತೆಯೇ.... ಹೀಗೆ ಬರೆದು ಕೋಲಾಹಲವೆಬ್ಬಿಸಿ ಡಾಕ್ಟರೇಟನ್ನು ಗಿಟ್ಟಿಸಿದ ಸಂಶೋಧಕ ಮಹನೀಯರಿರುವ ನಾಡು ನಮ್ಮದು !

(ಮುಂದುವರಿಯುವುದು)

ಏರುಪೇರು

“ಒಂದು ಸಾವಿರ ರೂಪಾಯಿ ಅವಸರವಾಗಿ ಬೇಕಾಗಿತ್ತು.”

“ನೂರಿ, ಒಂದು ದೊಡ್ಡ ತಪ್ಪು ಮಾಡಿಬಿಟ್ಟೆ ನಾನು” ಎಂದು ಕೈಗಳನ್ನು ಒ[illegible]ಂಡು ಪೇಳಿದ ನಸೀರ್. ಅವನ ಮುಖದಲ್ಲಿ ಬೇಸರದ ಛಾಯೆ ಮೂಡಿತ್ತು.”

ಉತ್ಥಾನ

ವಾಲ್ಮೀಕಿ ಮುನಿಗಳ ಸೀತಾಯನ

– ೨ –

'ವಿಚಾರವಾದಿ'ಗಳು, ಕುತ್ಸಿತಾರ್ಥ ಕಲ್ಪನೆಗಳು

• ಎನ್. ರಂಗನಾಥಶರ್ಮಾ

ರಾಮನಿಗೆ ಸೀತೆಯ ಬಗೆಗೆ ಉಪೇಕ್ಷೆ ಇತ್ತೆಂದು ಯಾವ ಬಾಯಿಂದ ಹೇಳಲಾದೀತು? 'ಪ್ರಾಣೇಭ್ಯೋऽಪಿ ಗರೀಯಸೀ – ನನ್ನ ಪ್ರಾಣಕ್ಕಿಂತಲೂ ನೀನು ನನಗೆ ಹೆಚ್ಚಿನವಳು' ಎಂದು ಆತನೇ ಹಲವು ಬಾರಿ ಸೀತೆಗೆ ಹೇಳಿದ್ದಾನೆ. ರಾಜ್ಯತ್ಯಾಗದ ಸಂದರ್ಭದಲ್ಲಿ 'ಸೀತೆಯನ್ನಾದರೂ ಭರತನಿಗೆ ಕೊಟ್ಟೇನು' ಎಂಬ ಮಾತು ಒಂದು ಕಡೆ ಬರುತ್ತದೆ. ಧರ್ಮದ ಮೇಲಿನ ಶ್ರದ್ಧೆಯಿಂದಲೂ ಭರತನಲ್ಲಿದ್ದ ವಾತ್ಸಲ್ಯದಿಂದಲೂ ಹೇಳಿದ ಮಾತಿದು. ತನಗೆ ಅತ್ಯಂತ ಪ್ರಿಯಳಾದವಳು ಸೀತೆ. ಭರತನಿಗೆ ಹಿತವಾಗುವುದಾದರೆ ಸರ್ವಸ್ವವನ್ನೂ ಬಿಟ್ಟುಕೊಡುತ್ತೇನೆ, ಸೀತೆಯನ್ನಾದರೂ ತ್ಯಜಿಸುತ್ತೇನೆ ಎಂದು ತಾತ್ಪರ್ಯವೇ ಹೊರತು ಸೀತೆಯನ್ನು ಭರತನಿಗೆ ಕೊಟ್ಟುಬಿಡುತ್ತೇನೆ ಎಂದರ್ಥವಲ್ಲ. ಅಂತಹ ಅಧರ್ಮದ ನುಡಿ ರಾಮನ ಬಾಯಿಂದ ಬಂದೀತೆಂದು ಊಹಿಸಲೂ ಸಾಧ್ಯವಿಲ್ಲ. ಕಾವ್ಯವನ್ನೋದುವ ಬಗೆ ಇದಲ್ಲ. ಲೋಕದಲ್ಲಿಯೂ ಸಹ 'ಸಿಹಿತಿಂಡಿಗಾಗಿ ಪ್ರಾಣವನ್ನೇ ಬಿಡುತ್ತಾನೆ' ಎಂಬ ಮಾತಿಗೆ ನೇರವಾದ ವಾಚ್ಯಾರ್ಥವನ್ನು ಹಿಡಿಯಲಾದೀತೆ? ಪ್ರಾಣವೇ ಬೇಡವಾದವನಿಗೆ ಸಿಹಿತಿಂಡಿ ಏಕೆ?

'ಅಭಿವ್ಯಕ್ತಿವಾದಿ'ಗಳು ಧ್ವನಿಸ್ಥಳದಲ್ಲಿ ವಾಚ್ಯಾರ್ಥವನ್ನೇ ಹಿಡಿದು ತಮಗೆ ತೋರಿದಂತೆ ಹೇಳುವುದು ಒಂದು 'ಅಪೂರ್ವ ಸಹೃದಯತೆ'!

ಹನುಮಂತನು ಸೀತೆಗೆ ಹೇಳುವ ಮಾತಿದು: "ದೇವಿ, ರಾಮನ ಮನಸ್ಸು ನಿನ್ನಲ್ಲಿಯೇ ಲೀನವಾಗಿರುವುದರಿಂದ, ತನ್ನ ಮೈಮೇಲೆ ಕಾಡುನೊಣವಾಗಲಿ, ಸೊಳ್ಳೆಯಾಗಲಿ, ಹುಳುಹುಪ್ಪಟೆಗಳಾಗಲಿ ಎರಗಿದರೆ ಅವುಗಳನ್ನು ಓಡಿಸುವುದೇ ಇಲ್ಲ. ಕಾಮವಶನಾಗಿ ಸದಾ ನಿನ್ನನ್ನು ಚಿಂತಿಸುತ್ತ, ಶೋಕಿಸುತ್ತ ಇರುವನು. ಬೇರೆ ಯಾವುದನ್ನೂ ಯೋಚಿಸುವುದೇ ಇಲ್ಲ. ಆತನಿಗೆ ನಿದ್ರೆಯೇ ಬರುತ್ತಿಲ್ಲ. ಆಕಸ್ಮಿಕವಾಗಿ ನಿದ್ರೆ ಬಂದರೂ 'ಹಾ ಸೀತೆ' ಎಂದು ಕನವರಿಸುತ್ತಲೇ ಎಚ್ಚರಗೊಳ್ಳುವನು. ಹಣ್ಣನ್ನಾಗಲಿ ಸುಂದರವಾದ ಹೂವನ್ನಾಗಲಿ ನೋಡಿದರೆ, ನಿನ್ನನ್ನು ಸ್ಮರಿಸಿಕೊಂಡು 'ಹಾ ಸೀತೆ' ಎಂದು ಹಂಬಲಿಸುತ್ತ ನಿಟ್ಟುಸಿರು ಬಿಡುವನು" (ಸುಂದರಕಾಂಡ, ೩೬, ೪೩–೪೫).

ಸೇನಾಸಮೇತನಾಗಿ ಶ್ರೀರಾಮನು ಸಮುದ್ರದ ತೀರಕ್ಕೆ ಬಂದಿದ್ದಾನೆ. ಆಚೆಯ ದಡದ ಲಂಕೆಯಲ್ಲಿ ಅವಳಿರುವುದನ್ನು ನೆನೆಸಿಕೊಂಡು ಆತನ ವಿರಹಶೋಕ ಉಲ್ಬಣಿಸುತ್ತದೆ. ಆಗ ಲಕ್ಷ್ಮಣನೊಡನೆ ವಿಲಪಿಸುತ್ತ ಹೇಳುತ್ತಾನೆ: "ವತ್ಸ–ಲಕ್ಷ್ಮಣ, ಕಾಲವು ಕಳೆದಂತೆ ಶೋಕವು ಯಾರಿಗಾದರೂ ಕಡಿಮೆಯಾಗುವುದುಂಟು. ನನಗಾದರೋ ನನ್ನ ಕಾಂತೆಯನ್ನು ನೋಡದೆ ಶೋಕವು ದಿನದಿನವೂ ಹೆಚ್ಚುತ್ತಲಿದೆ.. ನನ್ನ ದುಃಖವೇನೆಂದರೆ, ಅವಳ ತಾರುಣ್ಯವು ವ್ಯರ್ಥವಾಗಿ ಕಳೆದುಹೋಗುತ್ತದೆ ಎಂದು. ಓ ತಂಗಾಳಿಯೇ, ನನ್ನ ಇನಿಯಳು ಎಲ್ಲಿರುವಳೋ ಆ ದಿಕ್ಕಿನಿಂದ ಬೀಸುತ್ತ ಬಾ! ಅವಳನ್ನು ಸ್ಪರ್ಶಿಸಿ ನನ್ನನ್ನೂ ಬಂದು ಸ್ಪರ್ಶಿಸು! ಆಗ ನಿನ್ನ ಸ್ಪರ್ಶದಿಂದ ಅವಳನ್ನು ಮುಟ್ಟಿದಂತಾಗುವುದು. ಸೀತೆಯು ನೋಡುವ ಚಂದ್ರನನ್ನು ನೋಡಿದಾಗ, ನಮ್ಮೀರ್ವರ ದೃಷ್ಟಿಯು ಕೂಡಿತು – ಒಬ್ಬರನ್ನೊಬ್ಬರು ನೋಡಿದೆವೆಂದು ತಿಳಿಯುತ್ತಿದ್ದೇನೆ! ...ಮನ್ಮಥಾಗ್ನಿಯು ಅಹೋರಾತ್ರವೂ ನನ್ನನ್ನು ಉರುಬುತ್ತಿದೆ. ಈ ಅಗ್ನಿಗೆ ಅವಳ ವಿರಹವೇ ಇಂಧನವಾಯಿತು. ಅವಳ ಚಿಂತೆಯೇ ಕರಾಳ ಜ್ವಾಲೆಯಾಯಿತು. ತಮ್ಮ, ನಿನ್ನನ್ನು ಬಿಟ್ಟು ಈ ಸಮುದ್ರದಲ್ಲಿ ಮುಳುಗಿ ಮಲಗಿಬಿಡುವೆನು.

ಆಗ ಈ ಮನ್ಮಥಾಗ್ನಿಯು ನನ್ನನ್ನು ಸುಟ್ಟು ಬೂದಿಮಾಡಲಾರದು!" (ಯುದ್ಧಕಾಂಡ, ೫, ೫-೯)

ಈ ಬಗೆಯ ಸಾಕ್ಷ್ಯಗಳನ್ನು ಪುಟಗಟ್ಟಲೆ ಬರೆದು ತೋರಿಸಬಹುದು. ಕಣ್ಣಿದ್ದೂ ಕುರುಡರಾದವರಿಗೆ ಏನನ್ನು ತೋರಿಸೋಣ ? ಕಿವಿಯಿದ್ದೂ ಕಿವುಡರಾದವರಿಗೆ ಏನನ್ನು ಹೇಳೋಣ?

ವಿರಾಧಪ್ರಸಂಗ

ಅರಣ್ಯಕಾಂಡದ ಆರಂಭದಲ್ಲಿಯೇ ಶ್ರೀರಾಮನ ಶಂಕೆ ದಿಟವಾಗುತ್ತದೆ. ವಿರಾಧನೆಂಬ ರಾಕ್ಷಸನು ನುಗ್ಗಿಬಂದು ಸೀತಾದೇವಿಯನ್ನು ಎಳೆದೊಯ್ಯುತ್ತ ರಾಮಲಕ್ಷ್ಮಣರನ್ನು ಕುರಿತು "ಎಲೈ, ಯಾರು ನೀವು ? ಜಟೆಯನ್ನು ಕಟ್ಟಿ ನಾರುಬಟ್ಟೆಯನ್ನುಟ್ಟಿದ್ದೀರಿ. ಹೆಂಗಸೊಬ್ಬಳನ್ನು ಕರೆತಂದಿದ್ದೀರಿ. ನಿಮ್ಮ ಆಯುಸ್ಸು ಮುಗಿಯಿತು" ಎಂದು ಅಬ್ಬರಿಸುತ್ತಾನೆ (ಅರಣ್ಯ, ೩-೧೦). ಇಲ್ಲಿ ವಿರಾಧನು ಬಳಸಿರುವ ಮಾತು 'ಸಭಾರ್ಯೌ' ಎಂದು. ಇಲ್ಲಿ ಭಾರ್ಯೆಯೆಂದರೆ ಹೆಂಗಸೆಂದು ಸಾಮಾನ್ಯಾರ್ಥವೇ ಹೊರತು ಮಡದಿಯೆಂಬ ವಿಶೇಷಾರ್ಥವಲ್ಲ. "ವಾಸಃ ಪ್ರಮದಯಾ ಸಹ" ಎಂದು ಆಮೇಲೆ ಹೇಳಿದ ವಿರಾಧನ ಮಾತಿನಿಂದಲೇ ಇದು ಸ್ಪಷ್ಟವಾಗಿದೆ. ಅವಳು ಯಾರೆಂಬುದು ಆ ರಾಕ್ಷಸನಿಗೇನು ಗೊತ್ತು ? ಭಾರ್ಯಾ ಶಬ್ದಕ್ಕೆ ಹೆಂಡತಿಯೆಂದೇ ಅರ್ಥಮಾಡುವುದಾದರೂ ಅದು ವಿರಾಧನ ನಿರಾಧಾರವಾದ ಊಹೆಯೇ ಹೊರತು ಅದಕ್ಕೆ ಮೂರು ಕಾಸಿನ ಬೆಲೆಯೂ ಇಲ್ಲ. ಇಷ್ಟುಮಾತ್ರದಿಂದ ವಿರಾಧನ ಹೇಳಿಕೆಯಂತೆ "ಸೀತೆ ರಾಮಲಕ್ಷ್ಮಣರ ಹೆಂಡತಿ" ಎಂದು ತಮ್ಮ ಕುತ್ಸಿತಾರ್ಥಕ್ಕೆ ಮೆರುಗು ಕೊಡುವುದು ಮತಿಗೇಡಿತನದ ಪರಮಾವಧಿ. ವಿರಾಧನು ಸೀತೆಯನ್ನು ಒಯ್ಯುತ್ತಿರುವಾಗ ಶ್ರೀರಾಮನು ದುಃಖಿತನಾಗುತ್ತಾನೆ. ಅವನು ಕೈಲಾಗದವನೆಂಬುದಕ್ಕೆ ಅದು ಅಭಿವ್ಯಕ್ತಿಯೆಂದು ವಿಚಾರವಾದಿಗಳು ಕಂಡುಹಿಡಿದ ಕಾವ್ಯರಹಸ್ಯ. ಲಕ್ಷ್ಮಣನು ಅವನ ಶೋಕವನ್ನು ಕಂಡು ಕೆಣಕಿದ ಸರ್ಪದಂತೆ ಫೂತ್ಕರಿಸುತ್ತಾನೆ. 'ಕೆಣಕಿದ ಸರ್ಪದಂತೆ' ಎಂಬ ಉಪಮಾನ ಕಾಮದ ಸಂಕೇತವಂತೆ ! ಹೀಗೆ ಅಕಾಂಡತಾಂಡವ ಮಾಡತಕ್ಕವರಿಗಾಗಿ ಯಾರೂ ತಾಳ ಕುಟ್ಟುವುದಿಲ್ಲ.

ಶ್ರೀರಾಮನ ಶೋಕದ ವಿಷಯವಾಗಿ ಒಂದು ಮಾತು.

ಅರಣ್ಯವನ್ನು ಪ್ರವೇಶಿಸುತ್ತಿದ್ದಂತೆಯೇ ಎರಗಿಬಂದ ಮಹಾಸಂಕಟದ ಸಂದರ್ಭವಿದು. ತನ್ನನ್ನೇ ನಂಬಿಬಂದ, ತನ್ನ ಪ್ರಾಣಪ್ರಿಯಳಾದ ಸೀತೆಗೆ ಇದ್ದಕ್ಕಿದ್ದಂತೆ ಒದಗಿದ ವಿಪತ್ತನ್ನು ಕಂಡು ಶ್ರೀರಾಮನಿಗೆ ದುಃಖವಾದದ್ದು ಸಹಜವೇ. ಇದು ಮೊದಲು ಉಕ್ಕಿಬಂದ ಭಾವೋದಯ. ಮರುಕ್ಷಣದಲ್ಲಿ ಈ ದುಃಖವೇ ಕ್ರೋಧವಾಗಿ ಪರಿಣಮಿಸಿ ಭುಗಿಲ್ ಎನ್ನುತ್ತದೆ.

ಕ್ಷುದ್ರ ಧಿಕ್ ತ್ವಾಂ ತು ಹೀನಾರ್ಥಂ
ಮೃತ್ಯುಮನ್ವೇಷಸೇ ಧ್ರುವಂ ॥

'ಥೂ, ನೀಚ, ನಿನಗೆ ಧಿಕ್ಕಾರ. ನೀನು ಮೃತ್ಯುವನ್ನು ಹುಡುಕಿಕೊಂಡು ಬಂದಿದ್ದೀಯೆಂಬುದು ನಿಶ್ಚಯ' – ಎಂದು ಹೇಳುತ್ತ ಶ್ರೀರಾಮನು ಧನುಸ್ಸಿಗೆ ಹೆದೆಯೇರಿಸಿ ತೀಕ್ಷ್ಣಾಸ್ತ್ರಗಳನ್ನು ಹೂಡಿ ವಿರಾಧನ ಮೇಲೆ ಪ್ರಯೋಗಿಸುತ್ತಾನೆ. ವಿರಾಧನ ಬಲತೋಳನ್ನು ಕತ್ತರಿಸಿ ಹಾಕಿದವನು ಶ್ರೀರಾಮನೇ. ಅತ್ಯಂತ ಪ್ರಿಯರಾದವರಿಗೆ ಮಹಾವಿಪತ್ತು ಒದಗಿದಾಗ ಮೊದಲು ಶೋಕ, ಅನಂತರ ಕ್ರೋಧ–ಎನ್ನುವುದು ಶ್ರೇಷ್ಠ ಕವಿಗಳು ವರ್ಣಿಸುವ ರೀತಿ; ಲೋಕಾನುಭವಸಿದ್ಧವಾದದ್ದು. ಇಂದ್ರಜಿತು ಸತ್ತಾಗ ರಾವಣನೂ, ಅಭಿಮನ್ಯು ಮೃತನಾದಾಗ ಅರ್ಜುನನೂ, ಕರ್ಣನು ಹತನಾದಾಗ ದುರ್ಯೋಧನನೂ ಮೊದಲು ಶೋಕಿಸಿದ್ದಾರೆ. ಆಮೇಲೆ ಕ್ರೋಧಾವಿಷ್ಟರಾಗಿದ್ದಾರೆ. ಅವರು ಕೈಲಾಗದ ಹೇಡಿಗಳೆ ?

ಖರ, ದೂಷಣ ತ್ರಿಶಿರರನ್ನೂ ಅವರ ಹದಿನಾಲ್ಕು ಸಾವಿರ ರಾಕ್ಷಸಸೇನೆಯನ್ನೂ ಏಕಾಕಿಯಾಗಿ ಕೊಚ್ಚಿಹಾಕಿದವನು ರಾಮ. ಆಗ ಲಕ್ಷ್ಮಣನು ಸಹಾಯಕ್ಕಿದ್ದನೆ ? ದರ್ಭಶಯನದಲ್ಲಿ ಮಲಗಿ ಬೇಡಿಕೊಂಡರೂ ಸಮುದ್ರರಾಜನು ಒಲಿಯದೆ ಹೋದಾಗ

ಸಮುದ್ರಂ ಶೋಷಯಿಷ್ಯಾಮಿ
ಪದ್ಭ್ಯಾಂ ಯಾಂತು ಪ್ಲವಂಗಮಾಃ

'ಸಮುದ್ರವನ್ನು ಒಣಗಿಸಿಬಿಡುತ್ತೇನೆ. ವಾನರರು ಕಾಲ್ನಡಿಗೆಯಲ್ಲೇ ಲಂಕೆಗೆ ಹೋಗಲಿ' ಎಂದು ಉಗ್ಗಡಿಸಿ, ಘೋರಾಸ್ತ್ರಗಳನ್ನು ಸಮುದ್ರದ ಮೇಲೆ ಪ್ರಯೋಗಿಸಿದಾಗ ಸಮುದ್ರ

ರಾಜ ಹೆದರಿ ನಡುಗಿ ರಾಮನಿಗೆ ಶರಣಾದ. ಶರಣಾರ್ಥಿಯಾಗಿ ಬಂದ ವಿಭೀಷಣನನ್ನು ಸೇರಿಸಿಕೊಳ್ಳುವುದು ತರವಲ್ಲವೆಂದೂ ಅವನು ಗುಪ್ತಚಾರನಾಗಿದ್ದು ವಾನರಸೇನೆಗೆ ಧಕ್ಕೆಯನ್ನು ತಂದಾನೆಂದೂ ಸುಗ್ರೀವನು ಹೇಳಿದಾಗ,

ಅಂಗುಲ್ಯಗ್ರೇಣ ತಾನ್ ಹನ್ಯಾ-
ಮಿಚ್ಛನ್ ಹರಿಗಣೇಶ್ವರ

"ಸುಗ್ರೀವ, ನಾನು ಮನಸ್ಸು ಮಾಡಿದರೆ ಬೆರಳಿನ ತುದಿಯಿಂದ ಈ ರಾಕ್ಷಸರನ್ನೆಲ್ಲಾ ಸದೆಬಡಿದೇನು" ಎಂದನಲ್ಲವೆ? ವಿಭೀಷಣನನ್ನು ಕರೆದುಕೊಂಡು ಬಾ, ಶರಣಾಗತರಾಗಿ ಬಂದವರಿಗೆ,

ಅಭಯಂ ಸರ್ವಭೂತೇಭ್ಯೋ
ದದಾಮ್ಯೇತದ್ವ್ರತಂ ಮಮ

"ಸಕಲರಿಗೂ ಅಭಯದಾನವೀಯುತ್ತೇನೆ. ಇದು ನನ್ನ ವ್ರತ" ಎಂದು ಘೋಷಿಸಿದ ಧೀರೋದಾತ್ತನು ಕೈಲಾಗದವನೆ?

ವಿಸ್ತರಿಸುವುದು ಬೇಡ. ರಾಮನು ಕೈಲಾಗದವನೆಂದು ಹೇಳತಕ್ಕದ್ದು ನೈತಿಕ ಜವಾಬ್ದಾರಿಯೊಂದೂ ಇಲ್ಲದವರ ಹತೋಟಿ ತಪ್ಪಿದ ನಾಲಗೆ.

ಸೀತಾಪಹಾರ ಪ್ರಸಂಗ

ಮಾಯಾಮೃಗವನ್ನು ನೋಡಿ ಸೀತೆ ಮುಗ್ಧಳಾಗುತ್ತಾಳೆ. ರಾಮಲಕ್ಷ್ಮಣರನ್ನು ಕರೆದು ತೋರಿಸಿ ಆ ಮೃಗ ತನಗೆ ಬೇಕೆಂದು ರಾಮನಿಗೆ ಹೇಳುತ್ತಾಳೆ. ಆ ಮೃಗ 'ಕಾಮರೂಪಿ' ಎಂದು ಹೇಳಿದವನು ಲಕ್ಷ್ಮಣ. "ಮಾರೀಚನು ಕಾಮರೂಪಿ. ಮಾಯೆಯನ್ನು ಬಲ್ಲವನು. ಅವನು ಮಾಯೆಯಿಂದ ಮೃಗರೂಪವನ್ನು ಧರಿಸಿದ್ದಾನೆ. ಇದು ನಿಶ್ಚಯವಾಗಿಯೂ ಮಾಯೆಯೇ ಹೌದು. ಈ ಬಗೆಯ ಮೃಗ ಸಹಜವಾಗಿ ಎಲ್ಲಿಯೂ ಇರುವುದಿಲ್ಲ"ಎನ್ನುತ್ತಾನೆ ಲಕ್ಷ್ಮಣ. ಇಲ್ಲಿ 'ಕಾಮರೂಪಿ' ಎಂದರೇನು? ಇಚ್ಛಾನುಗುಣವಾಗಿ

ರಾಮನು ಕೈಲಾಗದವನೆಂದು ಹೇಳಬಲ್ಲವರು ನೈತಿಕ ಜವಾಬ್ದಾರಿ ಇಲ್ಲದವರು ಮಾತ್ರ

ಲಂಕಾಯುದ್ಧ ಪ್ರಸಂಗದಲ್ಲಿ ಒಂದು ದಿನ ಶ್ರೀರಾಮನೊಬ್ಬನೇ ರಾಕ್ಷಸಸೇನೆಯಲ್ಲಿ ನುಗ್ಗಿಬಿಡುತ್ತಾನೆ. ರಾಕ್ಷಸಸೇನೆಯನ್ನು ವಿಧ್ವಂಸಗೊಳಿಸುತ್ತಾನೆ. ಆತನ ಯುದ್ಧವೈಖರಿಯನ್ನು ವಾನರರು ಮಿಕಮಿಕನೆ ನೋಡುತ್ತ ನಿಂತಿರುತ್ತಾರೆ. ವಿಜಯಶಾಲಿಯಾಗಿ ಅವನು ಹಿಂದಿರುಗಿ ಬಂದಾಗ ಅವನ ಅಸಾಧಾರಣ ಪರಾಕ್ರಮವನ್ನು ಸುಗ್ರೀವಾದಿಗಳು ಹೊಗಳಿ ಅಭಿನಂದಿಸುತ್ತಾರೆ. ಆಗ ಶ್ರೀರಾಮನಾಡಿದ ಮಾತಿದು–

ಏತದಸ್ತ್ರಬಲಂ ದಿವ್ಯಂ
ಮಮ ವಾ ತ್ರ್ಯಂಬಕಸ್ಯ ವಾ ||
– ಯುದ್ಧಕಾಂಡ, ೯೪–೩೮

"ಮಿತ್ರರೆ, ದಿವ್ಯವಾದ ಈ ಅಸ್ತ್ರಪ್ರಯೋಗ ಬಲವು ನನಗೊಬ್ಬನಿಗುಂಟು, ಮುಕ್ಕಣ್ಣನಾದ ಪರಮೇಶ್ವರನೊಬ್ಬನಿಗುಂಟು!" ಎನ್ನುತ್ತಾನೆ. 'ಅಹೋನು ಬಲವಾನ್ ರಾಮಃ'– 'ಅಬ್ಬಾ! ರಾಮನು ಬಲಶಾಲಿಯೇ ಹೌದು' ಎಂದು ಉದ್ಗರಿಸಿದವನು ರಾವಣನೇ. ಇದನ್ನು ಇನ್ನೂ ವಿಭಿನ್ನರೂಪವನ್ನು ಧರಿಸಬಲ್ಲವನೆಂದೇ ಅರ್ಥ. ಇಂದ್ರಜಿತು ಮೊದಲಾದವರು ಕಾಮರೂಪಿಗಳೆಂದು ವಾಲ್ಮೀಕಿಗಳು ಹಲವಾರು ಕಡೆ ಹೇಳಿದ್ದಾರೆ.

ಆದರೆ ವಿಚಾರವಾದಿಗಳಿಗೆ ತೋರುವ 'ಕಾಮ'ವೇ ಬೇರೆ. ಭೇತಾಳವು ವಿಕ್ರಮನ ಮೇಲೆ ಕುಳಿತರೆ, ಈ ಕಾಮಭೇತಾಳ ಇವರ ತಲೆಯ ಮೇಲೆ ಕುಳಿತಿರುತ್ತದೆ. "ಒಂದು ವೇಳೆ ಮೃಗವನ್ನು ಸಂಹರಿಸಬೇಕಾಗಿ ಬಂದರೆ, ಆ ಚರ್ಮದ ಮೇಲೆ (ನಿನ್ನೊಡನೆ) ಕುಳಿತುಕೊಳ್ಳಬೇಕೆಂದು ನನಗೆ ಆಸೆ" ಎನ್ನುತ್ತಾಳೆ ಸೀತೆ ರಾಮನನ್ನು ಕುರಿತು. "ಇಲ್ಲಿ ಜಿಂಕೆ, ಸೀತೆಯ ಮನಸ್ಸನ್ನು ಪ್ರಚೋದಿಸುವ ಪ್ರಚಂಡವಾದ ಕಾಮದ ಪ್ರತಿಮೆಯಾಗಿ ನಿಲ್ಲುತ್ತದೆ" ಎನ್ನುತ್ತಾರೆ ಅಭಿವ್ಯಕ್ತಿವಾದಿಗಳು! ಸೀತೆಯ ನುಡಿಯಲ್ಲಿ ರಾಮನೊಡನೆ ಎಂಬರ್ಥದ 'ನಿನ್ನೊಡನೆ' ಎಂಬ ಅಧ್ಯಾಹಾರ ಕೂಡ ಇವರಿಗೆ ಆಕ್ಷೇಪಣೀಯ! ಈ ಶ್ಲೋಕವನ್ನು ಗಮನಿಸಿ–

ದೀಕ್ಷಿತಂ ವ್ರತಸಂಪನ್ನಂ
ವರಾಜಿನಧರಂ ಶುಚಿಂ ।
ಕುರಂಗಶೃಂಗಪಾಣಿಂ ಚ
ಪಶ್ಯಂತೀ ತ್ವಾಂ ಭಜಾಮ್ಯಹಂ ॥
–ಅಯೋಧ್ಯಾ. ೧೭–೨೩

ತನ್ನ ಪತಿಗೆ ಮುಂದೆ ರಾಜಸೂಯಯಾಗ ನಡೆಸಲು ಯೋಗ್ಯವಾದ ಮಹಾರಾಜ ಪಟ್ಟಾಭಿಷೇಕವೂ ನಡೆಯಲಿಲ್ಲ ಹಾರೈಸಿ ಹೇಳುತ್ತಾಳೆ: "ನೀನು ಯಜ್ಞದೀಕ್ಷಿತನಾಗಿ ವ್ರತನಿಷ್ಠೆಯಿಂದ ಕೃಷ್ಣಾಜಿನವನ್ನು ಧರಿಸಿ ಮೃಗಶೃಂಗವನ್ನು ಕೈಯಲ್ಲಿ ಹಿಡಿದು ಶುಚಿಯಾಗಿ ಕುಳಿತಿರುವುದನ್ನು ನೋಡುತ್ತ, ನಿನ್ನೊಡನೆ ಕುಳಿತಿರಬೇಕೆಂದು ನನಗೆ ಆಸೆಯಾಗಿದೆ."

ಯಜ್ಞದೀಕ್ಷೆಯಲ್ಲಿ ಪತಿಯೊಡನೆ ಪತ್ನಿ ಕುಳಿತಿರಬೇಕಾದದ್ದು ಶಾಸ್ತ್ರವಿಹಿತ. ಇದಕ್ಕೆ ಅನುಗುಣವಾಗಿ ಆ ತಾಯಿಯ ವಿನಯವನ್ನೂ ಸಾಧುವೃತ್ತವನ್ನೂ ಪತಿಪ್ರೇಮವನ್ನೂ ಅನುಲಕ್ಷಿಸಿ 'ನಿನ್ನೊಡನೆ' ಎಂದು ಅಧ್ಯಾಹಾರ ಮಾಡುವುದು ಅತ್ಯಾವಶ್ಯಕ. ವ್ಯಾಖ್ಯಾನಕಾರರೂ ಕೂಡಾ 'ತ್ವಯಾ ಸಹ–ನಿನ್ನೊಡನೆ' ಎಂದು ಅಧ್ಯಾಹಾರ ಮಾಡಿದ್ದಾರೆ. ಅವರೇನೂ ಮೂರ್ಖರಲ್ಲ. ಮೃಗವು ಬೇಕೆಂದು ಸೀತೆ ಒತ್ತಾಯ ಮಾಡಿದ ಮೇಲೆ ತನ್ನ ಒತ್ತಡ ಸರಿಯಲ್ಲವೆಂದು ಅವಳಿಗೆ ಅರಿವಾಗುತ್ತದೆ. ಈ ವಸ್ತು ಬೇಕೆಂದು ಹಠ ಹಿಡಿಯುವುದು ಸಾಧ್ವಿಯ ಲಕ್ಷಣವಲ್ಲ. ಸುಂದರವಾದ ಮೃಗವನ್ನು ಕೊಂದಾದರೂ ಚರ್ಮವನ್ನು ಬಯಸುವುದು ಕ್ರೌರ್ಯ. ಆದರೆ ತಡೆಯಲಾರದ ಆಸೆ ಹುಟ್ಟಿಬಿಟ್ಟಿದೆ. ಅವಳ್ಳ್ಹೇಳುತ್ತಾಳೆ –

ಕಾಮವೃತ್ತಮಿದಂ ರೌದ್ರಂ
ಸ್ತ್ರೀಣಾಮಸದೃಶಂ ಮತಂ ॥

"ನಾನು ಹೀಗೆ ಸ್ವೇಚ್ಛೆಯಿಂದ ಹಠ ಮಾಡುವುದು ಕ್ರೂರತನವೇನೋ ಹೌದು ; ಸ್ತ್ರೀಯರಿಗೆ ಯೋಗ್ಯವಲ್ಲ." ಇದು ಸಹಜವಾದ ಅರ್ಥ. ಕಾಮವೆಂದರೆ ಇಚ್ಛೆಯೇ. ಮೃಗದ ಬಯಕೆಯನ್ನು ನಿಗ್ರಹಿಸಲು ಅವಳಿಗೆ ಸಾಧ್ಯವಾಗಿಲ್ಲ. ಕಾಮವೃತ್ತವೆಂದರೆ 'ದುರ್ನಿಗ್ರಹೇಚ್ಛತ್ವಂ' ಎಂದುಗೋವಿಂದರಾಜರ ವ್ಯಾಖ್ಯಾನವಿದೆ. ಆಪ್ಟೇಯವರ ಸಂಸ್ಕೃತ-ಇಂಗ್ಲಿಷ್ ನಿಘಂಟುವಿನಲ್ಲಿ ಕಾಮವೃತ್ತ ಶಬ್ದಕ್ಕೆ Acting according to will, self-willed, independent ಎಂದು ಅರ್ಥ ಬರೆದಿದ್ದಾರೆ. ಕಾಮಕಾರ, ಕಾಮಚಾರಿ, ಕಾಮ-ರೂಪಿ ಮುಂತಾದ ಸ್ಥಳದಲ್ಲಿ ಕಾಮ ಶಬ್ದಕ್ಕೆ ಇಚ್ಛೆ ಎಂದೇ ಅರ್ಥ. ಪ್ರಕೃತದಲ್ಲಂತೂ ಅದೇ ಸರಿಯಾದ ಅನುವಾದ. ಅಭಿವ್ಯಕ್ತಿವಾದಿಗಳಿಗೆ ಮಾತ್ರ ಇಲ್ಲಿ ಸೀತೆಯ ಕಾಮಾಕಾಂಕ್ಷೆ ತೋರಿಬಿಡುತ್ತದೆ! "ರುದ್ರವಾದ ಈ ಕಾಮಪ್ರವೃತ್ತಿ ಸ್ತ್ರೀಯರಿಗೆ ಸದೃಶವಾದುದಲ್ಲ" ಎಂದು ಸೀತೆ ರಾಮನಿಗೆ ಹೇಳುತ್ತಾಳಂತೆ. ಗಂಡುಬೀರಿಯಾದ ಯಾವ ಬಜಾರಿ ಹೆಂಗಸೂ ಗಂಡನಿಗೆ ಈ ಮಾತನ್ನು ಹೇಳುವುದಿಲ್ಲವೆಂದು ನೆನಪಿಡಬೇಕು.

ಶ್ರೀರಾಮನ ಬಾಣದ ಹೊಡೆತದಿಂದ ಮಾರೀಚನು ಸಾಯುವಾಗ 'ಹಾ ಸೀತೇ, ಲಕ್ಷ್ಮಣಾ' ಎಂದು ಗಟ್ಟಿಯಾಗಿ ಕೂಗಿಕೊಂಡ. ಆತನು ರಾವಣನಿಗೆ ಮಾಡಿದ ಚರಮಸೇವೆ ಅದು. ಲಕ್ಷ್ಮಣನನ್ನು ಸೀತೆಯಿಂದ ದೂರ ಸೆಳೆಯುವ ಕಪಟೋಪಾಯ. ಇದು ಎಂತಹ ಮೂಢ-ಮೂರ್ಖ-ಗಾರ್ದಭರಿಗೂ ಅರ್ಥವಾಗುತ್ತದೆ. 'ಈ ಅಶರೀರವಾಣಿ ಸೀತಾಲಕ್ಷ್ಮಣರ ಅನುಬಂಧವನ್ನು ಖಚಿತಪಡಿಸುತ್ತದೆ' ಎಂದು ವಿಚಾರವಾದಿಗಳ ಅಂಬೋಣ. ಅನುಬಂಧವೆಂದರೆ ಅವರಿಬ್ಬರಿಗಿದ್ದ ಕಾಮಾಕಾಂಕ್ಷೆ. ಅದನ್ನು ಮಾರೀಚ ಖಚಿತಪಡಿಸಿದ!

ಆಶ್ರಮದಲ್ಲಿ ಸೀತೆ ಏಕಾಕಿನಿಯಾದಾಗ ರಾವಣನು ಸಂನ್ಯಾಸಿವೇಷದಿಂದ ಬರುತ್ತಾನೆ. ನೀನು ಯಾರೆಂದು ಸೀತೆಯನ್ನು ಕೇಳುತ್ತಾನೆ. ಅವಳ ಸೌಂದರ್ಯವನ್ನು ವರ್ಣಿಸುತ್ತಾನೆ. ರಾವಣನ ನುಡಿಯಲ್ಲಿ ಕಾಮುಕಭಾವನೆಗಳು ತುಂಬಿರುತ್ತವೆ. ಅವೆಲ್ಲವನ್ನೂ ಸೀತೆ ಸುಮ್ಮನೆ ಕೇಳುತ್ತಿದ್ದುದೇಕೆ ? ತನ್ನ ಅಸಮಾಧಾನವನ್ನೇಕೆ ಪ್ರಕಟಿಸಲಿಲ್ಲ ?–ಎಂಬ ಆಕ್ಷೇಪಣೆಯುಂಟು.

ರಾಮಾಯಣ ವ್ಯಾಸಂಗಿಗಳು ಕೆಲವು ವಿಷಯಗಳನ್ನು ಗಮನಿಸಿರಬೇಕು. ಇದು ನಾಟಕ (ದೃಶ್ಯಕಾವ್ಯ) ಅಲ್ಲ ; ವರ್ಣನಾಪ್ರಧಾನವಾದ ವರ್ಣಕ ಕಾವ್ಯ. ವರ್ಣನೆಯಲ್ಲಿ ಎಷ್ಟೋ ಕಡೆ ಅತಿಯಾಯಿತೆಂದು ಓದುಗನಿಗೆ ಅನ್ನಿಸಬಹುದು. ಆದರೆ ಕವಿ ತಾನು ಹೇಳಬೇಕಾದ್ದನ್ನೆಲ್ಲ ವಿಸ್ತಾರವಾಗಿಯೇ ಹೇಳಿಬಿಡುತ್ತಾನೆ. ಇದು ಶ್ರವ್ಯಕಾವ್ಯಗಳಲ್ಲೆಲ್ಲ ಕಂಡುಬರುವ ವಿಶೇಷ ಲಕ್ಷಣ.

ಕಾದಂಬರಿ, ಶಿಶುಪಾಲವಧ, ನೈಷಧ ಮುಂತಾದ ಮಹಾಕಾವ್ಯಗಳಲ್ಲೂ ಚಂಪೂ ಪ್ರಬಂಧಗಳಲ್ಲಿಯೂ ಈ ಬಗೆಯನ್ನು ಕಾಣಬಹುದು. ಸಂಭಾಷಣೆಯ ವೇಳೆಯಲ್ಲಿ ಯಾರೂ ಮಾರುದ್ದ ವಾಕ್ಯಗಳಿಂದ ಸಮಾಸಜಟಿಲವಾಗಿ ಮಾತಾಡುವುದಿಲ್ಲ. ಉದಾಹರಣೆಗೆ ರಾಮಾಯಣದಲ್ಲಿಯೇ, ರಾಮನು ಭರತನ ಯೋಗಕ್ಷೇಮವನ್ನು ವಿಚಾರಿಸುವಾಗ ೭೬ ಶ್ಲೋಕಗಳನ್ನು ನಿರಂತರವಾಗಿ ಬಳಸಿ ಮಾತಾಡಿದ್ದಾನೆ. ಇದಕ್ಕೆ 'ಕಚ್ಚಿತ್ ಸರ್ಗ' ಎಂದೇ ಹೆಸರು (ಅಯೋ. ೧೦೦). ಒಂದೇ ಸಲಕ್ಕೆ ರಾಮನು ಅಷ್ಟು ಮಾತಾಡಿದನೆಂದೂ ಭರತನು ಸುಮ್ಮನೆ ಕೇಳುತ್ತಿದ್ದನೆಂದೂ ಯಾರೂ ಹೇಳಲಾರರು. ಹಾಗೆಯೇ ಹನುಮಂತನು ರಾವಣಸಭೆಯಲ್ಲಿ ರಾವಣನಿಗೆ ಹಿತೋಪದೇಶ ಮಾಡುತ್ತ ೪೪ ಶ್ಲೋಕಗಳನ್ನು ಬಳಸಿದ್ದಾನೆ (ಸುಂ. ೫೧). ರಾವಣನನ್ನು ರೇಗಿಸುವ ಉಗ್ರವಚನಗಳನ್ನಾಡಿದ್ದಾನೆ. ಅದೆಲ್ಲವನ್ನೂ ಕೇಳುತ್ತ ಆತನ ಮಾತು ಮುಗಿಯಲೆಂದು ರಾವಣನು ತೆಪ್ಪಗೆ ಕುಳಿತಿದ್ದನೆಂದು ಹೇಳುವುದು ಅಸಂಬದ್ಧವಾಗುತ್ತದೆ. ನಡುನಡುವೆ ಉಕ್ತಿ ಪ್ರತ್ಯುಕ್ತಿಗಳು ಇಬ್ಬರಲ್ಲಿ ನಡೆದೇ ಇರುತ್ತವೆ. ವ್ಯಕ್ತಿಯ ಸ್ವಗತಭಾವನೆಗಳನ್ನು ಕೆಲವೆಡೆಯಲ್ಲಿ ಕವಿ ಇನ್ನೊಬ್ಬರಿಗೆ ಹೇಳಿದಂತೆ ವರ್ಣಿಸುತ್ತಾನೆ. ಇನ್ನೊಬ್ಬರಿಗೆ ಹೇಳಬೇಕಾದ್ದನ್ನು ಸ್ವಗತವಾಗಿ ವರ್ಣಿಸುವುದೂ ಉಂಟು. ಸ್ವಗತ-ಪ್ರಕಾಶ ಎಂಬುದು ದೃಶ್ಯಕಾವ್ಯಗಳಿಗೆ ಮಾತ್ರ ಮೀಸಲು. ರಾಮಾಯಣದಲ್ಲಿ ಮುಂದೆ ಹೇಳಬೇಕಾದ್ದನ್ನು ಮೊದಲು ಹೇಳಿದ್ದುಂಟು. ಮೊದಲು ಹೇಳಬೇಕಾದ್ದನ್ನು ಕಡೆಗೆ ಹೇಳಿದ್ದುಂಟು. ಇದನ್ನು ವಿವೇಚಿಸಿ ಕವಿತಾತ್ಪರ್ಯವನ್ನು ಗ್ರಹಿಸಬೇಕು. ಯಥಾಶ್ರುತಗ್ರಾಹಿಗೆ ದಕ್ಕುವುದು ಕಾವ್ಯರಸವಲ್ಲ; ಉಗಿಯಬೇಕಾದ ಚರಟ.

ಇನ್ನೊಬ್ಬರ ಹೃದಯವನ್ನು ಒಳಹೊಕ್ಕು ನೋಡುವ ಅತೀಂದ್ರಿಯ ಶಕ್ತಿಯುಂಟೆ 'ವಿಚಾರವಾದಿ'ಗಳಿಗೆ?

ಪ್ರಕೃತದಲ್ಲೇ ಇದಕ್ಕೆ ಉದಾಹರಣೆ ಇದೆ. ರಾವಣಸಂನ್ಯಾಸಿಗೆ ಸೀತೆ ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿ ಆಹಾರವನ್ನು ತಂದಿಟ್ಟು 'ಬ್ರಾಹ್ಮಣ, ಉಪಭುಜ್ಯತಾಂ' ಎನ್ನುತ್ತಾಳೆ. ತಾನು ಮಾತ್ರ ಉದ್ವಿಗ್ನಳಾಗಿ ರಾಮಲಕ್ಷ್ಮಣರನ್ನು ನಿರೀಕ್ಷಿಸುತ್ತ ಚಡಪಡಿಸುತ್ತ ಹೊರಗೆ ನೋಡುತ್ತಿರುತ್ತಾಳೆ. 'ನೀನು ಯಾರು ?' ಎಂದು ರಾವಣನು ಆರಂಭದಲ್ಲಿಯೇ ಮಾಡಿದ ಪ್ರಶ್ನೆಗೆ, ಮುಂದಿನ ಸರ್ಗದಲ್ಲಿ ಉತ್ತರ ಬರುತ್ತದೆ. ಪ್ರಶ್ನೆ, ಉತ್ತರ, ಆಮೇಲೆ ಸತ್ಕಾರ-ಇದು ಕ್ರಮ. ಈ ಕ್ರಮ ಇಲ್ಲಿ ವ್ಯತ್ಯಸ್ತವಾಗಿರುವುದು ಯಾರಿಗಾದರೂ ಹೊಳೆಯುತ್ತದೆ. ರಾವಣನು ಕಾಮುಕಭಾವನೆಗಳಿಂದ ಆಡಿದ ಮಾತುಗಳೆಲ್ಲ ಸ್ವಗತವಾದವು. ಆತನ ಮನಸ್ಸಿನಲ್ಲಿ ಭಾವನೆಗಳು ಕೆರಳಿದವು ಎಂದು ಅರ್ಥವೇ ಹೊರತು ಸೀತೆಗೆ ಸಾಕ್ಷಾತ್ತಾಗಿ ಹೇಳಿದನೆಂದಲ್ಲ. ಕಾವ್ಯವನ್ನರ್ಥ ಮಾಡಿಕೊಳ್ಳುವ ರೀತಿ ಇದು.

ರಾವಣನ ದುರ್ಭಾವನೆ ಸೀತೆಗೆ ಗೊತ್ತಾದಾಗ ಅವಳು ಸಿಟ್ಟಿನಿಂದ ಕೆಂಡವಾಗುತ್ತಾಳೆ. 'ತಮನಾದೃತ್ಯ ರಾಕ್ಷಸಂ' ಅವನು ರಾಕ್ಷಸನೆಂಬುದನ್ನು ಲೆಕ್ಕಿಸದೆ ಧೀರವಾಣಿಯಿಂದ ನುಡಿಯುತ್ತಾಳೆ–

ಮಹಾಗಿರಿಮಿವಾಕಂಪ್ಯಂ
ಮಹೇಂದ್ರಸದೃಶಂ ಪತಿಂ ।
ಮಹೋದಧಿಮಿವಾಕ್ಷೋಭ್ಯ-
ಮಹಂ ರಾಮಮನುವ್ರತಾ ॥
ಸರ್ವಲಕ್ಷಣಸಂಪನ್ನಂ
ನ್ಯಗ್ರೋಧಪರಿಮಂಡಲಂ ।
ಸತ್ಯಸಂಧಂ ಮಹಾಭಾಗ-
ಮಹಂ ರಾಮಮನುವ್ರತಾ ॥
ಮಹಾಬಾಹುಂ ಮಹೋರಸ್ಕಂ
ಸಿಂಹವಿಕ್ರಾಂತಗಾಮಿನಂ ।
ನೃಸಿಂಹಂ ಸಿಂಹಸಂಕಾಶ-
ಮಹಂ ರಾಮಮನುವ್ರತಾ ॥
ಪೂರ್ಣಚಂದ್ರಾನನಂ ರಾಮಂ
ರಾಜವತ್ಸಂ ಜಿತೇಂದ್ರಿಯಂ ।

ಪೃಥುಕೀರ್ತಿಂ ಮಹಾತ್ಮಾನ-
ಮಹಂ ರಾಮಮನುವ್ರತಾ ॥
—ಅರಣ್ಯಕಾಂಡ, ೪೭, ೩೩–೩೬

ಶ್ರೀರಾಮನನ್ನು ಅವಳು ಎಂತಹ ದೊಡ್ಡ ಮಾತುಗಳಿಂದ ಹೊಗಳುತ್ತಾಳೆಂಬುದನ್ನು ಗಮನಿಸಬೇಕು. ಕುತೂಹಲವಿದ್ದವರು ಆ ಗ್ರಂಥದ ಮುಂದಿನ ಭಾಗವನ್ನೋದಿ ನೋಡಬಹುದು. ರಾಮನನ್ನು ಜಿತೇಂದ್ರಿಯ ಎಂದು ಕವಿ ವರ್ಣಿಸುತ್ತಾನೆ. ವಿಶಾಲಾರ್ಥವುಳ್ಳ ಬಹುದೊಡ್ಡ ಶಬ್ದ ಅದು. ಇಂದ್ರಿಯಗಳ ಮೇಲೆ ಹತೋಟಿಯುಳ್ಳವನೆಂದು ತಾತ್ಪರ್ಯ. 'ಸ್ತ್ರೀ ಕಾಮನೆ ಇಲ್ಲದವನು' ಎಂಬ ಸಂಕುಚಿತಾರ್ಥವನ್ನಿಟ್ಟುಕೊಂಡು ಮಹಾಗರ್ತದಲ್ಲಿ ಬಿದ್ದು ತೊಳಲಾಡುತ್ತಿದ್ದಾರೆ ಈ ಅಭಿವ್ಯಕ್ತಿವಾದಿಗಳು.

ಸೀತಾಪಾರುಷ್ಯ

ಮಾರೀಚನು ರಾಮನ ಧ್ವನಿಯಿಂದ 'ಹಾ ಸೀತೆ, ಲಕ್ಷ್ಮಣ' ಎಂದು ಕೂಗಿಕೊಂಡನಷ್ಟೆ. ಅದು ರಾಮನ ಆರ್ತಧ್ವನಿಯೆಂದು ತಿಳಿದು ಜಾನಕಿ ಉದ್ವಿಗ್ನಳಾದಳು. ರಾಮನು ಹಲವಾರು ರಾಕ್ಷಸರ ನಡುವೆ ಸಿಕ್ಕಿಕೊಂಡು ಸಂಕಟದಲ್ಲಿದ್ದಾನೆಂದು ನಂಬಿದಳು. "ಲಕ್ಷ್ಮಣ, ಓಡುತ್ತ ಹೋಗು. ನಿನ್ನ ಅಣ್ಣನನ್ನು ರಕ್ಷಿಸು" ಎಂದಳು. ಲಕ್ಷ್ಮಣನು ಚಲಿಸಲಿಲ್ಲ. ಅವೆಲ್ಲ ರಾಕ್ಷಸರ ಮಾಯಾಜಾಲವೆಂದು ಮೊದಲೇ ದೃಢವಾಗಿ ನಂಬಿದ್ದ ಲಕ್ಷ್ಮಣನಿಗೆ, ಈಗ ಸೀತೆಯನ್ನು ಒಂಟಿಯಾಗಿ ಬಿಟ್ಟು ಹೋಗುವುದು ಇನ್ನೂ ಅಪಾಯಕಾರಿ ಎನ್ನಿಸಿತು. ಅಲ್ಲದೆ

ಸೀತೆಯು ಬಳಿಯಲ್ಲಿರಬೇಕೆಂದು ಅಣ್ಣನ ಆಜ್ಞೆಯಾಗಿತ್ತು. ರಾಮನನ್ನು ಯುದ್ಧದಲ್ಲಿ ಸೋಲಿಸ ತಕ್ಕವರು ಮೂರು ಲೋಕದಲ್ಲಿಯೂ ಇಲ್ಲ ಎಂಬ ಖಚಿತವಾದ ಅಭಿಪ್ರಾಯ ಅವನಿಗಿತ್ತು. ಅವನು ಹೇಳಿದ ಸಾಂತ್ವನ ಫಲಕಾರಿಯಾಗಲಿಲ್ಲ. ಸ್ತ್ರೀಸಹಜವಾದ ಶೋಕ ಉಮ್ಮಳಿಸಿತು. ಕ್ರೋಧ ಉಕ್ಕಿತು. ಆಡಬಾರದ ಮಾತನ್ನು ಅವಳು ಲಕ್ಷ್ಮಣನಿಗೆ ಹೇಳಿದಳು. "ಅನಾರ್ಯ, ರಾಮನ ಮರಣ ನಿನಗೆ ಪ್ರಿಯವಾಗಿರಬೇಕು. ನೀನು ಘಾತುಕ. ನನಗೋಸ್ಕರ ಕಣ್ಣಿಟ್ಟು ಕೆಟ್ಟ ಉದ್ದೇಶದಿಂದ ಬಂದಿರಬೇಕು. ಭರತನೇ ದುರುದ್ದೇಶದಿಂದ ನಿನ್ನನ್ನು ಕಳಿಸಿದ್ದಾನೋ ಏನೋ. ಎಂದಿಗೂ ನಿನಗೆ ನಾನು ದಕ್ಕುವವಳಲ್ಲ ಎಂದು ತಿಳಿ" ಮುಂತಾದ ಕ್ರೂರವಾಕ್ಯಗಳು ಅವಳ ಬಾಯಿಂದ ಬಂದವು.

ಇಲ್ಲಿ ವಿಚಾರವಾದಿಗಳ ವಿಚಾರ ಹೀಗೆ – "ಲಕ್ಷ್ಮಣನ ಇಂಗಿತದಲ್ಲಿ ತಾನು ತನ್ನ ಹೆಂಡತಿ ಊರ್ಮಿಳೆಯನ್ನು ಬಿಟ್ಟು ರಾಮನೊಡನೆ ಕಾಡಿಗೆ ಬಂದಿರುವುದರಲ್ಲಿ ಸೀತೆಯ ಆಕರ್ಷಣೆ ಇದ್ದಿರಬಹುದು. ಆದರೆ ಆ ಮಾತನ್ನು ಸೀತೆ ಒತ್ತಿಒತ್ತಿ ತಿರುತಿರುಗಿ ಹೇಳುವುದರಲ್ಲಿ ತನ್ನ ಇಂಗಿತವನ್ನು ಹೊರಗೆಡಹುತ್ತಿದ್ದಾಳೆ. ಅವಳು ಲಕ್ಷ್ಮಣನನ್ನು ಅಯೋಗ್ಯ, ಕಪಟಿ ಇತ್ಯಾದಿಯಾಗಿ ಬಯ್ಯುವಾಗ ತನ್ನನ್ನೂ ಆ ಮೂಲಕ ಬಯ್ದುಕೊಳ್ಳುತ್ತಿದ್ದಾಳೆ. ತನ್ನ ಅಪರಾಧಕ್ಕೆ (guilt) ತನ್ನನ್ನೇ ಶಿಕ್ಷಿಸಿಕೊಳ್ಳುತ್ತಿದ್ದಾಳೆ."

ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿತಂತೆ. ಇನ್ನೊಬ್ಬರ ಹೃದಯವನ್ನು ಹೊಕ್ಕು ನೋಡಲು ಇವರಿಗೆ ಅತೀಂದ್ರಿಯ ಶಕ್ತಿಯುಂಟೇನು ? ಅಥವಾ ಪಿಶಾಚದಂತೆ ಇನ್ನೊಬ್ಬರ ದೇಹದಲ್ಲಿ ಆವಿಷ್ಟರಾಗಿ ತಿಳಿಯಬಲ್ಲರೊ ? ಕವಿವಾಕ್ಯವೇ ನಮಗೆ ಪ್ರಮಾಣ. ಸೀತೆಯ ಸೌಶೀಲ್ಯ ಎಂತಹ ಉಚ್ಚಮಟ್ಟದ್ದೆಂದು ಇದುವರೆಗೆ ತೋರಿಸಿಕೊಟ್ಟಿದ್ದೇವೆ. ಇನ್ನೂ ಹೇಳತಕ್ಕದ್ದಿದೆ. 'ಅಹಂ ರಾಮಮನುವ್ರತಾ' ಎಂದು ಮತ್ತೆ ಮತ್ತೆ ಹೇಳುತ್ತಾಳಲ್ಲ, ಅದಕ್ಕೆ ಉತ್ತರವೇನು ? 'ಪತಿಯನ್ನೇ ನಂಬಿರುವ ನಾನು ನಿನ್ನಂಥ ಅಲ್ಪ ಮನುಷ್ಯನನ್ನು ಬಯಸುವೆನೆ ? ನಿನ್ನೆದುರಿಗೇ ಪ್ರಾಣ ಬಿಡುತ್ತೇನೆ. ಶ್ರೀರಾಮನನ್ನಗಲಿ ಒಂದು ಕ್ಷಣವೂ ಭೂಮಿಯಲ್ಲಿ ಬದುಕಲಾರೆ' ಎನ್ನುತ್ತಾಳೆ. ಇವೆಲ್ಲ ಮಾತುಗಳು ಅಭಿವ್ಯಕ್ತಿವಾದಿಗಳಿಗೆ ಕೇಳಿಸುವುದಿಲ್ಲವೊ ? ಅವರದ ಜಾಣಕಿವುಡು.

ಲಕ್ಷ್ಮಣನಿಗೆ ರಾಮನಲ್ಲಿ ಎಷ್ಟು ಅಗಾಧವಾದ ಪ್ರೀತಿಯಿತ್ತೆಂಬುದು ರಾಮಾಯಣದ ಉದ್ದಕ್ಕೂ ಅಭಿವ್ಯಕ್ತವಾಗಿದೆ. ಅಣ್ಣನಿಗೆ ಪಟ್ಟಾಭಿಷೇಕ ತಪ್ಪಿದಾಗ ಶೋಕಕ್ರೋಧಗಳಲ್ಲಿ ಮುಳುಗಿದ ಲಕ್ಷ್ಮಣ ತಂದೆಯನ್ನೂ ಭರತನನ್ನೂ ಕೊಂದು ಹಾಕುತ್ತೇನೆಂದು ಅಬ್ಬರಿಸುತ್ತಾನೆ. ಸುಮಂತ್ರನೊಡನೆ ದಶರಥನಿಗೆ ಸಂದೇಶವನ್ನು ಕಳಿಸುತ್ತ "ನಾನು ದಶರಥನನ್ನು ತಂದೆಯೆಂದು ಮನ್ನಿಸುವುದಿಲ್ಲ. ನನ್ನ ತಂದೆ, ಬಂಧು, ಸರ್ವಸ್ವವೂ ನನ್ನ ಅಣ್ಣನೇ" ಎನ್ನುತ್ತಾನೆ.

ಅಣ್ಣನಿಗಾಗಿ ತನ್ನ ಸರ್ವಸುಖವನ್ನೂ ತ್ಯಾಗ ಮಾಡಿ ಆತನ ಕಷ್ಟದಲ್ಲಿ ಭಾಗಿಯಾದ ಮಹಾಭಾಗ ಲಕ್ಷ್ಮಣ. ಅಂತಹ ಗುಣಶ್ಲಾಘ್ಯನಲ್ಲಿಯೂ ಕಳಂಕಶಂಕೆ ಘಾತುಕತನ. ಬಾಲಿಶತನದ ಬೇಜವಾಬ್ದಾರಿ ಹೇಳಿಕೆ. ಕತ್ತೆಯನ್ನು ಸಾಕುತ್ತಿದ್ದ ಅಯೋಧ್ಯೆಯ ಅಗಸ ಸೀತೆಯವರೆಗೆ ಅಪವಾದವನ್ನೊಯ್ದರೆ, ಈ 'ವಿಚಾರವಾದಿ'ಗಳು ಲಕ್ಷ್ಮಣನವರೆಗೂ ಮುಂದೊಯ್ದು ತಮ್ಮ 'ಪ್ರಗತಿಶೀಲತೆ'ಯನ್ನು ವ್ಯಕ್ತಪಡಿಸಿದ್ದಾರೆ !

ಈ ಸಂದರ್ಭದಲ್ಲಿ ಸೀತೆಯಾಡಿದ ಮಾತನ್ನು ಸಮರ್ಥಿಸುವುದು ನಮ್ಮ ಉದ್ದೇಶವಲ್ಲ. ಅವಳಾಡಿದ್ದು ಅನುಚಿತ. ಲಕ್ಷ್ಮಣನ ಪಾಲಿಗೆ ಕಿವಿಯಿಂದ ಕೇಳಲಾಗದ ಕಠೋರವಚನ. ಇದರಲ್ಲಿ ಎರಡು ಮಾತಿಲ್ಲ. ಅಂತಹ ಸಾಧ್ವಿಯ ಬಾಯಿಂದ ಅಂತಹ ಪರುಷವಚನವನ್ನಾಡಿಸಿದ ಮಹಾಕವಿಯ ಆಶಯವೇನೆಂಬುದನ್ನು ನಾವು ಕಂಡುಕೊಳ್ಳಬೇಕು. ಅದು ಎರಡು ವಿಧವಾದದ್ದು –

೧. ಆ ಪರುಷೋಕ್ತಿ ಸೀತೆಯ ಬಾಯಿಂದ ಬರದಿದ್ದರೆ ಲಕ್ಷ್ಮಣನು ಅವಳೊಬ್ಬಳನ್ನೇ ಬಿಟ್ಟು ಹೋಗತಕ್ಕವನೇ ಅಲ್ಲ. ಅವನು ಹೋಗದಿದ್ದರೆ ರಾವಣಸಂನ್ಯಾಸಿ ಬರುವುದಿಲ್ಲ. ಕಥಾಪ್ರಸಂಗ ಮುಂದೆ ಬೆಳೆಯುವುದೇ ಇಲ್ಲ.

೨. ಮಾನುಷಸ್ವಭಾವ ಹೀಗೆಯೇ. ಶೋಕ-ಕ್ರೋಧಗಳ ಆವೇಶದಲ್ಲಿ ಎಂತಹವರಿಂದಲೂ ದುಡುಕಿನ ಮಾತು ಹೊರಟುಬಿಡುತ್ತದೆ. ಸೀತೆ 'ಬಾಷ್ಪಶೋಕಪರಿಪ್ಲುತ'ಳಾಗಿದ್ದಳು. ಶೋಕದಿಂದ ಕ್ರೋಧ ಉಕ್ಕಿದೆ. ಶೋಕಕ್ರೋಧ

ಸಂತಪ್ತರಾದವರಿಗೆ ವಿವೇಕ ಹಿಂದೆ ಸರಿದು ಮಾತಿನ ಹಿಡಿತ ತಪ್ಪಿಹೋಗುತ್ತದೆ – ಎಂಬುದರ ಚಿತ್ರಣ ಇದು.

ಈ ವಿಷಯದಲ್ಲಿ ಈ ಕವಿಯೇ ಚಿತ್ರಿಸಿದ ಇನ್ನೊಂದು ಪ್ರಸಂಗವನ್ನು ನೋಡಬಹುದು. ಶ್ರೀರಾಮನು ಕಾಡಿಗೆ ಹೋಗಿ ಐದು ದಿನಗಳು ಕಳೆದಿವೆ. ಕೌಸಲ್ಯೆ ದುಃಖದಿಂದ ಪರಿತಪಿಸುತ್ತ ಕೊರಗಿ ಕೊರಗಿ ಸೊರಗಿಹೋಗಿದ್ದಾಳೆ. ಒಂದು ಸಲ ಇದ್ದಕ್ಕಿದ್ದಂತೆ ದಶರಥನನ್ನು ತರಾಟೆಗೆ ತೆಗೆದುಕೊಂಡು ಚುಚ್ಚುಮಾತುಗಳಿಂದ ತಿವಿಯುತ್ತಾಳೆ. ಕವಿಯ ಮಾತಿದು :

ಏವಂ ತು ಕ್ರುದ್ಧಯಾ ರಾಜಾ
ರಾಮಮಾತ್ರಾ ಸಶೋಕಯಾ ।
ಶ್ರಾವಿತಃ ಪರುಷಂ ವಾಕ್ಯಂ
ಚಿಂತಯಾಮಾಸ ದುಃಖಿತಃ ॥
–ಅಯೋಧ್ಯಾ, ೬೨–೧

ವೃದ್ಧರಾಜನು ತಳಮಳಿಸುತ್ತ ಕೌಸಲ್ಯೆಗೆ ಕೈಮುಗಿಯುತ್ತಾನೆ. ತಲೆತಗ್ಗಿಸಿ ಅವಳ ಕ್ಷಮೆಯನ್ನು ಬೇಡುತ್ತಾನೆ. ಆಗ ಕೌಸಲ್ಯೆಗೆ ತನ್ನ ಅತಿರೇಕದ ಅರಿವಾಗುತ್ತದೆ. ಅವಳ ನೈತಿಕ ವಿನಯಪ್ರಜ್ಞೆ ಜಾಗೃತವಾಗುತ್ತದೆ. ಒಡನೆಯೇ ಗಂಡನ ಕೈಗಳನ್ನು ತಲೆಯ ಮೇಲಿಟ್ಟುಕೊಂಡು ಅಳುತ್ತ "ಸ್ವಾಮಿ, ಪ್ರಸನ್ನನಾಗು. ತಲೆಬಾಗಿ ಬೇಡುವೆನು. ನೆಲದ ಮೇಲೆ ಬಿದ್ದು ಬೇಡಿಕೊಳ್ಳುತ್ತೇನೆ. ನಿನ್ನಿಂದ ಯಾಚನೆ ಮಾಡಿಸಿಕೊಂಡ ಮೇಲೆ ನಾನು ಹಾಳಾಗಿಹೋದೆ. ನನ್ನನ್ನು ಅಧೋಗತಿಗೆ ತಳ್ಳಬಾರದು" ಎಂದು ಬೇಡಿಕೊಳ್ಳುತ್ತಾಳೆ. ಪುತ್ರಶೋಕದಿಂದ ಹೇಳಬಾರದ್ದನ್ನು ಹೇಳಿಬಿಟ್ಟೆನೆಂದು ಕಂಗಾಲಾಗುತ್ತಾಳೆ.

ಶೋಕೋ ನಾಶಯತೇ ಧೈರ್ಯಂ
ಶೋಕೋ ನಾಶಯತೇ ಶ್ರುತಂ ।
ಶೋಕೋ ನಾಶಯತೇ ಸರ್ವಂ
ನಾಸ್ತಿ ಶೋಕಸಮೋ ರಿಪುಃ॥

"ಶೋಕವು ಧೈರ್ಯವನ್ನು ಕೆಡಿಸುತ್ತದೆ. ವಿವೇಕವನ್ನು ನಾಶಮಾಡುತ್ತದೆ. ಅದು ಸಮಸ್ತವನ್ನೂ ಹಾಳುಮಾಡುವುದು. ಶೋಕದಂಥ ಶತ್ರು ಇನ್ನೊಂದಿಲ್ಲ" – ಎನ್ನುತ್ತಾಳೆ. ಹಾಗೆಯೇ ಕ್ರೋಧವೂ ಸಹ. ಹನುಮಂತನ ಮಾತನ್ನು ಕೇಳಿ :

ಕ್ರುದ್ಧಃ ಪಾಪಂ ನ ಕುರ್ಯಾತ್ ಕಃ
ಕ್ರುದ್ಧೋ ಹನ್ಯಾತ್ ಗುರೂನಪಿ।
ಕ್ರುದ್ಧಃ ಪರುಷಯಾ ವಾಚಾ
ನರಃ ಸಾಧೂನಧಿಕ್ಷಿಪೇತ್ ॥
–ಸುಂದರಕಾಂಡ, ೫೫–೫

"ಸಿಟ್ಟು ಬಂದಾಗ ಯಾವನು ಪಾಪಕಾರ್ಯವನ್ನು ಮಾಡದೆ ಇದ್ದಾನು ? ಕ್ರುದ್ಧನಾದವನು ಗುರುಹಿರಿಯರನ್ನೂ ಹೊಡೆದಾನು – ಕೊಂದುಬಿಟ್ಟಾನು. ಕ್ರುದ್ಧನಾದವನು ಕ್ರೂರವಾಕ್ಯದಿಂದ ಸತ್ಪುರುಷರನ್ನೂ ನಿಂದಿಸಿಬಿಡುವನು."

'ಮನುಷ್ಯನು ಮಾತಾಡುವಾಗ ತುಂಬ ಎಚ್ಚರಿಕೆಯಿಂದಿರಬೇಕು. ಅವಿವೇಕದ ಮಾತನ್ನಾಡಿ ಸೀತೆ ಅನರ್ಥಕ್ಕೆ ಗುರಿಯಾದಳು. ಅನ್ಯರನ್ನೂ ವಿಪತ್ತಿಗೆ ಸಿಕ್ಕಿಸಿದಳು. ಎಚ್ಚರಿಕೆ ಇರಲಿ" – ಎಂದು ಮಹಾಕವಿ ಈ ಪ್ರಸಂಗದಲ್ಲಿ ಸೂಚಿಸುತ್ತಿದ್ದಾನೆ.

ಪಶ್ಚಾತ್ತಾಪ

ಪರುಷವಚನವನ್ನಾಡಿ ಲಕ್ಷ್ಮಣನನ್ನು ಕಳಿಸಿದ್ದಾಯಿತು. ಅನಂತರ ಸೀತೆಗೆ ಪಶ್ಚಾತ್ತಾಪವಾಗಿದೆ. ಲಕ್ಷ್ಮಣನಿಗೆ ಕೆಟ್ಟ ಮಾತನ್ನಾಡಬಾರದಿತ್ತೆಂದು ತನ್ನನ್ನೇ ಅವಳು ಶಪಿಸಿಕೊಂಡಿರಬೇಕು. ರಾವಣಸಂನ್ಯಾಸಿಯ ವಿವರವಾದ ಪ್ರಶ್ನೆಗಳಿಂದ ಅವಳಿಗೆ ಬೇಸರವಾಗಿದೆ. ಭಿಕ್ಷೆಗೆ ಬಂದವನು ತಮ್ಮ ಎಲ್ಲ ವೃತ್ತಾಂತಗಳನ್ನೂ ವಿಚಾರಿಸುವುದೇಕೆ ? ಆದರೂ 'ಸೌಮ್ಯದರ್ಶನ'ನಾಗಿ ಕಾಣುತ್ತಿದ್ದ ಆತ ಬ್ರಾಹ್ಮಣನೆಂದೂ ಅತಿಥಿಯೆಂದೂ ದಾಕ್ಷಿಣ್ಯಕ್ಕೆ ಒಳಗಾಗಿ ತಮ್ಮೆಲ್ಲರ ಪರಿಚಯವನ್ನೂ ಹೇಳುತ್ತಾಳೆ. ರಾಮನ ವಿಷಯವನ್ನು ಹೇಳುವಾಗ "ನನ್ನ ಪತಿ ಮಹಾತೇಜಸ್ವಿ. ರಾಮ ಎಂದು ಲೋಕಪ್ರಸಿದ್ಧ. ಗುಣವಂತ, ಸತ್ಯವಂತ, ವಿಶಾಲಾಕ್ಷ, ಮಹಾಬಾಹು, ಸರ್ವಭೂತಗಳ ಹಿತಕಾರ್ಯದಲ್ಲಿ ನಿರತ. ಅವನು ಇನ್ನೊಬ್ಬರಿಗೆ ಏನು ಬೇಕಾದರೂ ಕೊಡತಕ್ಕವನೇ ಹೊರತು, ತಾನು ತೆಗೆದುಕೊಳ್ಳಲಿಕ್ಕಿಲ್ಲ" ಎಂದೆಲ್ಲ ಹೊಗಳುತ್ತಾಳೆ. ಲಕ್ಷ್ಮಣನ ವಿಷಯವಾಗಿ "ಯುದ್ಧದಲ್ಲಿ ರಾಮನಿಗೆ ಸಹಾಯಮಾಡತಕ್ಕ ವೀರ. ಧರ್ಮಚಾರಿ. ದೃಢವ್ರತ" ಎನ್ನುತ್ತಾಳೆ. ಲಕ್ಷ್ಮಣನನ್ನು 'ಧರ್ಮಚಾರಿ, ದೃಢವ್ರತ' ಎಂದು ವಿಶೇಷಿಸಿದ್ದರಿಂದ

ಸೀತೆಯ ಚಾರಿತ್ರವನ್ನು ಸಮೀಕ್ಷಿಸುವಾಗ ಅವಳ ಸ್ವತಶ್ಚಿಂತನ ಅಂತಃಸಾಕ್ಷ್ಯವಾಗಿ ನಿಲ್ಲುತ್ತದೆ

ಸೀತೆಯ ಪರಿಶುದ್ಧ ಭಾವವೂ ಪಶ್ಚಾತ್ತಾಪವೂ ವ್ಯಕ್ತವಾಗುತ್ತವೆ. ಮುಂದೆ ಹನುಮಂತನೊಡನೆ ಸಂಭಾಷಿಸುವಾಗ ಲಕ್ಷ್ಮಣನ ವಿಷಯವಾಗಿ ಸೀತೆ ಹೇಳುವ ಮಾತಿದು :

ಪಿತೃವದ್ ವರ್ತತೇ ರಾಮೇ
ಮಾತೃವನ್ಮಾಂ ಸಮಾಚರನ್ ॥
–ಸುಂದರಕಾಂಡ, ೩೮–೬೦

“ಅವನು (ಲಕ್ಷ್ಮಣ) ರಾಮನನ್ನು ತಂದೆಯೆಂದೂ ನನ್ನನ್ನು ತಾಯಿಯೆಂದೂ ತಿಳಿದು ನಡೆದುಕೊಳ್ಳುತ್ತಾನೆ.” ಸಮಾಚರನ್ ಎಂಬ ಶಬ್ದದ ಅರ್ಥಪುಷ್ಟಿಯನ್ನು ಗಮನಿಸಿ. ಅವಳ ಪಶ್ಚಾತ್ತಾಪ ಹೇಗೆ ಅಭಿವ್ಯಕ್ತವಾಗಿದೆಯೆಂಬುದನ್ನು ನೋಡಿ. ಅಷ್ಟೇ ಅಲ್ಲದೆ “ಲಕ್ಷ್ಮಣನು ಗುರುಹಿರಿಯರ ಸೇವಕ; ಸಮರ್ಥ; ಹೆಚ್ಚು ಮಾತಾಡತಕ್ಕವನಲ್ಲ. ರಾಮನಿಗೆ ಲಕ್ಷ್ಮಣನೆಂದರೆ ನನ್ನ ಮೇಲೆ ಇರುವುದಕ್ಕಿಂತಲೂ ಅಧಿಕವಾದ ಪ್ರೀತಿ. ಅವನು ಮೃದುಸ್ವಭಾವದವನು. ಶುದ್ಧಾತ್ಮ. ಆತನ ಕುಶಲವನ್ನು ನಾನು ವಿಚಾರಿಸಿದ್ದೇನೆಂದು ಹೇಳು” – ಎನ್ನುತ್ತಾಳೆ. ಪಶ್ಚಾತ್ತಾಪದಿಂದಾದ ಹೃದಯಶುದ್ಧಿಗೆ ಈ ಮಾತುಗಳು ಸಾಕ್ಷಿ.

ಸೀತಾಪಹಾರ

ರಾವಣನು ತನ್ನದುರುದ್ದೇಶವನ್ನು ತಿಳಿಸಿದಾಗ ‘ಕುಪಿತಾ ಜನಕಾತ್ಮಜಾ’– ಜಾನಕಿಯು ಕ್ರುದ್ಧಳಾದಳು. ಅವನು ರಾಕ್ಷಸನೆಂಬುದನ್ನು ಲೆಕ್ಕಿಸದೆ “ಎಲಾ ರಾಕ್ಷಸ, ನೀನು ಒಂದು ಗುಳ್ಳೆನರಿ! ಸಿಂಹಪತ್ನಿಯಾದ ಈ ಸಿಂಹಿಯನ್ನು ಬಯಸುವೆಯಾ? ಕಾಲಕೂಟ ವಿಷವನ್ನು ಕುಡಿದು ಕ್ಷೇಮವಾಗಿ ಹೋಗಬಹುದೆಂದು ತಿಳಿದಿದ್ದೀಯಾ? ರಾಘವನ ಪ್ರಿಯಪತ್ನಿಯನ್ನು ಬಯಸುವ ನೀನು ಕಣ್ಣನ್ನುಸೂಜಿಯಿಂದ ತಿವಿದುಕೊಳ್ಳುತ್ತಿದ್ದೀಯೆ. ಕತ್ತಿಯ ಅಲಗನ್ನು ನಾಲಿಗೆಯಿಂದ ನೆಕ್ಕಲು ಇಚ್ಛಿಸುತ್ತೀಯೆ!” ಮುಂತಾದ ತೀಕ್ಷ್ಣವಾಕ್ಯಗಳಿಂದ ಧಿಕ್ಕರಿಸುತ್ತಾಳೆ. ತಾನು ಒಂಟಿಯಾಗಿದ್ದರೂ ಅವಳ ಧೀರತೆ ಎಷ್ಟು! ಚಿತ್ತಸಂಕ್ಷೋಭದಿಂದಾಡುವ ಮಾತಿನ ಕೆಚ್ಚು ಯಾವ ಬಗೆಯದು! ಶ್ರೀರಾಮನಲ್ಲಿ ಅವಳಿಗಿರುವ ಪ್ರೀತಿ ಅಭಿಮಾನಗಳು ಇಲ್ಲಿ ಸ್ಫುಟವಾಗಿ ಎದ್ದುಕಾಣುತ್ತವೆ. ಶ್ರೀರಾಮನು ಮೃಗರಾಜಕಂಠೀರವ, ಅವನೆದುರಿಗೆ ರಾವಣನು ಒಂದು ನರಿ. ಶ್ರೀರಾಮ–ರಾವಣರಿಗಿರುವ ಅಂತರ ಸಮುದ್ರ – ಹಳ್ಳಗಳಿಗೆ, ಅಮೃತ – ಗಂಜಿಗಳಿಗೆ, ಅಪರಂಜಿ – ಸೀಸಗಳಿಗೆ, ಶ್ರೀಗಂಧ – ಕೆಸರುಗಳಿಗೆ, ಆನೆ – ಬೆಕ್ಕುಗಳಿಗೆ, ಗರುಡ–ಕಾಗೆಗಳಿಗೆ, ನವಿಲು – ನೀರುಕಾಗೆಗಳಿಗೆ ಇರುವಷ್ಟು. “ನನ್ನನ್ನು ಬಲಾತ್ಕರಿಸಿದರೆ, ನೀನು ಅಮೃತವನ್ನೇ ಕುಡಿದಿದ್ದರೂ ನಿನಗೆ ಉಳಿಗಾಲವಿಲ್ಲ” ಎಂದು ಎಚ್ಚರಿಸುತ್ತಾಳೆ.

ಇನ್ನು ತಡಮಾಡುವುದು ಕ್ಷೇಮವಲ್ಲವೆಂದು ಬಗೆದ ರಾವಣ ತನ್ನ ಎಡಗೈಯಿಂದ ಸೀತೆಯ ಕೇಶಪಾಶವನ್ನೂ, ಬಲಗೈಯಿಂದ ಅವಳ ತೊಡೆಗಳನ್ನೂ ಹಿಡಿದು ಎತ್ತಿ ತನ್ನ ಮಾಯಾರಥದಲ್ಲಿ ಹೇರುತ್ತಾನೆ. ಅಭಿವ್ಯಕ್ತಿವಾದಿಗಳಿಗೆ ಈ ಸನ್ನಿವೇಶ ಒಂದು Symbolic rape ಆಗಿ ಕಾಣುತ್ತದೆ! ಕಾಮಸನ್ನಿ ಬಡಿದವರು ಮನಸ್ಸಿನಲ್ಲಿ Rape ದೃಶ್ಯವನ್ನು ಕಲ್ಪಿಸಿಕೊಂಡು ಮೆಲುಕುಹಾಕುವುದು ಸಹಜವೇ. ಇಷ್ಟಾದರೂ “ಸೀತೆ ಅವನನ್ನು ಬಯ್ಯುವುದಾಗಲಿ, ಶಪಿಸುವುದಾಗಲಿ ಮಾಡದೆ ‘ರಾಮಾ’ ಎಂದು ಕೂಗುತ್ತಾಳೆ. ಗಟ್ಟಿಯಾಗಿ ಅಳುತ್ತಾಳೆ” ಎಂದು ಹಂಗಿಸಿದ್ದಾರೆ. ಇನ್ನೇನು ಮಾಡಬೇಕಾಗಿತ್ತು ? ರಾವಣನ ಕಿವಿಯನ್ನು ಕಚ್ಚಬೇಕಾಗಿತ್ತೆ?

ಇವರ ಕುಚೋದ್ಯದ ಕಲ್ಪನೆ ಎಲ್ಲಿಯವರೆಗೆ ಎಂದರೆ “ರಾವಣನು ತನ್ನನ್ನು ಹೊತ್ತುಕೊಂಡು ಹೋಗುವಾಗ ‘ಹಾ ಲಕ್ಷ್ಮಣ! ಮಹಾಬಾಹು!’ ಎಂದು ಲಕ್ಷ್ಮಣನ ‘ಮಹಾಬಾಹುತ್ವ’ವನ್ನು ಸಂಬೋಧಿಸಿ ಕೂಗುತ್ತಾಳೆ. ರಾಮನನ್ನಾದರೋ ‘ಧರ್ಮ’ರಕ್ಷಕನೆಂದು ನೆನೆದುಕೊಳ್ಳುತ್ತಾಳೆ. ‘ಮಹಾಬಾಹು’ ಎಂದುದರಿಂದ ಸೀತೆಗೆ ಲಕ್ಷ್ಮಣನಲ್ಲಿ ಸುಪ್ತಕಾಮವಿತ್ತೆಂದು ಇವರ

ಇಂಗಿತ. ಉತ್ತರಿಸಲೂ ಅರ್ಹವಲ್ಲದ ತುಚ್ಛ ಆಪಾದನೆ ಇದು. "ಯಮುನೇ ನನ್ನನ್ನು ಒಯ್ದರೂ 'ಮಹಾಬಾಹು'ವೂ 'ಮಹಾಬಲ'ನೂ ಆದ ರಾಮನು ನನ್ನನ್ನು ಬಿಡಿಸಿಕೊಂಡು ಬರುತ್ತಾನೆ" ಎಂದು ಸೀತೆಯೇ ಆಕ್ರಂದಿಸಿದ್ದಾಳೆ (ಅಯೋಧ್ಯಾ, ೪೯, ೩೬–೩೭). ಇದಕ್ಕೆ ಉತ್ತರವೇನು?

ಜಾನಕಿಯ ಶುದ್ಧಚಾರಿತ್ರವನ್ನು ಸಮೀಕ್ಷಿಸುವಾಗ ಇನ್ನೂ ಕೆಲವು ಅಂಶಗಳನ್ನು ಪರಿಶೀಲಿಸಬಹುದು. ಅವಳು ಇನ್ನೊಬ್ಬರಿಗೆ ಹೇಳಿದ ಮಾತುಗಳಿಗಿಂತ, ಸ್ವತಃ ಅವಳ ಚಿಂತನಪ್ರಕಾರ ನಮಗೆ ಬಹುಮುಖ್ಯವಾದ ಪ್ರಮಾಣವಾಗುತ್ತದೆ. ಅದು ಇನ್ನೊಬ್ಬರನ್ನು ಮೆಚ್ಚಿಸುವುದಕ್ಕಾಗಲಿ, ತನ್ನ ಅಂತರಂಗವನ್ನು ಮುಚ್ಚುವುದಕ್ಕಾಗಲಿ ನುಡಿದ ಉಕ್ತಿಯಲ್ಲವಾದ್ದರಿಂದ ಸ್ವತಶ್ಚಿಂತನ ಅಂತಃಸಾಕ್ಷ್ಯವಾಗಿ ನಿಲ್ಲುತ್ತದೆ. ಅದು ಗುಪ್ತವಾದ ಅಂತರಂಗವನ್ನು ಪ್ರತಿಬಿಂಬಿಸುವ ನಿಲುಗನ್ನಡಿ.

ಅಂತಃಸಾಕ್ಷ್ಯ

ಅಶೋಕವನದಲ್ಲಿ ತೊಳಲುತ್ತಿದ್ದ ಸೀತಾದೇವಿ ಶೋಕಸಂತಪ್ತಳಾಗಿ ತನ್ನಲ್ಲಿಯೇ ಹೇಳಿಕೊಳ್ಳುತ್ತಿದ್ದ ಚಿಂತನಪ್ರಕಾರವಿದು (ಸುಂದರಕಾಂಡ) :

೧. 'ಗಂಡಸಾಗಲಿ ಹೆಂಗಸಾಗಲಿ ಕಾಲವು ಒದಗಿಬಂದ ಹೊರತು ಸಾಯುವುದಿಲ್ಲ' ಎಂಬ ಹಿರಿಯರ ಹೇಳಿಕೆ ಸತ್ಯವಾದದ್ದು. ಏಕೆಂದರೆ, ಶ್ರೀರಾಮನನ್ನಗಲಿ ಬದುಕಿರುವೆನಲ್ಲ! ನನ್ನ ಪತಿಯನ್ನು ಕಾಣದೆ, ಪ್ರವಾಹವೇಗಕ್ಕೆ ಸಿಕ್ಕಿದ ದಡದಂತೆ ಕುಸಿದುಹೋಗುತ್ತಿದ್ದೇನೆ. ಪದ್ಮದಳದಂತೆ ಕಣ್ಣುಗಳಿರುವ, ಸಿಂಹದಂತೆ ಧೀರವಾಗಿ ನಡೆಯುವ, ಕೃತಜ್ಞನೂ ಪ್ರಿಯವಾದಿಯೂ ಆದ ನನ್ನ ನಾಥನನ್ನು ನೋಡತಕ್ಕವರೇ ಪುಣ್ಯಾತ್ಮರು.' (೨೫, ೧೨–೧೬)

೨. 'ಶ್ರೀರಾಮನು ಪ್ರಖ್ಯಾತನಾದವನು, ಪ್ರಾಜ್ಞ, ಕೃತಜ್ಞ, ಕರುಣಾಮಯ, ಸತ್ಪುರುಷ. ನನ್ನ ದುರ್ಭಾಗ್ಯದಿಂದ ಅವನೂ ನಿಷ್ಕರುಣನಾಗಿಬಿಟ್ಟನೆ? ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರನ್ನು ಧ್ವಂಸ ಮಾಡಿದ ವೀರನು ನನ್ನನ್ನು ಬಿಡಿಸಿಕೊಳ್ಳಲು ಏಕೆ ಬಂದಿರಬಹುದು? ಈ ಅಲ್ಪಶಕ್ತಿಯ ರಾಕ್ಷಸನು ನನ್ನನ್ನು ಬಂಧಿಸಿದ್ದಾನೆ. ಇವನನ್ನು ಕೊಂದು ಹಾಕಲು ನನ್ನ ಗಂಡನು ನಿಶ್ಚಯವಾಗಿಯೂ ಸಮರ್ಥ. ನಾನು ಲಂಕೆಯಲ್ಲಿರುವುದು ಅವನಿಗೆ ತಿಳಿದಿಲ್ಲವೆಂದು ತೋರುತ್ತದೆ. ತಿಳಿದಿದ್ದರೆ ರಾಮನು ಕ್ರುದ್ಧನಾಗಿ ಈ ಲೋಕದಲ್ಲಿ ರಾಕ್ಷಸರೇ ಇಲ್ಲದಂತೆ ಮಾಡುತ್ತಿದ್ದ. ಅವನು ಮಹಾಸಾಗರವನ್ನು ಒಣಗಿಸಿ ಲಂಕೆಯನ್ನು ಧೂಳೀಪ್ಸಿಸಿಬಿಡುವನು. ನೀಚನಾದ ರಾವಣನ ಖ್ಯಾತಿಯನ್ನು ಅಳಿಸಿ ಅವನ ಹೆಸರನ್ನೇ ತೊಡೆದುಹಾಕುವನು.' (೨೬, ೧೩–೨೩)

೩. 'ಕಮಲನೇತ್ರನಾದ ನನ್ನನಾಥ ಶ್ರೀರಾಮನನ್ನು ನೋಡುವವರೇ ಪುಣ್ಯಾತ್ಮರು. ಪರಿಶುದ್ಧವಾದ ನಡತೆಯುಳ್ಳವನೂ ಶತ್ರುವಿಧ್ವಂಸಕನೂ ಶೂರನೂ ಮಹಾತ್ಮನೂ ಆದ ಶ್ರೀರಾಮನನ್ನಗಲಿ ಜೀವಿಸುವುದಕ್ಕಿಂತ ನಾನು ಸಾಯುವುದೇ ಉತ್ತಮ.' (೨೬, ೩೮–೪೬)

ಇವು ಕೇವಲ ಉದಾಹರಣವಾಕ್ಯಗಳು. ಈ ಬಗೆಯ ಚಿಂತನಪ್ರಕಾರಗಳು ವಿಪುಲವಾಗಿ ಬರುತ್ತವೆ.

ರಾವಣನ ದುರ್ವಾಕ್ಯಗಳಿಂದ ಸಂಕ್ರುದ್ಧಳಾದ ಸೀತೆ ಒಂದು ಸಲ,

> ಅಸಂದೇಶಾತ್ತು ರಾಮಸ್ಯ
> ತಪಸಶ್ಚಾನುಪಾಲನಾತ್ ।
> ನ ತ್ವಾಂ ಕುರ್ಮಿ ದಶಗ್ರೀವ
> ಭಸ್ಮ ಭಸ್ಮಾರ್ಹತೇಜಸಾ ॥
> –ಸುಂದರಕಾಂಡ, ೨೨–೨೦

"ರಾವಣ, ಶ್ರೀರಾಮನು ಅನುಮತಿ ಕೊಟ್ಟಿಲ್ಲವೆಂದೂ ತಪಃಶಕ್ತಿಯನ್ನುಳಿಸಿಕೊಳ್ಳಬೇಕೆಂದೂ ಸುಮ್ಮನಿದ್ದೇನೆ. ಇಲ್ಲದಿದ್ದರೆ ನನ್ನ ತಪೋಬಲದ ತೇಜಸ್ಸಿನಿಂದ ನಿನ್ನನ್ನು ಸುಟ್ಟು ಬೂದಿಮಾಡುತ್ತಿದ್ದೆ" ಎಂದು ಹೇಳುತ್ತಾಳೆ. ಪಾತಿವ್ರತ್ಯವೇ ಸೀತೆಯ ತಪಸ್ಸು. ಅದರಲ್ಲಿ ಎಳ್ಳಷ್ಟಾದರೂ ಕಳಂಕವಿದ್ದರೆ ಈ ತಪಃಶಕ್ತಿಯಲ್ಲಿ ಆತ್ಮವಿಶ್ವಾಸ ಎಂದಿಗಾದರೂ ಇದ್ದೀತೆ?

ಇವೆಲ್ಲವನ್ನೂ ಪರಿಶೀಲಿಸಿದಾಗ ಏನೆಂದು ನಿಶ್ಚಯವಾಗುವುದು? ಶ್ರೀರಾಮನನ್ನು ಸೀತೆ ಶುದ್ಧಮನಸ್ಸಿನಿಂದ ಪ್ರೀತಿಸುತ್ತಿದ್ದಳೊ, ಇಲ್ಲವೊ? ಅವನು ವೀರನಾದ ಗಂಡಸೆಂದು ತಿಳಿದಿದ್ದಳೋ, ಕೈಲಾಗದ ತಾಪಸನೆಂದೋ?

ಕೋಟ್ಯಂತರ ಸ್ತ್ರೀ-ಪುರುಷರ ಗೌರವಕ್ಕೆ

ಆದರಕ್ಕೆ, ಪ್ರೀತಿಗೆ, ಭಕ್ತಿಗೆ ಪಾತ್ರಳೂ ಸೌಶೀಲ್ಯದ ಮೂರ್ತಿಯೂ ಆದ ಒಬ್ಬ ಹೆಣ್ಣಿನ ಚಾರಿತ್ರವಧೆಗೆ ಹೊರಟಿರುವ ಈ ಜನರಿಗೆ ಸ್ವಲ್ಪವಾದರೂ ನೀತಿಪ್ರಜ್ಞೆ ಇದೆಯೇ ? ಕಿಂಚಿತ್ತಾದರೂ ಹೊಣೆಗಾರಿಕೆ ಇದೆಯೇ ?

ಅಗಸ್ತ್ಯಮುನಿಗಳ ಸಾಕ್ಷ್ಯ

ದಂಡಕಾರಣ್ಯದಲ್ಲಿದ್ದ ಋಷಿಗಳಲ್ಲಿ ಅಗಸ್ತ್ಯರು ಮಹಾತೇಜಸ್ವಿಗಳು. ಅವರ ಸ್ಥಾನಗೌರವ ಅತ್ಯುನ್ನತವಾಗಿತ್ತೆಂದು ವಾಲ್ಮೀಕಿಗಳು ಸುಂದರವಾಗಿ ವರ್ಣಿಸಿದ್ದಾರೆ. ಸೀತಾರಾಮಲಕ್ಷ್ಮಣರು ಅವರ ಆಶ್ರಮಕ್ಕೆ ಬಂದು ಅಗಸ್ತ್ಯರಿಗೆ ಅಭಿವಾದನೆ ಮಾಡಿ ಕುಳಿತುಕೊಳ್ಳುತ್ತಾರೆ. ಆಗ ಅಗಸ್ತ್ಯರು ಹೇಳುವ ಮಾತಿದು :

“ಇವಳು (ಸೀತೆ) ಸುಕುಮಾರಿಯಾಗಿ ಬೆಳೆದವಳು. ಕಷ್ಟಗಳಿಂದ ನೊಂದವಳಲ್ಲ. ಅರಣ್ಯದಲ್ಲಿ ಕಷ್ಟಗಳು ಬಹಳ. ಗಂಡನಲ್ಲಿರುವ ಪ್ರೇಮಾತಿಶಯದಿಂದ ಇಂಥ ಅರಣ್ಯಕ್ಕೆ ಬಂದಿದ್ದಾಳೆ. ರಾಮ, ಇವಳಿಗೆ ಇಲ್ಲಿ ಸಂತೋಷವಾಗುವಂತೆ ನೋಡಿಕೊ. ಸೀತೆಯು ನಿನ್ನನ್ನು ಹಿಂಬಾಲಿಸಿ ಬಂದು ಬಹುಕಷ್ಟವಾದ ಕೆಲಸಕ್ಕೆ ಕೈಹಾಕಿದ್ದಾಳೆ. ನಿನ್ನ ಪತ್ನಿಯಲ್ಲಿ ಯಾವ ದೋಷವೂ ಇಲ್ಲ. ಇವಳ ನಡತೆ ಪ್ರಶಂಸನೀಯವಾದದ್ದು. ಸಾಕ್ಷಾತ್ ಅರುಂಧತೀದೇವಿಯಂತೆ (ಪತಿವ್ರತೆಯರಲ್ಲಿ) ಅಗ್ರಗಣ್ಯಳು.”

– (ಅರಣ್ಯಕಾಂಡ, ೧೩, ೩–೭)

ಭಾರತೀಯ ಪರಂಪರೆಯಲ್ಲಿ ಅರುಂಧತಿ ಪತಿವ್ರತಾ ಶಿರೋಮಣಿಯೆಂದು ಸುಪ್ರಸಿದ್ಧಳು. ಸೀತೆಗೆ ಅವಳ ಹೋಲಿಕೆ ಅಗಸ್ತ್ಯಮುನಿಗಳಿಂದ ಲಭಿಸಿದೆ.

ಅನಸೂಯೆಯ ಸಾಕ್ಷ್ಯ

ಅವರು ಮೂವರೂ ಅತ್ರಿಮುನಿಗಳ ಆಶ್ರಮಕ್ಕೆ ಬರುತ್ತಾರೆ. ಅತ್ರಿಮುನಿಗಳ ಪತ್ನಿ ಅನಸೂಯೆ. ಅವರು ಸೀತಾರಾಮಲಕ್ಷ್ಮಣರಿಗೆ ಅನಸೂಯೆಯನ್ನು ಪರಿಚಯ ಮಾಡಿಸಿ ತಮ್ಮ ಪತ್ನಿಯ ಪಾತಿವ್ರತ್ಯದ ಮಹಿಮೆಯನ್ನು ಮುಕ್ತಕಂಠದಿಂದ ಹೊಗಳುತ್ತಾರೆ. ಅನಂತರ ಪತ್ನಿಯನ್ನು ಕುರಿತು “ಅನಸೂಯೆ, ಇವಳು ವೈದೇಹಿ. ಇವಳನ್ನು ಒಳಗೆ ಕರೆದು ಉಪಚರಿಸು” ಎನ್ನುತ್ತಾರೆ. ಸೀತೆ ಗಂಡನ ಸೂಚನೆಯಂತೆ ಒಳಗೆ ಹೋಗಿ ಅನಸೂಯೆಗೆ ವಂದಿಸುತ್ತಾಳೆ. ಅನಂತರ ಅವರಿಬ್ಬರಲ್ಲಿ ಮಧುರವಾದ ಸಂಭಾಷಣೆ ನಡೆಯುತ್ತದೆ. ಅನಸೂಯೆ ಬಹಳ ವೃದ್ಧೆ. ಅವಳ ಬಳಿ ದಿವ್ಯವಸ್ತ್ರಾಲಂಕಾರಗಳಿದ್ದವು. ಸೀತೆಯು ಶುದ್ಧಚಾರಿತ್ರವನ್ನು ಮೆಚ್ಚಿ ತನ್ನ ಎಲ್ಲ ವಸ್ತ್ರಾಲಂಕಾರಗಳನ್ನೂ ಅವಳಿಗೆ ಕೊಟ್ಟು ಆಶೀರ್ವದಿಸುತ್ತಾಳೆ. ಆ ವೃದ್ಧ ತಪಸ್ವಿನಿಯಿಂದ ಮೆಚ್ಚುಗೆ ಗಳಿಸುವುದು ಸಾಮಾನ್ಯವಾದ್ದಲ್ಲ. ಸೀತೆಯ ಸೌಶೀಲ್ಯಕ್ಕೆ ಅನಸೂಯೆ ಪ್ರಬಲವಾದ ಸಾಕ್ಷಿಯಾಗಿ ನಿಲ್ಲುತ್ತಾಳೆ.

(ಮುಂದುವರಿಯುವುದು)

ವಾಲ್ಮೀಕಿ ಮುನಿಗಳ
ಸೀತಾಯನ
- ೩ -

ವಿಪುಲ ಸಾಕ್ಷ್ಯಗಳು

• ಎನ್. ರಂಗನಾಥಶರ್ಮಾ

ಹನುಮಂತನ ಸಾಕ್ಷ್ಯ

ಜಾನಕಿಯನ್ನರಸುತ್ತ ಹನುಮಂತ ಅಶೋಕ ವನಕ್ಕೆ ಬರುತ್ತಾನೆ. ಆತನಿಗೆ ಜಾನಕಿಯ ಪ್ರಥಮ ಪರಿಚಯವೂ ಇಲ್ಲ. ಆದರೆ ಶ್ರೀರಾಮನಂತಹ ಮಹಾಪುರುಷನು ಅವಳಿಗಾಗಿ ಹಂಬಲಿಸುವುದನ್ನು ಕಂಡು, ಆಕೆ ಸಾಮಾನ್ಯಳಲ್ಲ, ದೇವತಾಸ್ವರೂಪಳೆ–ಎಂಬ ನಂಬಿಕೆ ಅಂಕುರಿಸಿದೆ. ಆದ್ದರಿಂದಲೇ,

ನಮೋಽಸ್ತು ರಾಮಾಯ ಸಲಕ್ಷ್ಮಣಾಯ
ದೇವ್ಯೈ ಚ ತಸ್ಮೈ ಜನಕಾತ್ಮಜಾಯೈ ॥

ಎಂದು ಸೀತಾದೇವಿಗೆ ನಮಸ್ಕರಿಸುತ್ತ ಅಶೋಕ ವನವನ್ನು ಪ್ರವೇಶಿಸುತ್ತಾನೆ. ಮರದ ಮೇಲೆ ಅಡಗಿ ಕುಳಿತಿದ್ದ ಹನುಮಂತನಿಗೆ ಸೀತೆಯ ಚಾರಿತ್ರ್ಯವೇನೆಂಬುದನ್ನರಿಯಲು ಒಳ್ಳೆಯ ಅವಕಾಶ ಲಭಿಸುತ್ತದೆ. ರಾವಣನು ಒಂದು ಸೀತೆಗೆ ಪ್ರಚೋದನೆಯನ್ನುಂಟುಮಾಡಿದ್ದು, ಅದಕ್ಕೆ ಸೀತೆಯು ಕೊಟ್ಟ ಪ್ರತ್ಯುತ್ತರ, ಹನುಮಂತನ ಮೇಲೆ ಪ್ರಭಾವಶಾಲಿಯಾದ ಮುದ್ರೆಯನ್ನೊತ್ತುತ್ತದೆ. ಸೀತೆಯೊಡನೆ ಸಂಭಾಷಣೆ ಮಾಡಿದ ಮೇಲಂತೂ ಆಕೆಗೆ ಸಮಾನಳಾದ ಪತಿವ್ರತೆ ಇನ್ನೊಬ್ಬಳಿಲ್ಲ ಎಂಬ ಅಚಲ ನಿರ್ಧಾರಕ್ಕೆ ಬರುತ್ತಾನೆ. ಅದಕ್ಕೆ ಮಕುಟಪ್ರಾಯವಾಗಿ, ಮುಂದೆ ಹನುಮಂತನ ಬಾಲಕ್ಕೆ ಹಚ್ಚಿದ ಬೆಂಕಿ, ಸೀತೆಯ ಪ್ರಾರ್ಥನೆಯಂತೆ ತಣ್ಣಗಾಗುತ್ತದೆ.

ಬೆಂಕಿ ತಣ್ಣಗಾದದ್ದು ಪವಾಡದ ಕಥೆಯೆಂದು ತಳ್ಳುವುದು ವಿಷಯಾಂತರ. ವಾಲ್ಮೀಕಿ ಮುನಿಗಳು ಹಾಗೆ ವರ್ಣಿಸಿದ್ದಾರಲ್ಲ, ಕವಿಹೃದಯವೇನು? ಸೀತೆಯ ಶುದ್ಧಚಾರಿತ್ರ್ಯವನ್ನೂ ಅವಳ ಪಾತಿವ್ರತ್ಯವನ್ನೂ ಇದರಿಂದ ಅಭಿವ್ಯಕ್ತಿಗೊಳಿಸಿರುವುದು ಸ್ಪಷ್ಟ. ಅವಳಲ್ಲಿ ಕಳಂಕಲೇಶವಾದರೂ ಇದ್ದಿದ್ದರೆ, ಅವಳ ಪ್ರಾರ್ಥನೆಯಿಂದ ಅಗ್ನಿ ಶಾಂತವಾಯಿತೆಂದು ಹೇಳುವುದು ಅಸಂಬದ್ಧವಾಗುತ್ತದೆ.

ಅದಿರಲಿ ; ಹನುಮಂತನು ಲಂಕೆಯಿಂದ ಹಿಂದಿರುಗಿ ಒಂದು ವಾನರರಿಗೆ ಲಂಕಾವೃತ್ತಾಂತವನ್ನು ನಿರೂಪಿಸುತ್ತಾನೆ. ಮೊದಲು ದಕ್ಷಿಣ ದಿಕ್ಕಿಗೆ ತಿರುಗಿ ತಲೆಬಾಗಿ ಸೀತಾದೇವಿಗೆ ನಮಸ್ಕರಿಸಿ ತನ್ನ ಮಾತನ್ನು ಪ್ರಾರಂಭಿಸುತ್ತಾನೆ–

ಪ್ರಣಮ್ಯ ಶಿರಸಾ ದೇವ್ಯೈ
ಸೀತಾಯೈ ಪ್ರತ್ಯಭಾಷತ ॥
– ಸುಂದರ ಕಾಂಡ, ೫೮–೪

ಮತ್ತೆ ಅವನು ಹೇಳುವುದನ್ನು ಗಮನಿಸಬೇಕು–

"ಮಿತ್ರರೆ, ನಾನು ಸೀತಾದೇವಿಯ ಸಚ್ಚಾರಿತ್ರ್ಯವನ್ನು ಕಂಡಮೇಲೆ, ಶ್ರೀರಾಮನು ಅವಳಿಗಾಗಿ ಮಾಡುತ್ತಿರುವ ಪ್ರಯತ್ನವೂ ಸುಗ್ರೀವನ ಉತ್ಸಾಹವೂ ಯೋಗ್ಯವೇ ಸರಿಯೆಂದು ನನಗೆ ದೃಢವಾಯಿತು. ನನ್ನ ಮನಸ್ಸು ಈ ವಿಷಯದಲ್ಲಿ ಒಲಿಯಿತು. ರಾಕ್ಷಸೇಶ್ವರನಾದ ರಾವಣನು ಸಾಮಾನ್ಯನಲ್ಲ. ಅವನು ಸೀತಾದೇವಿಯನ್ನು ಮುಟ್ಟಿದರೂ ನಾಶವಾಗದೆ ಉಳಿದಿದ್ದಾನೆ. ಜನಕಪುತ್ರಿಯು ಕ್ರುದ್ಧಳಾದರೆ ಏನಾಗುವುದೆಂದು ಗೊತ್ತಿದೆಯೇ ? ಕೈಯಿಂದ ಮುಟ್ಟಿದರೆ ಅಗ್ನಿಜ್ವಾಲೆಯೂ ಅಂತಹ ಕೆಲಸವನ್ನು ಮಾಡಲಾರದು. (ಅವಳ ತಪೋಮಹಿಮೆ ಅಷ್ಟು ಉಗ್ರವಾದದ್ದು.)"

ಬ್ರಹ್ಮನ ಸಾಕ್ಷ್ಯ

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಸ್ಮರಿಸಿಕೊಳ್ಳಬಹುದು. ರಾವಣನು ಸೀತೆಯ

ಮುಡಿಯನ್ನು ತುಡುಕಿದಾಗ ಬ್ರಹ್ಮನು 'ದೇವತೆಗಳ ಕಾರ್ಯ ಸಿದ್ಧಿಸಿತು' ಎಂದು ಹೇಳಿದನಂತೆ –

ಕೃತಂ ಕಾರ್ಯಮಿತಿ ಶ್ರೀಮಾನ್
ವ್ಯಾಜಹಾರ ಪಿತಾಮಹಃ ॥
– ಅರಣ್ಯ, ೫೨–೧೩

ಪತಿವ್ರತೆಯ ಮುಡಿಯನ್ನು ತುಡುಕಿದ್ದರಿಂದ ರಾವಣನು ಸಾಯುವುದು ನಿಶ್ಚಯವೆಂದು ಬ್ರಹ್ಮನ ಅಭಿಪ್ರಾಯ. ಜಾನಕಿಯ ಶುದ್ಧ ಚಾರಿತ್ರ್ಯಕ್ಕೆ ಬ್ರಹ್ಮನ ಸಾಕ್ಷ್ಯವಿದು.

ಮಂಡೋದರಿಯ ಸಾಕ್ಷ್ಯ

ರಾವಣನು ರಣರಂಗದಲ್ಲಿ ಸತ್ತುಬಿದ್ದಾಗ ಮಂಡೋದರಿಯು ಗೋಳಾಡುತ್ತ ಹೇಳುತ್ತಾಳೆ –

ಪತಿವ್ರತಾಯಾಸ್ತಪಸಾ
ನೂನಂ ದಗ್ಧೋಽಸಿ ಮೇ ಪ್ರಭೋ ।
ತದೈವಯನ್ನ ದಗ್ಧಸ್ತ್ವಂ
ಧರ್ಷಯಂಸ್ತನು ಮಧ್ಯಮಾಂ ॥
– ಯುದ್ಧ, ೧೧೪–೨೪

"ಹಾ ನಾಥ, ಆ ಪತಿವ್ರತೆಯ (ಸೀತೆಯ) ತಪೋಮಹಿಮೆಯಿಂದಲೇ ನೀನು ಸುಟ್ಟುಹೋದೆ ! ಆ ಸಾಧ್ವಿಯನ್ನು ಹಿಂದೆ ಕೆಣಕಿದಾಗಲೇ ನೀನು ಸುಟ್ಟುಹೋಗಲಿಲ್ಲ" (ಅದು ನಿನ್ನ ಶೌರ್ಯದ ಪ್ರಭಾವದಿಂದ.)

ಅಗ್ನಿಸಾಕ್ಷ್ಯ

ರಾಘವನು ಪತ್ನಿಯನ್ನು ಸ್ವೀಕರಿಸದೆ ಕ್ರೂರ ವಚನಗಳನ್ನಾಡಿದಾಗ, ಅವಳಿಗೆ ಬೇರೆ ಮಾರ್ಗ ಉಳಿಯಲಿಲ್ಲ. "ಲಕ್ಷ್ಮಣ, ಚಿತೆಯನ್ನು ನಿರ್ಮಿಸು; ಬೆಂಕಿಯಲ್ಲಿ ಬೀಳುವೆನು" ಎಂದಳು. ಅಗ್ನಿಕುಂಡದ ನಿರ್ಮಾಣವಾಯಿತು. ತಲೆತಗ್ಗಿಸಿ ನಿಂತಿದ್ದ ಗಂಡನನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿದ ವೈದೇಹಿ ಅಗ್ನಿಗೆ ಕೈಮುಗಿದು "ನನ್ನ ಹೃದಯವು ಶ್ರೀರಾಮನನ್ನು ಬಿಟ್ಟು ಎಂದಿಗೂ ಕದಲದಿರುವುದು ಸತ್ಯವಾದರೆ, ಲೋಕಸಾಕ್ಷಿಯಾದ ಅಗ್ನಿದೇವನು ನನ್ನನ್ನು ರಕ್ಷಿಸಲಿ. ಶ್ರೀರಾಮನನ್ನು ನಾನು ಮನೋವಾಕ್ಕಾಯಗಳಿಂದಲೂ ಅತಿಕ್ರಮಿಸಿ ನಡೆದಿಲ್ಲವೆಂಬುದು ಸತ್ಯವಾದರೆ, ಸರ್ವಸಾಕ್ಷಿಯಾದ ಅಗ್ನಿದೇವನು ನನ್ನನ್ನು ಕಾಪಾಡಲಿ. ಸಕಲದೇವತೆಗಳೂ ನಾನು ಪರಿಶುದ್ಧಶೀಲಳೆಂದು ತಿಳಿದಿರುವ ಪಕ್ಷದಲ್ಲಿ, ಈ ಯಜ್ಞೇಶ್ವರನು ನನ್ನನ್ನು ಕಾಪಾಡಲಿ" – ಎಂದು ಪ್ರಾರ್ಥಿಸಿ ನೆಮ್ಮದಿಯ ಹೃದಯದಿಂದ ಉರಿಯುವ ಅಗ್ನಿಯಲ್ಲಿ ಧುಮುಕಿದಳು. ಮುಂದೆ ಆದದ್ದೇನು? ಅವಳು ಮುಡಿದ ಹೂಗಳೂ ಬಾಡಲಿಲ್ಲ. ಅಗ್ನಿದೇವನೇ ಪುರುಷಾಕೃತಿಯನ್ನು ಧರಿಸಿ ಮೇಲೆದ್ದು ವೈದೇಹಿಯನ್ನುಕರೆತಂದು ರಾಮನಿಗೆ ಒಪ್ಪಿಸುತ್ತ "ಶ್ರೀರಾಮ, ಈ ವೈದೇಹಿ ನಿನ್ನವಳು. ಇವಳನ್ನು ಪರಿಗ್ರಹಿಸು, ಇವಳಲ್ಲಿ ಯಾವ ದೋಷವೂ ಇಲ್ಲ; ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ ಸಂಕಲ್ಪದಿಂದಾಗಲಿ, ಕಣ್ಣಿನ ನೋಟದಿಂದಾಗಲಿ ಇವಳು ನಿನ್ನನ್ನು ಅತಿಕ್ರಮಿಸಿ ನಡೆದಿಲ್ಲ. ಸದಾಚಾರನಿರತೆಯಾದ ಈ ಸುಶೀಲೆ ನಿನ್ನನ್ನು ಮೀರಿ ನಡೆದುಕೊಂಡಿಲ್ಲ. ಇವಳಲ್ಲಿ ಯಾವ ಕಳಂಕವೂ ಇಲ್ಲ; ಶ್ರೀರಾಮ, ತಿರುಗಿ ಒಂದು ಮಾತನ್ನೂ ಆಡಬೇಡ. ಇವಳನ್ನು ಸ್ವೀಕರಿಸು. ಇದು ನನ್ನ ಆಜ್ಞೆ" ಎಂದ.

– ಯುದ್ಧ, ಸರ್ಗ ೧೨೦-೧೨೧

ವಾಲ್ಮೀಕಿ ಮುನಿಗಳು ಎಷ್ಟು ಕಳಕಳಿಯಿಂದ ಎಷ್ಟು ಜ್ವಲಂತವಾಗಿ ಸೀತೆಯ ಪವಿತ್ರತೆಯನ್ನು ಚಿತ್ರಿಸಿದ್ದಾರೆಂಬುದನ್ನು ನೋಡಿ ಈ ರೀತಿಯಲ್ಲಿ ಅಗ್ನಿಪರೀಕ್ಷೆಗೊಳಪಡಿಸಿ ಆಕೆಯ ಶುದ್ಧ ಚಾರಿತ್ರವನ್ನು ಎತ್ತಿಹಿಡಿದಿದ್ದಾರೆ.

ಶ್ರೀರಾಮನ ಸಾಕ್ಷ್ಯ

ಆಗ ಶ್ರೀರಾಮನು 'ಬಾಷ್ಪವ್ಯಾಕುಲಲೋಚನ'ನಾಗಿ ಹೇಳುತ್ತಾನೆ: "ಅಗ್ನಿದೇವ, ಮೂರು ಲೋಕಗಳಲ್ಲಿ ಯಾರೂ ಸೀತೆಯ ವಿಷಯವಾಗಿ ದೋಷವನ್ನು ಶಂಕಿಸುವುದು ಸರ್ವಥಾ ಯುಕ್ತವಲ್ಲ. ಈ ಜನಕರಾಜನಂದಿನಿ ನನ್ನನ್ನೇ ನಂಬಿದವಳು. ನನ್ನಲ್ಲಿಯೇ ಇವಳ ಹೃದಯ ನೆಲೆಸಿದೆ, ನನ ಇಚ್ಛೆಯಂತೆಯೇ ನಡೆಯತಕ್ಕವಳು ಎಂಬುದನ್ನು ನಾನೂ ಬಲ್ಲೆನು. ಆದರೂ ಸತ್ಯವನ್ನು ನಂಬಿರುವ ನಾನು, ಸತ್ಯವು ಪ್ರಕಟವಾಗಲೆಂದು ಸುಮ್ಮನಿದ್ದೆನು. ಇವಳು ಅಗ್ನಿಪ್ರವೇಶ ಮಾಡಿದರೂ ಉಪೇಕ್ಷಿಸಿದೆ. ಇವಳು ಮೂರು ಲೋಕಗಳಲ್ಲಿಯೂ ಅತ್ಯಂತ ಪರಿಶುದ್ಧಳು. ಸೀತೆ ನನಗಿಂತ ಬೇರೆಯೇ ಅಲ್ಲ. (ಇವಳು ನನ್ನ ದೇಹದ ಒಂದು ಭಾಗ)" ಎನ್ನುತ್ತಾನೆ. ಆ ಮಾತನು ಕೇಳಿ ಇಂದ್ರ,

ಬ್ರಹ್ಮ, ಮಹೇಶ್ವರಾದಿ ಸಕಲದೇವತೆಗಳೂ ಸಂತೋಷದಿಂದ ರಾಮನನ್ನು ಅಭಿನಂದಿಸುತ್ತಾರೆ.

ಮಹಾಕವಿಗಳ ಸಾಕ್ಷ್ಯ

೧. ವನವಾಸವನ್ನು ಮುಗಿಸಿ ಶ್ರೀರಾಮನು ಸೀತಾಲಕ್ಷ್ಮಣ ಸಮೇತನಾಗಿ ನಂದಿಗ್ರಾಮದ ಬಳಿಗೆ ಬಂದಿದ್ದಾನೆ. ಜಟಾಧಾರಿಯಾಗಿ ತಾಪಸ ವ್ರತದಲ್ಲಿದ್ದ ಭರತ ಅವರನ್ನು ಸ್ವಾಗತಿಸುತ್ತಾನೆ. ಭರತನು ಸೀತಾದೇವಿಯ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾನೆ. ಈ ಸನ್ನಿವೇಶವನ್ನು ಮಹಾಕವಿ ಕಾಳಿದಾಸನು ವರ್ಣಿಸಿದ ಬಗೆ ಇದು –

'ಜನಕತನಯಾ ಸ್ನಾನ ಪುಣ್ಯೋದಕೇಷು'

ಜಾನಕಿಯ ವಿಷಯವಾಗಿ ಕಾಳಿದಾಸನ ಭಾವನೆ ಈ ರೀತಿಯಾದದ್ದು.

೨. ಭವಭೂತಿಯಂತೂ ಉತ್ತರರಾಮಚರಿತೆಯಲ್ಲಿ ಸೀತೆಯ ಪವಿತ್ರತೆಯನ್ನು ಸೌಶೀಲ್ಯವನ್ನೂ ಮನಸಾರೆ ಬಣ್ಣಿಸಿದ್ದಾನೆ. ಒಂದು ಉದಾಹರಣೆ ಇಲ್ಲಿ ಸಾಕು–

ಸೀತೆ ಲವಕುಶರಿಗೆ ಜನ್ಮವಿತ್ತಾಗ ತನ್ನ ಪಾಡನ್ನು ನೆನೆದು ದುಃಖದಿಂದ ತನ್ನನ್ನೇ ಹಳಿದುಕೊಳ್ಳುತ್ತಿದ್ದಾಳೆ. ಬಸವಳಿದಿದ್ದ ಅವಳನ್ನು ಗಂಗೆ ಭೂದೇವಿಯರು ಹಿಡಿದು ಕೊಂಡಿದ್ದಾರೆ. ಸೀತೆಯನ್ನು ಸಂತೈಸುತ್ತ ಅವರು ಹೇಳುತ್ತಾರೆ–

ಸೀತೆಯ ಶುದ್ಧಚಾರಿತ್ರ್ಯದ ವಿಷಯದಲ್ಲಿ ವ್ಯಾಸ–ಭಾಸಾದಿಗಳಿಂದ ಹಿಡಿದು ಆಧುನಿಕ ಕವಿ–ಆಲಂಕಾರಿಕರ ವರೆಗೆ ಎಲ್ಲರದೂ ಏಕವಾಕ್ಯ.

ಲಂಕೇಶ್ವರ ಪ್ರಣತಿ ಭಂಗದೃಢವ್ರತಂ ತತ್
ವಂದ್ಯ ಯುಗಂ ಚರಣಯೋರ್ಜನ
ಕಾತ್ಮಜಾಯಾಃ ।
ಜ್ಯೇಷ್ಠಾನುವೃತ್ತಿಜಟಿಲಂ ಚ ಶಿರೋಽಸ್ಯ
ಸಾಧೋಃ
ಅನ್ಯೋನ್ಯ ಪಾವನ ಮಭೂದುಭಯಂ
ಸಮೇತ್ಯ ॥
– ರಘುವಂಶ

"(ಪ್ರಣಯಯಾಚನೆಗಾಗಿ) ರಾವಣನು ಮಾಡಿದ ಪ್ರಣಾಮಗಳನ್ನು ಭಗ್ನಗೊಳಿಸುವುದರಲ್ಲಿ ದೃಢನಿಷ್ಠೆಯುಳ್ಳದ್ದೂ ವಂದನೀಯವೂ ಆದ ಜಾನಕಿಯ ಪಾದಯುಗಳ ಮತ್ತು ಅಣ್ಣನ ಅನುವರ್ತನೆಗಾಗಿ ಜಟಾಧಾರಿಯಾದ ಭರತನ ಶಿರಸ್ಸು–ಇವೆರಡು ಅನ್ಯೋನ್ಯ ಸ್ಪರ್ಶದಿಂದ ಪವಿತ್ರವಾದವು" ಎಷ್ಟು ಮನೋಹರವಾದ ವರ್ಣನೆ ಇದು ! ಮತ್ತೆ ಕಾಳಿದಾಸನು ಮೇಘದೂತ ಕಾವ್ಯದಲ್ಲಿ ರಾಮಗಿರ್ಯಾಶ್ರಮದಲ್ಲಿದ್ದ ನದೀ ತಟಾಕಗಳ ನೀರು ಜಾನಕಿಯ ಸ್ನಾನದಿಂದ ಪುಣ್ಯೋದಕವಾಗಿತ್ತು ಎಂದು ಹೇಳುತ್ತಾನೆ–

ಜಗನ್ಮಂಗಲಮಾತ್ಮಾನಂ ಕಥಂ
ತ್ವಮವಮನ್ಯಸೇ !
ಅವಯೋರಪಿ ಯತ್ಸಂಗಾತ್
ಪವಿತ್ರತ್ವಂ ಪ್ರಕೃಷ್ಯತೇ
ಉತ್ತರ, ೭–೮

"ಸೀತೆ, ಜಗತ್ತಿಗೆ ಮಂಗಳದೇವತೆಯಾದವಳು ನೀನು. ನಿನ್ನನ್ನೇಕೆ ನಿಂದಿಸಿಕೊಳ್ಳುತ್ತೀಯೆ ? ನಿನ್ನ ಸ್ಪರ್ಶದಿಂದ ನಮ್ಮ ಪವಿತ್ರತೆ ಸಹ ಇನ್ನೂ ಹೆಚ್ಚುತ್ತಿದೆ."

ಹೀಗೆಯೇ ವ್ಯಾಸ, ಭಾಸ, ಅಭಿನಂದ, ಕ್ಷೇಮೇಂದ್ರ, ದಿಙ್ನಾಗ, ಅಭಿನವ ಪಂಪ, ಕುಮಾರವಾಲ್ಮೀಕಿ, ತುಳಸೀದಾಸ, ಕಂಬ–ಮೊದಲಾದ ಸಂಸ್ಕೃತಕವಿಗಳೂ ದೇಶಭಾಷಾಕವಿಗಳೂ ಸಾವಿರಾರು ವರ್ಷಗಳಿಂದ ಏಕಕಂಠದಲ್ಲಿ ಸೀತಾದೇವಿಯ ಪವಿತ್ರತೆಯನ್ನು ಲೋಕೋತ್ತರವಾದ ಶುದ್ಧಚಾರಿತ್ರವನ್ನೂ ವರ್ಣಿಸುತ್ತಲೇ ಬಂದಿದ್ದಾರೆ. ಕಾವ್ಯಮರ್ಮವನ್ನರಿಯುವುದರಲ್ಲಿ ಆಚಾರ್ಯಪುರುಷರಾದ ಆನಂದವರ್ಧನ,

ಅಭಿನವಗುಪ್ತ, ಮಮ್ಮಟ, ಕುಂತಕ, ಜಗನ್ನಾಥ ಮೊದಲಾದ ದಿಗ್‌ದಂತಿಗಳೂ ರಾಮಾಯಣದ ವಿಷಯವಾಗಿ, ಸೀತೆಯ ವಿಷಯವಾಗಿ ಒಂದು ಅಪಸ್ವರವನ್ನೂ ಎತ್ತಿಲ್ಲ. ಇವರಾರಿಗೂ ಕನಸಿನಲ್ಲಿಯೂ ಹೊಳೆಯದ 'ಅಭಿವ್ಯಕ್ತಿ' ಈ ವಿಚಾರವಾದಿಗಳಿಗೆ ಅಭಿವ್ಯಕ್ತವಾಗಿ ಬಿಟ್ಟಿದೆ!

ಸೀತಾಪರಿತ್ಯಾಗ

ಉತ್ತರಕಾಂಡಕ್ಕೆ ಸಂಬಂಧಿಸಿದ ವೃತ್ತಾಂತ ವಿದು: ಇಲ್ಲಿ 'ವಿಚಾರವಾದಿ'ಗಳ ಹೇಳಿಕೆಯನ್ನು ಬರೆಯಲೂ ನಮ್ಮ ಲೇಖನಿ ಹೇಸುತ್ತದೆ. ಮಾತು ಮುಗ್ಗರಿಸುತ್ತದೆ. ಮನಸ್ಸು ಜಿಗುಪ್ಸೆ ಪಡುತ್ತದೆ. ಆದರೆ ಕೊಚ್ಚೆಯಲ್ಲಿ ಇಳಿದ ಮೇಲೆ ರೊಚ್ಚೆಯಾಗುವುದು ಅನಿವಾರ್ಯ. ಪೂರ್ವಭಾವಿಯಾಗಿ ತಿಳಿದಿರಬೇಕಾದದ್ದು ಇಷ್ಟು:

ಲೋಕಾಪವಾದಕ್ಕೆ ಅಂಜಿ ಶ್ರೀರಾಮನು ಸೀತೆಯನ್ನು ಪರಿತ್ಯಜಿಸಬೇಕೆಂದು ನಿಶ್ಚಯಿಸಿದ್ದಾನೆ. ತನ್ನ ನಿಶ್ಚಯವನ್ನು ತಮ್ಮಂದಿರಿಗೆ ತಿಳಿಸಿ "ಲಕ್ಷ್ಮಣ, ನಾಳೆ ಮುಂಜಾನೆ ಸುಮಂತ್ರನಿಂದೊಡಗೂಡಿದ ರಥದಲ್ಲಿ ಸೀತೆಯನ್ನು ಕರೆದೊಯ್ದು, ಗಂಗಾನದಿಯ ಆಚೆಗಿರುವ ವಾಲ್ಮೀಕಿ ಮಹರ್ಷಿಗಳ ಆಶ್ರಮದ ಬಳಿ ಬಿಟ್ಟು ಬಾ" ಎಂದು ಆಜ್ಞಾಪಿಸುತ್ತಾನೆ. ಅದರಂತೆ ಮಾರನೆಯ ದಿನ ಸುಮಂತ್ರನು ರಥವನ್ನು ತಂದು ನಿಲ್ಲಿಸುತ್ತಾನೆ. ಲಕ್ಷ್ಮಣನು ವಿವರವಾಗಿ ಏನನ್ನೂ ಹೇಳುವುದಿಲ್ಲ. ತಾನು ಮೊದಲೇ ಹೇಳಿದ್ದಂತೆ ಋಷಿಗಳ ಆಶ್ರಮದಲ್ಲಿ ನಾಲ್ಕು ದಿನ ಇದ್ದು ಬರಲು ಗಂಡನು ತನ್ನನ್ನು ಕಳಿಸುತ್ತಿದ್ದಾನೆಂದು ಸೀತೆ ನಂಬಿದಳು. ಋಷಿಪತ್ನಿಯರಿಗೆ ಕೊಡಲು ವಸ್ತ್ರಾಭರಣಗಳನ್ನು ಕಟ್ಟಿಕೊಂಡು ರಥವನ್ನೇರಿದಳು. ಮೂವರೂ ಋಷ್ಯಾಶ್ರಮಗಳಿದ್ದ ಅರಣ್ಯದ ಕಡೆಗೆ ಹೊರಟರು. ಗಂಗಾನದಿಯನ್ನು ಕಂಡೊಡನೆ ಲಕ್ಷ್ಮಣನು ಶೋಕಾರ್ತನಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದನು. ಸೀತೆಗೆ ದಿಗ್‌ಭ್ರಾಂತಿಯಾಯಿತು. ಅವಳು ಉದ್ವಿಗ್ನಳಾಗಿ "ಇದೇನು ಲಕ್ಷ್ಮಣ, ಅಳುತ್ತಿರುವೆ? ಗಂಗಾತೀರಕ್ಕೆ ಬರಬೇಕೆಂಬುದು ನನ್ನ ದೀರ್ಘಕಾಲದ ಬಯಕೆಯಾಗಿತ್ತು. ಅದು ನೆರವೇರಿತೆಂಬ ಸಂತೋಷದ ಸಮಯದಲ್ಲಿ ನನಗೆ ಖೇದವನ್ನುಂಟುಮಾಡುತ್ತಿದ್ದೀಯೆ. ನೀನು ಯಾವಾಗಲೂ ಶ್ರೀರಾಮನ ಸಮೀಪದಲ್ಲಿಯೇ ಇರತಕ್ಕವನು. ಅವನನ್ನು ಎರಡುದಿನ ಅಗಲಬೇಕಾಯಿತೆಂದು ಹೀಗೆ ಶೋಕಿಸುವೆಯಾ? ನನಗೂ ಸಹ ಶ್ರೀರಾಮನು ಪ್ರಾಣಕ್ಕಿಂತ ಪ್ರಿಯನಾದವನು. ನಾನು ಹೀಗೆ ಶೋಕಿಸುತ್ತಿಲ್ಲ, ನೋಡು. ಲಕ್ಷ್ಮಣ, ಚಿಕ್ಕ ಹುಡುಗನಂತೆ ಆಡಬೇಡ! ತಪಸ್ವಿಗಳ ದರ್ಶನವನ್ನು ಮಾಡಿ ವಸ್ತ್ರಾಭರಣಗಳನ್ನು ಅವರಿಗೆ ಕೊಡುವೆನು. ಅವರಿಗೆ ಅಭಿವಾದನೆ ಮಾಡಿ ಒಂದು ರಾತ್ರಿ ಅಲ್ಲಿದ್ದು ತಿರುಗಿ ಅಯೋಧ್ಯೆಗೆ ಹೊರಟುಹೋಗೋಣ. ನನಗೂ ಸಹ ಪದ್ಮದಳಾಯತಾಕ್ಷನೂ ಸಿಂಹೋರಸ್ಕನೂ ಕೃಶೋದರನೂ ಆನಂದದಾಯಕನೂ ಆದ ಶ್ರೀರಾಮನನ್ನು ನೋಡಲು ಮನಸ್ಸು ಹಾತೊರೆಯುತ್ತದೆ" ಎನ್ನುತ್ತಾಳೆ–

–ಉತ್ತರ, ಸರ್ಗ. ೪೬.

ಗಂಗಾನದಿಯನ್ನು ದಾಟಿದ ಮೇಲೆ ಲಕ್ಷ್ಮಣನು ಸೀತೆಗೆ ಕೈಮುಗಿದು ಕಣ್ಣೀರು ಸುರಿಸುತ್ತ "ವೈದೇಹಿ, ಪ್ರಾಜ್ಞನಾದ ಅಣ್ಣನು ಈ ನಿಮಿತ್ತದಿಂದ ನನ್ನನ್ನು ಲೋಕನಿಂದೆಗೆ ಗುರಿಮಾಡಿದನು. ನನ್ನ ಎದೆಯಲ್ಲಿ ಇದೊಂದು ಮಹತ್ತರವಾದ ಶೂಲವಾಗಿ ಪರಿಣಮಿಸಿತು. ಈ ಅವಸ್ಥೆಯಲ್ಲಿ ನನಗೆ ಮರಣವೇ ಲೇಸು. ಮರಣಕ್ಕಿಂತ ಹೆಚ್ಚಿನದಿದ್ದರೆ ಇನ್ನೂ ಉತ್ತಮ! ಈ ಬಗೆಯ ಸರ್ವನಿಂದ್ಯವಾದ ಕೆಲಸದಲ್ಲಿ ನನ್ನನ್ನು ನೇಮಿಸಬಾರದಾಗಿತ್ತು. ಓ ಸಾಧ್ವಿ, ಪ್ರಸನ್ನಳಾಗು. ನಾನು ಪಾಪಿಯೆಂದು ತಿಳಿಯಬೇಡ" ಎಂದು ಹೇಳುತ್ತ ನೆಲದ ಮೇಲೆ ಕುಸಿದುಬೀಳುತ್ತಾನೆ. ಗಟ್ಟಿಯಾಗಿ ಅಳುತ್ತ "ನನಗೆ ಸಾವು ಬರಬಾರದೆ" ಎಂದು ಹಲುಬುತ್ತಾನೆ. ಸೀತೆಗೆ ಹಿಂದೆಮುಂದಿನ ವಿಷಯ ಗೊತ್ತಿಲ್ಲದ್ದರಿಂದ ದಿಗ್ಭ್ರಾಂತಳಾಗಿ ಸತ್ಯವೇನೆಂಬುದನ್ನು ತಿಳಿಸೆಂದು ಒತ್ತಾಯಿಸುತ್ತಾಳೆ. ಆಗ ಲಕ್ಷ್ಮಣನು ರಾಮಾಜ್ಞೆಯನ್ನು ಬಿತ್ತರಿಸಿ, ಅವಳು ವಾಲ್ಮೀಕಿಮುನಿಗಳ ಪಾದದ ನೆರಳಿನಲ್ಲಿ ಇರಲೆಂದು ಹಾರೈಸುತ್ತಾನೆ. "ಪತಿವ್ರತಾ ಧರ್ಮವನ್ನು ಪಾಲಿಸುತ್ತ ಶ್ರೀರಾಮನನ್ನು ಸದಾ ಹೃದಯದಲ್ಲಿ ನೆನೆಯುತ್ತ ಇರು. ಅದರಿಂದ, ದೇವಿ, ನಿನಗೆ ಪರಮ ಶ್ರೇಯಸ್ಸು ದೊರೆಯುವುದು" ಎನ್ನುತ್ತಾನೆ.

–ಉತ್ತರ. ಸರ್ಗ ೪೭.

ಅನಂತರ ಸೀತೆಯ ಶೋಕದ ವರ್ಣನೆ.

ಅವಳು ಅತ್ತು ಗೋಳಾಡಿ ಕಡೆಯಲ್ಲಿ "ಲಕ್ಷ್ಮಣ, ಅಣ್ಣನ ಆಜ್ಞೆಯಂತೆ ನನ್ನನ್ನು ತೊರೆದು ಹೋಗು. ನನ ಪರವಾಗಿ ಅತ್ತೆಯರೆಲ್ಲರಿಗೂ ಮಹಾರಾಜನಿಗೂ ಕಾಲುಮುಟ್ಟಿ ನಮಸ್ಕರಿಸಿ ಅವರೆಲ್ಲರ ಕುಶಲವನ್ನು ಕೇಳಿದ್ದೇನೆಂದು ಹೇಳು. ಮಹಾರಾಜನಿಗೆ ನನ್ನ ಈ ಮಾತನ್ನು ತಿಳಿಸು" "ಶ್ರೀರಾಮ, ವಸ್ತುತಃ ಸೀತೆಯು ಪರಿಶುದ್ಧಳೆಂದೂ, ನಿನ್ನ ವಿಷಯದಲ್ಲಿ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಳೆಂದೂ ನಿನಗೆ ಗೊತ್ತಿದೆ. ಲೋಕಾಪವಾದಕ್ಕೆ ಹೆದರಿ ನನ್ನನ್ನು ಬಿಟ್ಟಿದ್ದೀಯೆ. ಪುರುಷೋತ್ತಮ, ಈ ದೇಹಕ್ಕಾಗಿ ನಾನು ಶೋಕಿಸುವುದಿಲ್ಲ. ಹೆಂಗಸಿಗೆ ಪತಿಯೇ ದೇವತೆ, ಪತಿಯೇ ಗುರು, ಆದ್ದರಿಂದ ಪ್ರಾಣವನ್ನಾದರೂ ಅರ್ಪಿಸಿ ಪತಿಗೆ ಪ್ರಿಯವಾದದ್ದನ್ನು ಮಾಡಬೇಕು. ನಿನ ಕೀರ್ತಿಯನ್ನುಳಿಸುವುದಕ್ಕಾಗಿ ಈ ಲೋಕಾಪವಾದವನ್ನು ಹೊರುತ್ತೇನೆ."

-ಉತ್ತರ. ಸರ್ಗ ೪೮

ಈ ಹಿನ್ನೆಲೆ ವಾಚಕರ ಸ್ಮರಣೆಯಲ್ಲಿರಲಿ. ಇಲ್ಲಿ ಅಭಿವ್ಯಕ್ತವಾಗುವ ಸೀತಾಲಕ್ಷ್ಮಣರ ಚರಿತ್ರವೇನೆಂಬುದನ್ನು ಗಮನಿಸಿರಲಿ.

ಅನಂತರ ಸೀತೆಗೆ ಇನ್ನೊಂದು ಭೀತಿ ಹುಟ್ಟಿತು. ತಾನಾಗಲೇ ಗರ್ಭಿಣಿ. ಲೋಕದ ಬಾಯನ್ನು ಕಟ್ಟುವರಾರು? ಇನ್ನೊಂದು ದಾರುಣ ಅಪವಾದ ಹುಟ್ಟಬಹುದು. ಈಗ ಬಂದಿರುವ ಅಪವಾದದ ಸಂಗತಿ ದೂರದ ಲಂಕೆಗೆ ಸಂಬಂಧಿಸಿದ್ದು. ನಿಶ್ಚಿತವಾದದ್ದಲ್ಲ. ಮುಂದೆ ಹುಟ್ಟಬಹುದಾದುದು ವಜ್ರಲೇಪವಾದೀತು. ಹೀಗೆ ಚಿಂತಿಸಿ ನೊಂದು ಬೆಂದುಹೋದ ಸೀತೆಯ ಬಾಯಿಂದ ಈ ಮಾತು ಬರುತ್ತದೆ-

ನಿರೀಕ್ಷ್ಯ ಮಾದ್ಯಗಚ್ಛ ತ್ವಂ ಋತು
ಕಾಲಾತಿವರ್ತಿನೀಂ ||

ಸೀತೆಯನ್ನು ಲಕ್ಷ್ಮಣನು ಕಾಡಿಗೆ ಬಿಟ್ಟುಬರಬೇಕಾದ ಸಂದರ್ಭದಲ್ಲಿ ಸೀತೆ-ಲಕ್ಷ್ಮಣರ ಚಿತ್ತವೃತ್ತಿ ಏನಿತ್ತೆಂಬುದನ್ನು ಕೆದಕಿ ಬೆದಕಿ ಹುಡುಕಬೇಕಾದ ಅಗತ್ಯವೇ ಇಲ್ಲ.

"ಲಕ್ಷ್ಮಣ, ಈಗ ನನಗೆ ಋತುಕಾಲವು ಅತಿಕ್ರಮಿಸಿದೆಯೆಂಬುದನ್ನು ನೋಡಿಹೋಗು" ಎಂದರೆ 'ನಾನು ಈಗ ಗರ್ಭಿಣಿಯೆಂಬುದು ನಿನ್ನ ಗಮನದಲ್ಲಿರಲಿ.'

ಈ ಮಾತು ಮುಂದೆ ಸಂಭವಿಸಬಹುದಾದ ಘೋರ ಅಪವಾದವನ್ನು ತಡೆಗಟ್ಟುವ ವಿಮೆಯಾಗುತ್ತದೆ. ಎಷ್ಟು ಹೃದಯವಿದ್ರಾವಕವಾದ ಕರುಳು ಹಿಂಡುವ ಮಾತಿದು! ಈ ಮಾತನ್ನು ಕೇಳಿದೊಡನೆ ಲಕ್ಷ್ಮಣನು ದೈನ್ಯದಿಂದ ಕಳವಳಿಸುತ್ತಾನೆ. ತಲೆಬಾಗಿ ನೆಲಮುಟ್ಟಿ ನಮಸ್ಕರಿಸುತ್ತಾನೆ. ಅವನಿಗೆ ಮಾತಾಡುವ ಶಕ್ತಿಯೇ ಉಡುಗಿಹೋಗುತ್ತದೆ. ಗಟ್ಟಿಯಾಗಿ ಅಳುತ್ತ ಸೀತೆಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ "ದೇವಿ, ಇದೇನು ಹೀಗೆ ನುಡಿಯುತ್ತೀಯೆ? ನಿನ ಆಕೃತಿಯನು ನಾನು ಕಣ್ಣೆತ್ತಿ ನೋಡಿದವನಲ್ಲ. ಹೇ ಪಾವನೆ ನಿನ್ನ ಪಾದಗಳನ್ನು ಮಾತ್ರ ನಾನು ನೋಡಿದವನು. ಇಲ್ಲಿ ಶ್ರೀರಾಮನಲ್ಲಿದ್ದಾಗ ರಾಮವಿರಹಿತಳಾದ ನಿನ್ನನ್ನು ನೋಡಬಲ್ಲೆನೆ?" ಎಂದು ಹೇಳಿ ನಮಸ್ಕರಿಸಿ ವಾಪಸು ಹೊರಡುತ್ತಾನೆ. 'ಶೋಕಭಾರಸಮನ್ವಿತ'ನಾಗಿ ದುಃಖದಿಂದ ಕಂಗೆಟ್ಟು ರಥವನ್ನೇರುತ್ತಾನೆ. ಈ ಸಂದರ್ಭದಲ್ಲಿ ಸೀತಾಲಕ್ಷ್ಮಣರ ಚಿತ್ತವೃತ್ತಿ ಏನೆಂಬುದನ್ನು ಕೆದಕಿ ಬೆದಕಿ ಹುಡುಕಬೇಕಾಗಿಯೇ ಇಲ್ಲ. ಇದೇನೂ ನಾರಿಕೇಳ ಪಾಕವಲ್ಲ. ದ್ರಾಕ್ಷಾಪಾಕದಂತೆ ಕರುಣೆಯ ಹೊನಲನ್ನು ಮಹಾಕವಿ ಹರಿಸಿದ್ದಾನೆ.

ಇಲ್ಲಿ ನಾವು ಬರೆಯಲು ಹೇಸುವ, 'ಅಭಿವ್ಯಕ್ತಿವಾದಿ'ಗಳ ಹೇಳಿಕೆಯನ್ನು ಬರೆಯಬೇಕಾಗಿ ಬಂದುದು ನಮ್ಮ ದುರ್ದೈವ. ಮೇಲ್ಕಂಡ ಸೀತಾವಾಕ್ಯದಲ್ಲಿ 'ಋತುಕಾಲಾತಿವರ್ತಿನೀಂ' ಎಂಬುದಕ್ಕೆ ರಾಮಾಯಣದ ಅನುವಾದಕನಾದ ಈ ಲೇಖಕನು ಬರೆದ ಅರ್ಥ

ಸರಿಯಲ್ಲವಂತೆ. ಗರ್ಭಿಣಿಯೆಂಬ ತಾತ್ಪರ್ಯ ವನ್ನು ಟಿಪ್ಪಣಿಯಲ್ಲಿ ಬರೆದದ್ದೂ ಅಯುಕ್ತವಂತೆ. ಮತ್ತೇನೆಂದರೆ, ಮೇಲಿನ ವಾಕ್ಯಕ್ಕೆ "(ನಾಥ ನೊಬ್ಬನಿಗೆ ನೋಡಲು ಯೋಗ್ಯವಾದ) ಋತು ಕಾಲ ನಿಂತ ಪ್ರದೇಶವನ್ನು ಚೆನ್ನಾಗಿ ನೋಡಿ ಹೋಗು" ಎಂದು ಬರೆಯಬೇಕಾಗಿತ್ತೆಂದು ಇವರ ಇಂಗಿತ. ಹಾಗೆ ಬರೆಯಲು ಈ ಅನುವಾದಕನು ಹೊಣೆಗೇಡಿಯಾದ ಭಂಡನಲ್ಲ.

ತಾನು ಗರ್ಭಿಣಿಯೆಂದು ಸೀತೆ ಹೇಳಿದ ಮಾತಿನಲ್ಲಿ ಸಹೃದಯಶಿರೋಮಣಿಗಳಾದ ಪ್ರಾಚೀನ ಮಹಾಕವಿಗಳು ಇನ್ನೊಂದು ಆಶಯ ವನ್ನು ಗುರುತಿಸಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ತಾನು ಆತ್ಮಹತ್ಯೆ ಮಾಡಿಕೊಳ್ಳುವುದು ಲೇಸೆಂದು ಅವಳ ಮನಸ್ಸಿನಲ್ಲಿ ಸುಳಿದಿದೆ. ಹಾಗೆ ಮಾಡಿದರೆ ಭ್ರೂಣಹತ್ಯೆಯ ಮಹಾಪಾಪ ಗಂಟುಬೀಳು ವುದೆಂಬ ಭೀತಿ ಮನಸ್ಸಿಗೆ ಕಡಿವಾಣ ಹಾಕಿದೆ. ಕಾಳಿದಾಸ ಹೇಳುತ್ತಾನೆ-(ರಾಮನಿಗೆ ಸೀತೆ ಕಳಿಸುವ ಸಂದೇಶ)

"ಶ್ರೀರಾಮ, ನಿನ್ನ ವಿಯೋಗದಿಂದ ನನ್ನ ಈ ಹಾಳು ಜೀವಿತ ವ್ಯರ್ಥವಾಯಿತು. ನನ್ನ ಗರ್ಭ ದಲ್ಲಿರುವ ನಿನ್ನ ತೇಜಸ್ಸನ್ನು ರಕ್ಷಿಸಬೇಕಾಗಿದೆ. ಅದು ಅಡ್ಡಿಯಾಗದಿದ್ದರೆ ಪ್ರಾಣವನ್ನು ತ್ಯಜಿಸದೆ ಉಳಿಯುತ್ತಿದ್ದೇನೆ ?

"ಆದ್ದರಿಂದ ಪ್ರಸವವಾಗುವವರೆಗೆ ಸೂರ್ಯ ನನ್ನು ಈಕ್ಷಿಸುತ್ತ ತಪಸ್ಸು ಮಾಡುವೆನು. ಜನ್ಮಾಂತರದಲ್ಲಿಯೂ ನೀನೇ ನನಗೆ ಪತಿಯಾಗ ಬೇಕು. ಆದರೆ (ಈ ರೀತಿ) ವಿರಹ ಬಾರದಿರಲಿ."

–ರಘು. ೧೪, ೬೫–೬೬

ಶ್ರೀರಾಮನು ಏಕಪತ್ನೀವ್ರತಸ್ಥ. ಇನ್ನೊಬ್ಬ ಳನ್ನು ಮತ್ತೆ ಮದುವೆಯಾಗತಕ್ಕವನಲ್ಲ. ಆತನ ವಂಶ ಅಳಿದು ಹೋಗಬಾರದೆಂಬ ಸೀತೆಯ ಕಳಕಳಿ ಇಲ್ಲಿ ಅಭಿವ್ಯಕ್ತವಾಗಿದೆಯೆಂಬುದನ್ನೂ ಸಹೃದಯರು ಗಮನಿಸಬೇಕು. ರಾಮಾಯಣ ದಲ್ಲಿ ಈ ಮಾತು ಸ್ಪಷ್ಟವಾಗಿದೆ.

ನ ಖಲ್ವದ್ಯೈವ ಸೌಮಿತ್ರೇಜೀವಿತಂ ಜಾಹ್ನ ವೀಜಲೇ ।
ತ್ಯಜೇಯಂ ರಾಜವಂಶಸ್ತು ಭರ್ತುರ್ಮೇ ಪರಿಹಾಸ್ಯತೇ ॥

–ಉತ್ತರ ೪೮–೮

ಕನ್ನಡದ ಮಹಾಕವಿ ಲಕ್ಷ್ಮೀಶನು ಈ ಸಂದರ್ಭದಲ್ಲಿ –

'ಕೊಂದುಕೊಂಬೊಡೆ ತನ್ನ ಬೆಂದೊಡಲೋದೆ ಬಸಿರ ದಂದುಗಂ'

ಎಂದು ಹೇಳಿಸಿದ್ದಾನೆ.

–ಜೈ.ಭಾ. ಸಂಗ್ರಹ ೧೯–೨೪

ಲಕ್ಷ್ಮೀಶನು ಈ ಸನ್ನಿವೇಶದಲ್ಲಿ ಕರುಣರಸ ವನ್ನು ಎಷ್ಟು ಕೋಮಲವಾಗಿ ಪೋಷಿಸಿದ್ದಾ ನೆಂಬುದನ್ನು ನೋಡಿ –

೧. ರಾಮನಂ ಭುವನಾಭಿರಾಮನಂ ಗುಣರತ್ನ
ಧಾಮನಂ ರಘುಕುಲೋದ್ದಾಮನಂ ರೂಪಜಿತ
ಕಾಮನಂ ಸತ್ಕೀರ್ತಿಕಾಮನಂ ಶರಣ ಜನವಾರ್ಧಿಯಂ ಮಿಗೆ ಪೆರ್ಚಿಪ ।
ಸೋಮನಂ ಸೌಭಾಗ್ಯಸೋಮನಂ ಕುವಲಯ
ಶ್ಯಾಮನಂ ನಿಜತನುಶ್ಯಾಮನಂ ಘನಪುಣ್ಯ
ನಾಮನಂ ಸಂತತಂ ನಾ ಮನಂದಣಿಯೆ ರಮಿಸದೆ ಬಾಳ್ವೆನೆಂತೆಂದಳು ॥

ಸೀತೆಯು ಗೋಳಾಡುವುದನ್ನು ನೋಡಿ,

೨. ವೃಕ್ಷಲತೆಗಳ್ ಬಾಡಿ ಸೊರಗುತಿರ್ದವು,
ಶೋಕಭಾರದಿಂ ಕಲ್ಗಳುಂ ಕರಗುತಿರ್ದವು.

೩. ಮೊರೆಯಲೊಲ್ಲವು ತುಂಬಿ ಕುಣಿಯ ಲೊಲ್ಲವು ನವಿಲ್
ಬೆರೆಯಲೊಲ್ಲವು ಕೋಕಿ ನಡೆಯ ಲೊಲ್ಲವು ಹಂಸೆ
ಕರೆಯಲೊಲ್ಲವು ಪಿಕಂ ನುಡಿಯಲೊಲ್ಲವು ಶುಕಂ ನಲಿಯಲೊಲ್ಲವು ಚಕೋರಿ

ಇತ್ಯಾದಿ. ಈ ಪ್ರಕಾರವಾಗಿ ಕರುಣರಸದ ಕೋಡಿ ಯನ್ನೇ ಹರಿಸಿದ್ದಾನೆ ಲಕ್ಷ್ಮೀಶ.

ರಾಮಾಯಣದಲ್ಲಿ ನಿಜವಾಗಿ ಹೃದಯ ವಿದ್ರಾವಕ ಪ್ರಸಂಗವೆಂದರೆ ಇದೇ. ಯಾವ ಸೀತೆ ತನ್ನ ಸತೀತ್ವದ ರಕ್ಷಣೆಗಾಗಿ ಜೀವನವನ್ನೇ ಪಣ ವಾಗಿಟ್ಟಳೋ, ಪತ್ನೀಧರ್ಮವನ್ನು ಪಾಲಿಸ ಬೇಕೆಂಬ ದೃಢಸಂಕಲ್ಪದಿಂದ ಹದಿನಾಲ್ಕು ವರ್ಷ ಕಾಡಿನಲ್ಲಿ ಸವೆದಳೋ, ರಾವಣನು ಒಡ್ಡಿದ ವಿವಿಧ ಆಮಿಷಗಳನ್ನು ಭೋಗವಿಲಾಸಗಳನ್ನು ತನ್ನ ಸೌಶೀಲ್ಯಪಾಲನೆಗಾಗಿ ಎಡಗಾಲಿ- ನಿಂದೊದ್ದಳೋ, ಅಗ್ನಿಪರೀಕ್ಷೆಯಲ್ಲಿ ಸಹ

ಉತ್ತೀರ್ಣಳಾಗಿ ಬಂದಳೋ ಅಂತಹ ಮಹಾತಾಯಿ ಅಪವಾದ ಭೀತಿಯಿಂದ ತತ್ತರಿಸಿ,

'ನಿರೀಕ್ಷ್ಯ ಮಾದ್ಯಗಚ್ಛತ್ತ್ವಮೃತು
ಕಾಲಾತಿವರ್ತಿನೀಂ'

ಎಂದು ಹೇಳಬೇಕಾಗಿ ಬರುತ್ತದಲ್ಲ, ಇದಕ್ಕಿಂತ ಕರುಳು ಹಿಂಡುವ್ಯಪ್ರಸಂಗ ಇನ್ನೊಂದು ಇದ್ದೀತೆ? ಕಾಡಿನಲ್ಲಿ ಪರಿತ್ಯಕ್ತಳಾಗಿ, ತನ್ನ ದುರ್ದೈವಕ್ಕೆ ಹಲುಬಿ ಗೋಳಾಡುತ್ತಿರುವ ಗರ್ಭಿಣಿಯಾದ ಒಂದು ಹೆಣ್ಣನ್ನು ನೋಡಿ, ಎಂತಹ ಕಠೋರ ಹೃದಯದ ಪಿಶಾಚವೂ ಸಹ ಮರುಗಿ ಕಣ್ಣೀರು ಸುರಿಸೀತು.

ಆದರೆ ಸಹೃದಯಶಿರೋಮಣಿಗಳೆಂದು ತಿಳಿದು ಬೀಗಿಕೊಂಡಿರುವ ಈ 'ಅಭಿವ್ಯಕ್ತಿ'ವಾದಿಗಳಿಗೆ ಇದೂ ಒಂದು ಕಾಮದ ಮೋಜಿನ ಸಂದರ್ಭವಾಗಿ ಬಿಡುತ್ತದೆ. "ಋತುಕಾಲನಿಂತ ಪ್ರದೇಶವನ್ನು ನೋಡು" "ಇಲ್ಲಿ ನೋಡುವ ಕ್ರಿಯೆಯೇ ಐಂದ್ರಿಕವಾಗಿ ಭೋಗಕ್ರಿಯೆಯೂ ತೆಗೆದುಕೊಳ್ಳಬಹುದು. ಈ ಶಬ್ದವನ್ನು ದಶರಥ, ಕೌಸಲ್ಯೆ, ವಸಿಷ್ಠ, ಹನುಮಂತ-ಇವರೂ ಬಳಸಿದ್ದಾರೆ. ಆದರೆ ಲಕ್ಷ್ಮಣನು ಇದನ್ನು ಬಳಸಿದಾಗ ಈ ಜನರ ರಸಿಕತೆ ಉಕ್ಕಿ ಹರಿಯುತ್ತದೆ. ವೈದೇಹಿ ಎಂದರೆ 'ಹೇ ಅನಂಗೆ' ಎಂದು ಅರ್ಥವಂತೆ ! ವಿದೇಹ ಶಬ್ದಕ್ಕೆ ಕಥಂಚಿತ್' 'ಅನಂಗ' ಎಂದು ಅರ್ಥಮಾಡಲು ಸಾಧ್ಯವಾದರೂ ಅದು 'ವೈದೇಹಿ' ಆದದ್ದು ಹೇಗೆ ? 'ಅನಂಗೆ' ಎಂದು ಹೇಳಲು ಮನ್ಮಥನು ಹೆಂಗಸೆ ? 'ಕಥ ಮತ್ರ ಹಿ ಪಶ್ಯಾಮಿ ರಾಮೇಣ ರಹಿತಾಂ ವನೇ'-"ಹೇಗೆ ತಾನೆ ನೋಡಲಿ ? – ಎಂಬಲ್ಲಿ ಕರ್ಮ ಪದಾಧ್ಯಾಹಾರವನ್ನು ಗಮನಿಸಬೇಕು" ಎಂದು ಬರೆಯುತ್ತಾರೆ ಈ ವಿದ್ವಾಂಸರು. 'ರಹಿತಾಂ' ಎಂಬುದು ಕರ್ಮಪದವೆಂದು ಶಾಲಾಬಾಲಕನಾದರೂ ಹೇಳಬಲ್ಲ. ಇವರ ಕಾವ್ಯ ಶಾಸ್ತ್ರಪಾಂಡಿತ್ಯ ಬಗೆ ಇದು.

ರಾಮಾಯಣದಲ್ಲಿ ವಾಲ್ಮೀಕಿಗಳ ಸಾಕ್ಷ್ಯ ಪ್ರಬಲವಾದದ್ದು. ಕವಿಹೃದಯವನ್ನು ಕವಿಗಿಂತ ಚೆನ್ನಾಗಿ ಯಾರು ಬಲ್ಲರು ?

ಆಗಲು ಕಣ್ಣಾರೆ ನೋಡಲು ಒಡ್ಡುತ್ತಾಳೆ"ಎಂದು ಅಶ್ಲೀಲವಾಗಿ ಅವಾಚ್ಯ ಶಬ್ದಗಳನ್ನು ಬಳಸಿ ಹಂಗಿಸಿ ಚಕ್ಕಂದವಾಡಿದ್ದಾರೆ. ಇವರಿಗೆ ಹೃದಯವಿದೆಯೆ ? 'ಹೃದಯದರಿದ್ರ'ರೆಂದರೆ ಇವರೇ. ಇಷ್ಟೇ ಅಲ್ಲ, "ಸೀತೆಗೆ ಇಲ್ಲಿಯವರೆಗೂ ತನ್ನ ಇಂಗಿತದ ಆಳದಲ್ಲಿ 'ನಾಥ'ನಾಗಿದ್ದವನೂ, ಈಗ 'ನಾಥ'ನಾಗಬಲ್ಲವನೂ ಲಕ್ಷ್ಮಣನೊಬ್ಬನೇ" ಎಂದು ಬರೆದು ವಿಕಟರಸಿಕತೆಯನ್ನು ಪ್ರದರ್ಶಿಸಿದ್ದಾರೆ.

ರಾಮಾಯಣದಲ್ಲಿ ನಾಥ, ಮಹಾಬಾಹು, ವೈದೇಹಿ-ಮೊದಲಾದ್ಯಶಬ್ದಗಳು ಲೆಕ್ಕವಿಲ್ಲದಷ್ಟು ಸಲ ಬರುತ್ತವೆ. ಈ 'ವಿಚಾರವಾದಿ'ಗಳು ಸೀತಾಲಕ್ಷ್ಮಣರ ಸಂದರ್ಭದಲ್ಲಿ ಮಾತ್ರ ಈ ಶಬ್ದಗಳಿಗೆ ಅರ್ಥಾಂತರವನ್ನು ಕಲ್ಪಿಸಿ ಮೂಗಿನ ನೇರಕ್ಕೆ ತುರುಕಲು ಯತ್ನಿಸುವುದು ಹಾಸ್ಯಾಸ್ಪದ. ಉದಾಹರಣೆಗೆ, ವೈದೇಹಿ ಎಂಬ ಶಬ್ದವನ್ನು

ವಾಲ್ಮೀಕಿಮುನಿಗಳ ಸಾಕ್ಷ್ಯ

ವಾಲ್ಮೀಕಿರಾಮಾಯಣದಲ್ಲಿ ವಾಲ್ಮೀಕಿಗಳ ಸಾಕ್ಷ್ಯಪ್ರಬಲವಾದದ್ದು. ಕವಿಹೃದಯವನು ಕವಿಗಿಂತ ಬಲ್ಲವರು ಯಾರು ? ಲಕ್ಷ್ಮಣನು ಸೀತೆಯನ್ನು ಪರಿತ್ಯಜಿಸಿ ಹೋದಮೇಲೆ, ವಾಲ್ಮೀಕಿಗಳೇ ಬಂದು ಸೀತೆಯನ್ನು ಸಂತೈಸುತ್ತ ಹೇಳುತ್ತಾರೆ –

"ಹೇ ಪತಿವ್ರತೆ, ನೀನು ದಶರಥಮಹಾರಾಜನ ಸೊಸೆ. ಶ್ರೀರಾಮನ ಪ್ರೀತಿಯ ರಾಣಿ. ಜನಕರಾಜನ ಮಗಳು. ನೀನು ಈ ಪ್ರಕಾರ ಇಲ್ಲಿಗೆ ಬರುವೆಯೆಂದು ತಪೋಬಲದಿಂದ ತಿಳಿದಿದ್ದೇನು. ಇದರ ಕಾರಣವೆಲ್ಲವೂ ನನ್ನ ಅಂತರಂಗಕ್ಕೆ ವಿದಿತವಾಗಿದೆ. ನಿನ್ನ ಪರಿಶುದ್ಧ ಚಾರಿತ್ರವನ್ನು ಪೂರ್ಣವಾಗಿ ನಾನು ಬಲ್ಲೆ. ಮೂರು ಲೋಕಗಳಲ್ಲಿ ನಡೆಯುವುದೆಲ್ಲವೂ ನನಗೆ ಗೋಚರ. ತಪೋಲಬ್ಧವಾದ ದಿವ್ಯನೇತ್ರದಿಂದ, ಸೀತೆ,

ನೀನು ದೋಷರಹಿತಳೆಂಬುದನ್ನು ತಿಳಿದಿದ್ದೇನೆ. ವೈದೇಹಿ, ಧೈರ್ಯವನ್ನು ತಂದುಕೊ."

–ಉತ್ತರ ೪೯, ೧೧–೧೫

'ಸ್ವಾಗತಂ ತೇ ಪತಿವ್ರತೇ, ಮಹಾಭಾಗೇ, ಅಪಾಪಾಂ ವೇದ್ಮಿ ಸೀತೇತ್ವಾಂ' – ಈ ಮಾತುಗಳು ವಾಲ್ಮೀಕಿಗಳ ಬಾಯಿಂದಲೇ ಬಂದವು. ಗಂಗಾತೀರದಲ್ಲಿ ಅವಳು ಒಂಟಿಯಾಗಿ ಶೋಕಿಸುತ್ತಿರುವುದನ್ನು. ಶಿಷ್ಯರಿಂದ ತಿಳಿದಕೂಡಲೇ, ವಾಲ್ಮೀಕಿಗಳು ಧಾವಿಸುತ್ತ ಬಂದಿದ್ದಾರೆ. ಪೂಜ್ಯ ಅತಿಥಿಯನು ನೋಡಿಕೊಳ್ಳುವಂತೆ ಅರ್ಘ್ಯಾದಿಗಳನ್ನಿತ್ತು ಸೀತೆಯನ್ನು ಉಪಚರಿಸುತ್ತಾರೆ. ಆಶ್ರಮಕ್ಕೆ ಕರೆತಂದು ಅಲ್ಲಿದ್ದ ಮುನಿಗಳ ಪತ್ನಿಯರ ಪರಿಚಯ ಮಾಡಿಸಿ –

"ತಾಪಸಿಯರೆ, ನೀವು ಸೀತೆಯನ್ನು ಪರಮಸ್ನೇಹದಿಂದ ಕಾಣಿರಿ. ನಾನು ಹೇಳಿದ್ದೇನೆಂದು ನನ್ನಲ್ಲಿರುವ ಗೌರವದಿಂದ ಇವಳನ್ನು ಸತ್ಕರಿಸುತ್ತೀರಿ. ಅಷ್ಟೇ ಅಲ್ಲ, ಇವಳು ನಿಮಗೆ ವಿಶೇಷವಾಗಿ ಪೂಜ್ಯಳೆಂದು ತಿಳಿಯಿರಿ (ಪೂಜ್ಯಾ ಪೋsಸ್ಯಾ ವಿಶೇಷತಃ)" ಎಂದು ಹೇಳುತ್ತಾರೆ.

–ಉತ್ತರ ೪೯ ೨೩–೨೪

ಮುಂದೆ ವಾಲ್ಮೀಕಿಗಳು ಸೀತಾದೇವಿಯನು ಅಯೋಧ್ಯೆಗೆ ಕರೆತಂದು ರಾಜಸಭೆಯಲ್ಲಿ ಶ್ರೀರಾಮನಿಗೆ ಒಪ್ಪಿಸುವ ಪ್ರಸಂಗ. ವಾಲ್ಮೀಕಿ ಮುನಿಗಳ ಹಿಂದೆ, ರಾಮನನ್ನೇ ಧ್ಯಾನಿಸುತ್ತ ಕೈಮುಗಿದು ತಲೆತಗ್ಗಿಸಿ ಬರುತ್ತಿದ್ದ ಸೀತಾದೇವಿ, ಬ್ರಹ್ಮನ ಹಿಂದೆ ಬರುವ ವೇದಮಾತೆಯಾದ 'ಶ್ರುತಿ'ಯಂತೆ ಕಾಣಿಸಿದಳಂತೆ. (ಉತ್ತರ ೯೬-೧೩) ಇಲ್ಲಿ 'ಶ್ರುತಿ' ಎಂಬ ಉಪಮಾನದ ಪವಿತ್ರತೆಯನ್ನು ಅರ್ಥಪುಷ್ಟಿಯನ್ನು ಗಮನಿಸಿ. ಅನಂತರ ಸೀತಾದೇವಿಯನ್ನು ಸ್ವೀಕರಿಸಬೇಕೆಂದು ಶ್ರೀರಾಮನಿಗೆ ಹೇಳುತ್ತ ಈ ಮಾತುಗಳನ್ನಾಡುತ್ತಾರೆ.

(ಉತ್ತರಕಾಂಡ, ೬೯, ೨೦–೨೩)

"ರಾಘವ, ನಾನು ಸಾವಿರಾರು ವರ್ಷಗಳ ಕಾಲ ತಪಸ್ಸು ಮಾಡಿದ್ದೇನೆ. ಮನೋವಾಕ್ಕಾಯಗಳಿಂದ ಸತ್ಯವನ್ನು ಪಾಲಿಸಿದ್ದೇನೆ. ಅದರ ಫಲ, ಸೀತೆಯಲ್ಲಿ ಲೇಶವಾದರೂ ದೋಷವಿದ್ದಲ್ಲಿ ನನಗೆ ಲಭಿಸದೆ ಹೋಗಲಿ. ಪಂಚೇಂದ್ರಿಯಗಳಲ್ಲಿಯೂ ಮನಸ್ಸಿನಲ್ಲಿಯೂ ಇವಳು ಪರಿಶುದ್ಧಳೆಂದು ತಿಳಿದೇ ನಾನು ಇವಳಿಗೆ ಆಶ್ರಯವನ್ನು ಕೊಟ್ಟಿದ್ದೇನೆ. ಸೀತೆ ಶುದ್ಧಚಾರಿತ್ರಳು, ಯಾವ ಪಾಪವೂ ಇಲ್ಲದವಳು, ಪತಿದೇವತೆ." ಸೀತೆಯು ಪರಮ ಪವಿತ್ರಳೆಂಬುದಕ್ಕೆ ಇನ್ನಾವ ಆಧಾರ ಬೇಕು ?

ವಾಲ್ಮೀಕಿಗಳೇ ವಿರುದ್ಧವಾದ ಸಾಕ್ಷ್ಯವನ್ನಿತ್ತಿರುವುದು ವಿಚಾರವಾದಿಗಳ ದೌರ್ಭಾಗ್ಯ ! ಅವರ ವಿಚಾರಗಳಿಗೆ ಬುಡವೇ ಇಲ್ಲವೆಂದು ವಾಲ್ಮೀಕಿಗಳ ಸಾಕ್ಷ್ಯ ಸ್ಪಷ್ಟಗೊಳಿಸಿದೆ.

ಭೂದೇವಿಯ ಸಾಕ್ಷ್ಯ

ಮುಂದೇನಾಯಿತು ? ಜಾನಕಿಯು ತನ್ನ ಶೀಲ ಶುದ್ಧಿಯನ್ನು ಪ್ರಮಾಣೀಕರಿಸುತ್ತಾಳೆಂದು ತಿಳಿದು ದೇವತೆಗಳೆಲ್ಲರೂ ಆಕಾಶದಲ್ಲಿ ಬಂದು ನೆರೆದರು. ಲೋಕದ ಕೆಟ್ಟ ನುಡಿಗಳಿಂದ ಆಕೆಯ ಜೀವ ರೋಸಿಹೋಗಿತ್ತು. ತಲೆಯನ್ನು ಕಡಿದಿಟ್ಟರೂ ಅದು ಕುಂಬಳಕಾಯಿ ಎಂದು ಹೇಳುವ ಜನ ಆಗಲೂ ಇದ್ದರು, ಈಗಲೂ ಇದ್ದಾರೆ! ಕಾಷಾಯ ವಸ್ತ್ರವನ್ನುಟ್ಟಿದ್ದ ಜಾನಕಿ ಕೈಮುಗಿದು ಅಧೋಮುಖಿಯಾಗಿ ಹೇಳುತ್ತಾಳೆ –

"ಶ್ರೀರಾಮನನ್ನು ಹೊರತಾಗಿ ಇನ್ನೊಬ್ಬನನ್ನು ನಾನು ಮನಸ್ಸಿನಲ್ಲಿಯೂ ಚಿಂತಿಸುವುದಿಲ್ಲವೆಂಬುದು ಸತ್ಯ. ಈ ಸತ್ಯಬಲದಿಂದ ಮಾಧವಪತ್ನಿಯಾದ ಭೂದೇವಿಯು ತನ್ನ ಗರ್ಭದಲ್ಲಿ ನನ್ನನ್ನು ಸೇರಿಸಿಕೊಳ್ಳುವುದಕ್ಕಾಗಿ ರಂಧ್ರವನ್ನೀಯಲಿ. "ಮನೋವಾಕ್ಕಾಯಗಳಿಂದ ನಾನು ಶ್ರೀ ರಾಮನನ್ನೇ ಅರ್ಚಿಸುತ್ತಿರುವುದು ಸತ್ಯವಾದರೆ, ಭೂದೇವಿಯು ನನ್ನನ್ನು ತನ್ನ ಗರ್ಭದಲ್ಲಿ ಸೇರಿಸಿಕೊಳ್ಳಲಿ. ಶ್ರೀರಾಮನನ್ನು ಹೊರತಾಗಿ ಇನ್ನೊಬ್ಬ ಪುರುಷನನ್ನು ನಾನರಿಯೆನು – ಎಂಬ ನನ್ನ ನುಡಿ ಸತ್ಯವಾದರೆ, ಭೂದೇವಿಯು ನನಗೆ ಸ್ಥಳವನ್ನೀಯಲಿ."

ಒಡನೆಯೇ ಭೂತಳವನ್ನು ಭೇದಿಸಿಕೊಂಡು ದಿವ್ಯ ಸಿಂಹಾಸನದಲ್ಲಿ ಕುಳಿತಿದ್ದ ಭೂದೇವಿ ಮೇಲೆದ್ದು ಕಾಣಿಸಿಕೊಂಡಳು. ಸೀತಾದೇವಿಯನ್ನು ಅಭಿನಂದಿಸಿ ಎರಡು ಕೈಗಳಿಂದಲೂ ಆಲಂಗಿಸಿ ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿಕೊಂಡಳು. ದೇವತೆಗಳು ಅವಿಚ್ಛಿನ್ನವಾಗಿ ಹೂ

ಮಳೆಯನ್ನು ಸುರಿದರು. "ಸಾಧು ಸಾಧು; ಸೀತೆ,ನಿನ್ನ ಶೀಲವು ಎಷ್ಟು ಪರಿಶುದ್ಧವಾದುದು! ಎಂದು ಉದ್ಗರಿಸುತ್ತಿರುವಾಗ ನಮ್ಮ ತಾಯಿ ಸೀತೆ ಭೂಗರ್ಭದಲ್ಲಿ ಇಳಿದುಹೋದಳು.

—ಉತ್ತರ. ಸರ್ಗ—೯೭

ವಿಕಟರಸಿಕರ ಕುತ್ಸಿತವಾದವೂ ಭೂಗತವಾಗಿ ಮಣ್ಣು ಮುಕ್ಕಿತು.

ಧಾರ್ಷ್ಟ್ಯದ ಟೀಕೆಗಳು

ನಮಗಿಂತ ಹಿರಿಯರಾದ ವಿದ್ವಾಂಸರೂ ಮಹಾಕವಿಗಳೂ ವಿಖ್ಯಾತ ಸಾಹಿತಿಗಳೂ ಸೀತಾದೇವಿಯ ವಿಷಯವಾಗಿ ಎಷ್ಟು ಪೂಜ್ಯಭಾವವನ್ನು ತಳೆದಿದ್ದಾರೆಂಬುದು ಈ 'ವಿಚಾರವಾದಿ'ಗಳಿಗೆ ಗೊತ್ತಿಲ್ಲದೇ ಇಲ್ಲ. ಅವರೇ ಬರೆಯುತ್ತಾರೆ: "ಸೀತೆಯನ್ನು ಮಹಾಸತಿಯೆಂದು ಸ್ವಾಮಿ ವಿವೇಕಾನಂದರು ಹೀಗೆಂದಿದ್ದಾರೆ- There can be a hundred Ramas, but there can be only one Sita. ಕುವೆಂಪು ಅವರು ಈ ಮಾತನ್ನು ಸಮರ್ಥಿಸುತ್ತ, ಹೆಲೆನ್‌ನಂತಹ ಹೆಣ್ಣನ್ನು ಕೊಟ್ಟ ಹೋಮರ್ ಕವಿ 'ಸೀತೆ'ಯಂತಹ 'ಶುಚಿ' ಹೆಂಗಸನ್ನು ಕಲ್ಪಿಸಲಾರ—ಎಂದು ತಮ್ಮ ಹೋಮರ್ ಎಂಬ ಕವಿತೆಯಲ್ಲಿ ಹೇಳಿದ್ದಾರೆ. ಈ ಮಾತುಗಳು ರಾಮಾಯಣವನ್ನು, ಕೇವಲ ಪಾರಾಯಣ ಮಾಡಿದ್ದರಿಂದ ಬಂದಂತಹವು, ಪರಿಸಿದ್ದರಿಂದಲ್ಲ."

"ಹಿರಿಯರಾದ ಗುಂಡಪ್ಪ, ಮಾಸ್ತಿಯವರೂ ವಿಮರ್ಶೆಯ ಹೆಸರಿನಲ್ಲಿ ಯಥಾವತ್ತಾದ ಪೂಜಾ ಪುರಸ್ಕಾರಗಳನ್ನು ರಾಮಾಯಣಕ್ಕೆ ಸಲ್ಲಿಸಿದ್ದಾರೆ."

"ಆದರೆ ಕುರ್ತಕೋಟಿಯವರಂಥ ವಿಮರ್ಶಕರೂ ಈ ಪೂಜಾಸಂಪ್ರದಾಯಕ್ಕೆ ಸಿಕ್ಕಿ ಹೋಗಿದ್ದಾರೆಂದು" ಈ ವಿಚಾರವಾದಿಗಳಿಗೆ ವಿಷಾದವಾಗಿದೆ. ಡಿ. ವಿ. ಗುಂಡಪ್ಪನವರು ಸೀತೆಯ ವಿಷಯವಾಗಿ ಹರಿಕಥೆ ಮಾಡಿದ್ದಾರಂತೆ. ಇವರ ದೃಷ್ಟಿಯಲ್ಲಿ ಮಹಾಕವಿ ಕುವೆಂಪು ಅವರು ರಾಮಾಯಣವನ್ನು 'ಕೇವಲ ಪಾರಾಯಣ ಮಾಡಿದವರು, ಪರಿಸಿದವರಲ್ಲ' ಹೀಗೆ ಬರೆಯುವಷ್ಟು ಧಾರ್ಷ್ಟ್ಯವಿದೆ ಇವರಿಗೆ.

ಡಾ|| ವಿ. ಸೀ. ಯವರು ಹೆಸರಾಂತ ಸಾಹಿತಿಗಳು, ಕವಿಗಳು. ವಿಮರ್ಶಕರು. ಇಂಗ್ಲಿಷ್-ಕನ್ನಡ-ಸಂಸ್ಕೃತ ಸಾಹಿತ್ಯ ಸಾರಗಳನ್ನು ಏಕಾಪೋಶನವಾಗಿ ಕುಡಿದವರು. ಅವರ ಕಾವ್ಯ ವಿಮರ್ಶನ ಪದ್ಧತಿ ಮಾನವೀಯ ದೃಷ್ಟಿಯುಳ್ಳದ್ದು. ಪೂಜಾಸಂಪ್ರದಾಯ ಅವರಿಗೆ ಬಲು ದೂರ. ಅವರು ತಮ್ಮ 'ವಾಲ್ಮೀಕಿ ರಾಮಾಯಣ' ಎಂಬ ಗ್ರಂಥದಲ್ಲಿ ಸೀತೆಯ ವಿಷಯವಾಗಿ ಬರೆಯುತ್ತಾರೆ. "ಸೀತೆಯ ಹೆಸರು, ಕತೆಗಳಿಂದ ರಾಮಾಯಣದ ಹಿರಿಮೆ ಹೆಚ್ಚಿದೆ. ಅದರ ಒಂದು ವರ್ಣನೆ 'ಸೀತಾಯಾಃ ಚರಿತಂ ಮಹತ್.' ಮೊದಲ ಕಾಲದಿಂದಲೂ ಆಕೆಯ ಪರವಾಗಿ ಪ್ರೀತಿಯನ್ನೂ ಗೌರವವನ್ನೂ ನಮ್ಮ ಜನಕ್ಕೆ ಉಂಟುಮಾಡಿರುವುದು ಆಕೆಯ ವ್ಯಕ್ತಿತ್ವ ಮತ್ತು ಶೀಲ. ಅವುಗಳ ಗರಿಮೆ" (ಪುಟ. ೯೧). ಲಕ್ಷ್ಮಣನ ವಿಷಯವಾಗಿ ಅದೇ ಗ್ರಂಥದಲ್ಲಿ ಹೇಳುತ್ತಾರೆ "ಲಕ್ಷ್ಮಣ ಸೀತೆಯನ್ನು ತಾಯಿಯಂತೆ ಸೇವಿಸುತ್ತಾನೆ. (ಟಿಪ್ಪಣಿ) ಅವನ ಭಾವನೆಯೂ ಹಾಗೆ. ತಾಯಿ ಸುಮಿತ್ರೆ ಹೇಳಿದ್ದದ್ದೂ ಅದನ್ನೇ. 'ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಂ'" (ಪುಟ, ೮೨). "ಇವನೇ (ಲಕ್ಷ್ಮಣನೇ) ನಿಜವಾಗಿ ರಾಮಾನುಜ. ರಾಮನ ಪರಮ ಸೋದರ. ರಾಮನಿಗೆ ಗೊತ್ತು ಅವನು ಸಾರಗ್ರಾಹಿ ಎಂದು. ಅವನ ಶೌರ್ಯ, ಪರಾಕ್ರಮ ಎಂಥವೆಂಬುದು ಹನುಮಂತನಿಗೆ ಗೊತ್ತು. ಸೀತೆಗೆ ಗೊತ್ತು ಅವನ ಆತ್ಮ ಎಷ್ಟು ಪರಿಶುದ್ಧವೆಂದು; ಅವನ ಭಕ್ತಿ, ಧೈರ್ಯ ಎಂಥವೆಂದು." (ಪುಟ. ೮೪)

ವಿಪಶ್ಚಿತರ ಸಾಕ್ಷ್ಯ

ರೈ|| ಆ|| ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳ ಕೀರ್ತಿಯ ಔನ್ನತ್ಯವನ್ನರಿಯದವರು ಯಾರು? ಅವರು ತಮ್ಮ ಜೀವನವನ್ನೇ ವಾಲ್ಮೀಕಿ ರಾಮಾಯಣದ ವ್ಯಾಸಂಗಕ್ಕೆ ಮುಡಿಪಾಗಿ ಸಲ್ಲಿಸಿದ್ದಾರೆ. ಅವರಿಗಿಂತ ಉತ್ತಮ ವಾಗ್ಮಿಗಳೂ ಸಹೃದಯರೂ ಯಾರಿದ್ದಾರೆ? ಅವರು ತಮ್ಮ ಒಂದು ಉಪನ್ಯಾಸದಲ್ಲಿ ಹೇಳುತ್ತಾರೆ: Afterwards, I shall take up the life of that unparalled heroine of all the literature, Sita herself, whose name is a synonym for all the virtues of women in any land and of any time (lectures

on the Ramayana, page 3) ಈ ಮಹನೀಯರೆಲ್ಲರೂ ಈ ಅಭಿವ್ಯಕ್ತಿವಾದಿಗಳ ದೃಷ್ಟಿಯಲ್ಲಿ 'ಹೃದಯದರಿದ್ರರು' ! 'ಪೂಜಾ ಸಂಪ್ರದಾಯದವರು' !

ಇಷ್ಟೇ ಅಲ್ಲ ! "ನಾವು ರಾಮಾಯಣವನ್ನು ಪೂಜಿಸುತ್ತೇವೆ. ಬರೀ ರಾಮಾಯಣ ಎನ್ನುವುದಿಲ್ಲ. ಶ್ರೀಮದ್ರಾಮಾಯಣ ಎನ್ನುತ್ತೇವೆ. ಕುವೆಂಪು ಅವರೂ ಅದಕ್ಕೆ 'ಶ್ರೀ ರಾಮಾಯಣ ದರ್ಶನಂ' ಎಂದಿದ್ದಾರೆ" ಎಂದು ಅವಹೇಳನ ಮಾಡಿದ್ದಾರೆ. ರಾಮಾಯಣಕ್ಕೆ ಶ್ರೀಕಾರವನ್ನು ಸೇರಿಸುವುದರಲ್ಲಿ ಸಹ ಇವರಿಗೆ ಸಹನೆಯಿಲ್ಲ.

ಸಾವಿರಾರು ವರ್ಷಗಳಿಂದ ಭಾರತದಲ್ಲಿ ನೆಲೆನಿಂತು ಸಹಸ್ರ ಶಾಖೆಗಳಿಂದ ಬೆಳೆದು ಇನ್ನೂ ತನ್ನ ಹರವನ್ನು ವಿಸ್ತರಿಸಿಬೆಳೆಯುತ್ತಲೇ ಇರುವ ಶ್ರೀ ಮದ್ರಾಮಾಯಣದ ಮಹತ್ತರವಾದ ಅಂತಃಸತ್ವವೇನೆಂಬುದರ ಅರಿವು ಇದೆಯೆ ಇವರಿಗೆ ? ಕ್ಷೇಮೇಂದ್ರ ಹೇಳುತ್ತಾನೆ–

ನಮಃ ಸರ್ವೋಪಜೀವ್ಯಂತಂ ಕವೀನಾಂ ಚಕ್ರವರ್ತಿನಂ ।
ಯಸ್ಯೇಂದು ಧವಲೈಃ ಶ್ಲೋಕೈರ್ಭೂಷಿತಾ ಭುವನತ್ರಯು ॥

– ಮುಂದಿನ ಸಮಸ್ತಕವಿಗಳಿಗೆ ಉಪಜೀವ್ಯನಾದವನು ವಾಲ್ಮೀಕಿ, ಕಾವ್ಯಮಾರ್ಗ ಪ್ರವರ್ತಕ; ಕವಿಚಕ್ರವರ್ತಿ. ಆತನ ಚಂದ್ರಧವಳ ಶ್ಲೋಕಗಳಿಂದ ಮೂರು ಲೋಕಗಳೂ ಭೂಷಿತವಾಗಿವೆ- ಎಂದಿದ್ದಾನೆ.

ಶ್ರೀ ಅರವಿಂದರು ಹೇಳುತ್ತಾರೆ:

The work of Valmiki has been an agent of almost. Incalcuble power in the moulding of the cultural mind of India it has presented to it to be loved and imitated infigures like Rama and Sita, made sodivinely and with such a revelation of reality as to become objects of enduring cult and worship........It has fashioned much of what is best and sweetest in the national character.

– The foundations of Indian culture Page 290

ಯಾವ ರಾಷ್ಟ್ರಕ್ಕಾದರೂ ಶಾಶ್ವತಕೀರ್ತಿ ತರುವಂಥ ಮಹಾಕಾವ್ಯವೊಂದು ನಮ್ಮ ರಾಷ್ಟ್ರದಲ್ಲಿ ಉದಿಸಿತೆಂಬುದು ನಮಗೆ ಹೆಮ್ಮೆಯ ಸಂಗತಿಯಾಗಬೇಡವೆ ?

ಮಾನದಂಡ ಏನಿರಬೇಕು?

ಯಾವ ರಾಷ್ಟ್ರಕ್ಕಾದರೂ ಶಾಶ್ವತಕೀರ್ತಿಯನ್ನು ತರುವ ಒಂದು ಮಹಾಕಾವ್ಯ ನಮ್ಮ ರಾಷ್ಟ್ರದಲ್ಲಿಯೇ ಉದಿಸಿತೆಂದು ಹೆಮ್ಮೆಪಡಬೇಕಾದ ಸಂದರ್ಭದಲ್ಲಿ, ಈ 'ಅಭಿವ್ಯಕ್ತಿವಾದಿ'ಗಳು, ಇಂದು ಹುಟ್ಟಿ ನಾಳೆ ಸಾಯುವ ಹತ್ತಾರು ಪುಟಗಳ ಒಂದು 'ನವ್ಯಕಾವ್ಯ'ಕ್ಕಿಂತ ಇದನ್ನು ಅಗ್ಗವಾಗಿ ಕಂಡಿದ್ದಾರಲ್ಲ, ಇವರ ಮನೋಭೂಮಿಕೆಯ ಎದೆಗಾರಿಕೆಯನ್ನು ಮೆಚ್ಚಲೇಬೇಕು.

ಪ್ರಾಚೀನ ಮಹಾಕಾವ್ಯಗಳ ನಿರೂಪಣ ಪದ್ಧತಿ ನವ್ಯಕಾವ್ಯಗಳಿಗಿಂತ ಭಿನ್ನವಾದದ್ದು. ಆ ಮಹಾಕಾವ್ಯಗಳ ವರ್ಣನಾ ಪ್ರಕಾರ, ವಸ್ತುವಿನ್ಯಾಸ, ಸಂಭಾಷಣಾ ವಿಧಾನ, ಪಾತ್ರಚಿತ್ರಣ, ಕಾವ್ಯ ಸಂಕೇತಗಳು ವಿಶಿಷ್ಟವಾದವು. ಕಾವ್ಯತಂತ್ರವೇ ಬೇರೆ. ಪ್ರಾಚೀನ ಭಾರತೀಯ ಕಾವ್ಯಮೀಮಾಂಸೆಗಳ ಮಾನದಂಡದಿಂದ ಅವನ್ನಳೆದು ಅರ್ಥಮಾಡಿಕೊಳ್ಳುವುದು ಸಂಪ್ರತಿಪನ್ನ ವಿಧಾನ. ಹಾಗಲ್ಲದೆ ವಿಭಿನ್ನವಾದ ಕಾವ್ಯರಚನಾ ತಂತ್ರದಿಂದಲೂ ಸಂಕೇತಗಳಿಂದಲೂ ಕೂಡಿದ ನವ್ಯಕಾವ್ಯಗಳ ಮಾನದಂಡದಿಂದಅಳೆಯಲು ಯತ್ನಿಸುವುದು ಎಗ್ಗತನ.

ಹಿಮಾಲಯ ಪರ್ವತವನ್ನು ಇಂಚುಪಟ್ಟಿಯಿಂದ ಅಳೆಯಲು ಹೊರಟ ಹಾಗೆ.

ಎಂದೆಂದಿಗೂ ನಿಲ್ಲುವ ಮಾನವ ಜೀವನ ಮೌಲ್ಯಗಳನ್ನು ಎತ್ತಿಹಿಡಿದು, ಉದಾತ್ತ ಪಾತ್ರಗಳ ಚಿತ್ರಣದಿಂದ ನೀತಿಯ ನೆಲಗಟ್ಟನ್ನು ನಿರೂಪಿಸುವುದು ವಾಲ್ಮೀಕಿಮುನಿಗಳ ಧ್ಯೇಯ. ಹಲಗೆ ಬಳಪಗಳೂ ಇಲ್ಲದ ಆ ಕಾಲದಲ್ಲಿ ವಿಸ್ತೃತವಾದ ಈ ಮಹಾಕಾವ್ಯವನ್ನು ಓಲೆಯ ಗರಿಗಳ ಮೇಲೆ ಕೊರೆದಿರುವುದು ಒಂದು ತಪಃಸಿದ್ಧಿ. ಜನರ ಕಲ್ಯಾಣಕ್ಕಾಗಿ, ಲೋಕೋಪಕಾರಕ್ಕಾಗಿ ಈ ಗ್ರಂಥವನ್ನು ಅವರು ವಿರಚಿಸಿದರೇ ಹೊರತು, 'ರಾಯಲ್ಟಿ' ಸಂಪಾದನೆಗಾಗಿ ಅಲ್ಲ ಎಂಬುದನ್ನು ಮೊದಲು ನೆನಪಿಡಬೇಕು.

ಶ್ರೀ ಮದ್ರಾಮಾಯಣವನ್ನು ಇಲ್ಲಸಲ್ಲದ ಕುಚೋದ್ಯದ ಮಾತುಗಳಿಂದ ಹೀಗಳೆಯುವ ಈ ವಿಚಾರವಾದಿಗಳ ಉದ್ದೇಶವಾದರೂ ಏನು ?

ಅಗ್ಗದಲ್ಲಿ ಕೀರ್ತಿಯನ್ನು ಗಳಿಸಿಕೊಳ್ಳಬೇಕೆಂಬ ಹುಬಲವೇ ಇದಕ್ಕೆ ನಿಮಿತ್ತ. ಜನತೆಯಲ್ಲಿ ಕೆಟ್ಟ ಅಭಿರುಚಿ ಹುಟ್ಟಿ ಬೆಳೆದಿದೆಯೆಂಬುದನ್ನಿವರು ಒಲ್ಲರು. ಬಯ್ಯುವ ಸಾಹಿತ್ಯದ ನಿರ್ಮಾಣ ಸುಲಭ, ಪ್ರಚಾರ ಅಧಿಕ !

ಘಟಂ ಭಿಂದ್ಯಾತ್ ಪಟಂ ಛಿಂದ್ಯಾತ್
ಕುರ್ಯಾದ್ವಾಗಾರ್ದಭಸ್ವರಂ ।
ಯೇನ ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ
ಭವೇತ್ ॥

'ಗಡಿಗೆಯನ್ನಾದರೂ ಒಡಿ, ಅರಿವೆಯನ್ನಾದರೂ ಹರಿ, ಕತ್ತೆಯಂತಾದರೂ ಕಿರುಚು ! ಯಾವುದಾದರೊಂದು ಪ್ರಕಾರದಿಂದ ಪ್ರಸಿದ್ಧ ಪುರುಷನಾಗಬೇಕು !'

ಸ್ವಾತಂತ್ರ್ಯಕ್ಕೂ ಪರಿಮಿತಿಯುಂಟು. ನಾವು ಸ್ವತಂತ್ರರೆಂದು ನೆರೆಮನೆಯ ಕಿಟಕಿಯ ಗಾಜನ್ನು ಒಡೆಯಬಹುದೇ ? ಯಾವುದನ್ನು ಒಂದು ಜನಾಂಗವು ಪೂಜ್ಯವೆಂದೂ, ಪವಿತ್ರವೆಂದೂ ನಂಬಿ ತಲೆತಲಾಂತರಗಳಿಂದ ಗೌರವಿಸುತ್ತಿದೆಯೋ ಅದನ್ನು ನಿಷ್ಕಾರಣವಾಗಿ ನಿಂದಿಸಿ ಜನತೆಯ ಮನಸ್ಸನ್ನು ನೋಯಿಸಬಹುದೊ ? ಜನರ ಸದ್ಭಾವನೆಗೆ ಹುಳಿಹಿಂಡಿ ಶಾಂತಿಯನ್ನು ಕೆದಕಿ, ಅಭಿವ್ಯಕ್ತಿಸ್ವಾತಂತ್ರ್ಯದ ನೆರಳಲ್ಲಿ ಶರಣಾಗಬಹುದೊ ? ಬಹುದಾದರೆ ಬೀದಿ ಕಾಮಣ್ಣಗಳು ಮಾಡುವ ತಪ್ಪಾದರೂ ಏನು ? ಹೆಣ್ಣುಮಕ್ಕಳನ್ನು ಚುಡಾಯಿಸಿ ತಮ್ಮ ಮನೋಗತವನ್ನು ವ್ಯಕ್ತಗೊಳಿಸುವ ಅಭಿವ್ಯಕ್ತಿಸ್ವಾತಂತ್ರ್ಯ ಅವರಿಗಿಲ್ಲವೇನು?

ವಾಗ್ ವ್ಯಭಿಚಾರ

ಭಾರತ ಜನತೆಯ ದೌರ್ಭಾಗ್ಯವಿದು. ಇವರ ಸಹನೆ ಸಹನಾತೀತವಾದ್ದರಿಂದಲೇ ಇಂದು ಯಾರು ಬೇಕಾದರೂ ನಮ್ಮ ಪವಿತ್ರಗ್ರಂಥಗಳನ್ನೂ ದೇವ ದೇವತೆಗಳನ್ನೂ ಮನಬಂದಂತೆ ಹಂಗಿಸಬಹುದಾಗಿದೆ. ಇದೇ ರೀತಿಯಲ್ಲಿ ಅನ್ಯಮತೀಯರ ಪವಿತ್ರಗ್ರಂಥಗಳನ್ನೂ ದೇವ ದೇವತೆಗಳನ್ನೂ ಗೇಲಿಮಾಡುವ ಕೆಚ್ಚು " 'ವಿಚಾರವಾದಿ'ಗಳಿಗಿದೆಯೇನು ?

ತಮ್ಮ ಪೂರ್ವಜರ ಒಂದು ಮಹಾಕೃತಿಯನ್ನು ತುಚ್ಛೀಕರಿಸಿ ಮಾತನಾಡತಕ್ಕವರೂ, ತಮ್ಮ ತಾಯಿ ಜಾರೆಯೆಂದು ಡಂಗುರ ಹೊಡೆಯತಕ್ಕವರೂ ಭಾರತದೇಶದಲ್ಲಿ ಹುಟ್ಟಬಹುದು ! ಜಗತ್ತಿನ ಇನ್ನಾವ ದೇಶದಲ್ಲಿಯೂ ಹುಟ್ಟುವುದಿಲ್ಲ. ಒಬ್ಬ ಪ್ರಾಚೀನಕವಿ ಹೇಳಿದ್ದಾನೆ –

ಸ್ವಾಧೀನೋ ರಸನಾಂಚಲಃ ಪರಿಚಿತಾಃ ಶಬ್ದಾಃ
ಕಿಯಂತಃ ಕ್ವಚಿತ್
ಕ್ಷೋಣೀಂದ್ರೋ ನ ನಿಯಾಮಕಃ ಪರಿಷದಃ
ಶಾಂತಾಃ ಸ್ವತಂತ್ರಂ ಜಗತ್ ।
ತದ್ಯೂಯಂ ಕವಯೋ ವಯಂ ವಯಮಿತಿ
ಪ್ರಸ್ತಾವಹುಂಕೃತೇ
ಸ್ವಚ್ಛಂದಂ ಪ್ರತಿಸದ್ಮ ಗರ್ಜತ 'ವಯಂ
ಮೌನವ್ರತಾಲಂಬಿನಃ' ॥

"ನಾಲಗೆ ಸ್ವಾಧೀನವಾಗಿದೆ. ಕೆಲವು ದೊಡ್ಡದೊಡ್ಡ ಶಬ್ದಗಳು ಹೇಗೋ ಪರಿಚಿತವಾಗಿವೆ. (ನಾಲಗೆಯನ್ನು) ಹತೋಟಿಯಲ್ಲಿಡುವ ರಾಜನಿಲ್ಲ. ಜನರು ಶಾಂತವಾಗಿರುತ್ತಾರೆ. ಜಗತ್ತಾದರೋ ಸ್ವತಂತ್ರವಾಗಿದೆ. ಆದ್ದರಿಂದ 'ನಾವು ಕವಿಗಳು, ನಾವು ವಿದ್ವಾಂಸರು' ಎಂಬ ಹುಂಕಾರ ವಿಜೃಂಭಿಸುತ್ತಿದೆ. ಮನೆ ಮನೆಯಲ್ಲಿಯೂ ಸ್ವೇಚ್ಛೆಯಾಗಿ ಗರ್ಜಿಸುತ್ತಿರಿ. ನಾವು ಮೌನವ್ರತವನ್ನು ಹಿಡಿದಿದ್ದೇವೆ."

ಈ ಮಾತು ಇಂದಿಗೂ ಅನ್ವಯಿಸುತ್ತದೆ. 'ವಯಂ ಮೌನವ್ರತಾಲಂಬಿನಃ' ಎಂಬುದು ನಮಗೆ ಅಂಟಿರುವ ಅಭಿಶಾಪ.

ಅಚ್ಚಿನಾಮೊಳೆಯುಂಟು ಮೆಚ್ಚಕ್ಕೆ ಹೊನ್ನುಂಟು
ಹುಚ್ಚು ಹುಚ್ಚಾಗಿ ಬರೆಯುತ್ತ ಜನತೆಯೊಳು
ಕಿಚ್ಚು ಹಚ್ಚೆಂದ ಮರ್ಯಾಜ್ಞ ॥